ಶ್ರೀಚಾಮರಾಜೋಕ್ತಿವಿಲಾಸ

ಕನ್ನಡ ರಾಮಾಯಣ

★

ಪಾತ್ರಾವಲೋಕನ

★

ಪಾತ್ರಾವಲೋಕನ

ಪಂಪಮಹಾಕವಿಯು ತನ್ನ 'ವಿಕ್ರಮಾರ್ಜುನವಿಜಯ'ದ ಕಡೆಯಲ್ಲಿ ಮಹಾಭಾರತದ ಪಾತ್ರಗಳನ್ನು ಸಿಂಹಾವಲೋಕನದಿಂದ ನೋಡುತ್ತ ಹೀಗೆಂದಿದ್ದಾನೆ:

ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ
ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ ಚಾಪವಿದ್ಯಾ।
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ-
ರ್ಮಲಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ॥

"ಛಲದಲ್ಲಿ ದುರ್ಯೋಧನನು ಮಿಗಿಲ್. ಸತ್ಯದಲ್ಲಿ ಕರ್ಣ, ಗಂಡಸುತನದಲ್ಲಿ ಭೀಮಸೇನ, ಶೌರ್ಯದಲ್ಲಿ ಶಲ್ಯ, ಧೀರೋದಾತ್ತತೆಯಲ್ಲಿ ಭೀಷ್ಮ, ಧನುರ್ವಿದ್ಯಾಬಲದಲ್ಲಿ ದ್ರೋಣ, ಸಾಹಸಕೃತ್ಯದಲ್ಲಿ ಅರ್ಜುನ, ಧರ್ಮದಲ್ಲಿ ಪರಿಶುದ್ಧಚಿತ್ತನಾದ ಧರ್ಮರಾಜ—ಇವರು ಮಿಗಿಲ್. ಇವರಿಂದ ಭಾರತವು ಲೋಕಪೂಜ್ಯವಾಗಿದೆ"

ಕವಿಯು ಸಮಗ್ರ ಮುಖ್ಯಪಾತ್ರಗಳನ್ನಾಗಲಿ, ಅವರ ಸಮಗ್ರಗುಣಗಳನ್ನಾಗಲಿ ಈ ಪದ್ಯದಲ್ಲಿ ಕೀರ್ತಿಸಿದ್ದಾನೆಂದು ತಿಳಿಯಲಾಗದು. ಭಾರತದ ಸೂತ್ರಧಾರನಾದ ಶ್ರೀಕೃಷ್ಣ, ಭಾರತಯುದ್ಧದ ಮೂಲಸಿಮಿತ್ತಳೆನಿಸಿದ ದ್ರೌಪದಿ—ಇವರನ್ನೇ ಕವಿಯು ಕೀರ್ತಿಸಿಲ್ಲ. ಕರ್ಣನ ಶೌರ್ಯ, ಔದಾರ್ಯಗಳನ್ನೂ ಅರ್ಜುನನ ನಿಷ್ಕಳಂಕವಾದ ಕೀರ್ತಿ, ನಯ, ವಿನಯಗಳನ್ನೂ ಕವಿಯು ಈ ಪದ್ಯದಲ್ಲಿ ಸೂಚಿಸಿಲ್ಲ. ಆದರೆ ದುರ್ಯೋಧನಾದಿ ಪಾತ್ರಗಳಲ್ಲಿ ಮೇಲೆದ್ದು ಕಾಣುವ ಪ್ರಮುಖಗುಣಗಳಿವು. ಇವನ್ನು ಪರಿಶೀಲಿಸುವಾಗ ಸಮಗ್ರ ಪಾತ್ರಗಳ ಸಮಗ್ರ ಗುಣಗಳೂ ನಮಗೆ ಗೋಚರವಾಗುತ್ತವೆಯೆಂದು ಕವಿಯ ಆಶಯ. ಈ ದೃಷ್ಟಿಯಿಂದ ಶ್ರೀಮದ್ರಾಮಾಯಣದ ಪಾತ್ರಗಳನ್ನು ನಾವು ಅವಲೋಕಿಸಬಹುದು. ಪಂಪಕವಿಯನ್ನು ಅನುಕರಿಸಿ ಸಿಂಹಾವಲೋಕನದಿಂದ ಹೀಗೆನ್ನಬಹುದು:

ಚಲದೊಳ್ ದೈತ್ಯೇಶ್ವರಂ ನನಿ ಯೊಳಿನತನಯಂ ಗಂಡಿನೊಳ್ ವಾಯುಪುತ್ರಂ
ಬಲದೊಳ್ ಶಕ್ರಾರಿಯತ್ಯುನ್ನತಿಯು ಮಹಿಮೆಯೊಳ್ ಕೌಶಿಕಂ ಚಾಪವಿದ್ಯಾ-।
ಬಲದೊಳ್ ಸೌಮಿತ್ರಿ ಸೌಶೀಲ್ಯದೊಳವನಿಜೆ ಸೌಭ್ರಾತ್ರದೊಳ್ ಕೈಕಯೀಜಂ
ಲಲಿತಂ ಕಾರುಣ್ಯಪೂರಂ ಮಿಗಿಲಮಿತಬಲಂ ಧರ್ಮದೊಳ್ ರಾಮಚಂದ್ರಂ॥

"ಛಲದಲ್ಲಿ ರಾವಣನು ಮಿಗಿಲ್. ಸತ್ಯದಲ್ಲಿ ಸುಗ್ರೀವ, ಪರಾಕ್ರಮದಲ್ಲಿ ಹನುಮಂತ, ಶೌರ್ಯದಲ್ಲಿ ಇಂದ್ರಜಿತು, ತಪೋಮಹಿಮೆಯಲ್ಲಿ ವಿಶ್ವಾಮಿತ್ರ, ಧನುರ್ವಿದ್ಯಾಬಲದಲ್ಲಿ ಲಕ್ಷ್ಮಣ, ಸೌಶೀಲ್ಯದಲ್ಲಿ ಸೀತೆ, ಭ್ರಾತೃವಾತ್ಸಲ್ಯದಲ್ಲಿ ಭರತ, ಧರ್ಮದಲ್ಲಿ ಶ್ರೀರಾಮ—ಇವರು ಮಿಗಿಲ್"

೧. ಚಲದೊಳ್ ದೈತ್ಯೇಶ್ವರಂ

ರಾಕ್ಷಸನಾಯಕರಲ್ಲಿ ರಾವಣನು ಅಗ್ರಗಣ್ಯ. ಅವನ ವೈಭವ, ದರ್ಪ, ಸಾಹಸ, ಪರಾಕ್ರಮ, ವಿದ್ಯೆ, ತಪಸ್ಸು, ಕರ್ಮನಿಷ್ಠತೆ—ಎಲ್ಲವೂ ಉನ್ನತ ಮಟ್ಟದವು. ಅವನ ಛಲ ಪ್ರತಿನಾಯಕನಲ್ಲಿ

ನಿರೀಕ್ಷಿಸಬೇಕಾದ ಒಂದು ವಿಶಿಷ್ಟ ಗುಣ. ಮಹಾಭಾರತದ ದುರ್ಯೋಧನನಲ್ಲಿಯೂ ಈ ಛಲ ಅಪ್ರತಿಮವಾಗಿತ್ತು. ಒಂದು ಸಲ ತಪ್ಪು ದಾರಿಯಲ್ಲಿ ಹೆಜ್ಜೆಯಿಟ್ಟ ಮೇಲೆ, 'ಶತಾಯುರ್ವಾ ಗತಾಯುರ್ವಾ' ಎಂಬ ದಿಟ್ಟತನದಿಂದ ಕಡೆಯವರೆಗೆ ಹೋರಾಡುವ ಗುಣ ಛಲವೆನಿಸುತ್ತದೆ.

ವಾಲ್ಮೀಕಿಮುನಿಗಳು ರಾವಣನ ವೈಭವಾದಿಗಳನ್ನು ವರ್ಣಿಸುವಾಗ ಬಾಯಿತುಂಬ ಹೊಗಳಿದ್ದಾರೆ. ಅತ್ಯುನ್ನತ ಸ್ಥಾನದಲ್ಲಿ ಅವನಿಗೆ ಪ್ರತಿನಾಯಕನ ಪಟ್ಟವನ್ನು ಕಟ್ಟಿದ್ದಾರೆ. ಹಾಗೆ ವರ್ಣಿಸುವಾಗ ಮಹಾಕವಿಯ ಹೃದ್ಗತವಾದ ಆಶಯ ಒಂದುಂಟು. ಆ ವರ್ಣನೆಗಳೆಲ್ಲವೂ ರಾವಣನ ಸಂಹಾರಿಯಾದ ಶ್ರೀರಾಮನ ಧೀರೋದಾತ್ತ ಗುಣಗಳ ಪ್ರಶಂಸೆಯಲ್ಲಿ ಪರ್ಯವಸಾನ ಹೊಂದುತ್ತವೆ. ಶ್ರೀರಾಮನ ಅಜರಾಮರವಾದ ಕೀರ್ತಿಮಂಟಪದ ಆಧಾರಸ್ತಂಭ ರಾವಣನೇ. ವೈದೇಹಿಯ ಸೌಶೀಲ್ಯವೆಂಬ ಸ್ವರ್ಣರೇಖೆಗೆ ರಾವಣನೇ ನಿಕಷೋಪಲ.

ಬ್ರಹ್ಮದೇವನ ಮಾನಸಪುತ್ರ ಪುಲಸ್ತ್ಯ. ಅವನು ಸಪ್ತರ್ಷಿಗಳಲ್ಲೊಬ್ಬ. ಅವನ ಮಗ ವಿಶ್ರವಸ್ಸು ಮಹಾತಪಸ್ವಿ. ಅವನ ಪುತ್ರ ವೈಶ್ರವಣ—ಕುಬೇರ. ವಿಶ್ರವಸ್ಸಿನ ಇನ್ನೊಬ್ಬ ಪತ್ನಿಯಾದ ಕೈಕಸಿಯಲ್ಲಿ ಜನಿಸಿದವನು ರಾವಣ. ವೈಶ್ರವಣ-ರಾವಣ ಶಬ್ದಗಳಲ್ಲಿ ಶಬ್ದಸಾದೃಶ್ಯ ಉಂಟು. ವಿಶ್ರವಸ್ ಶಬ್ದದಿಂದ ರಾವಣ ಶಬ್ದ ಹುಟ್ಟಿದೆಯೆಂದು ಕೆಲವು ಶಾಬ್ದಿಕರ ಅಭಿಪ್ರಾಯ. ರಾಮಾಯಣದಲ್ಲಿ ರಾವಣ ಶಬ್ದದ ವ್ಯುತ್ಪತ್ತಿಯನ್ನು ಬೇರೆಯಾಗಿ ಹೇಳಿದೆ. ಅವನ ಹುಟ್ಟು ಹೆಸರು ದಶಗ್ರೀವ. ಕೈಲಾಸಪರ್ವತವನ್ನೆತ್ತಲು ಹೋದಾಗ ಅವನ ಕೈಗಳು ಪರ್ವತದ ಕೆಳಗೆ ಸಿಕ್ಕಿಕೊಂಡವು. ಬಿಡಿಸಿಕೊಳ್ಳಲಾರದೆ ದಶಗ್ರೀವನು ಗಟ್ಟಿಯಾಗಿ ಅರಚಿಕೊಂಡನಂತೆ. ಕಡೆಗೆ ಶಿವನು ಪ್ರಸನ್ನನಾಗಿ "ದಶಗ್ರೀವ, ನೀನು ಈ ಕೈಲಾಸದ ಕೆಳಗೆ ಸಿಕ್ಕಿಕೊಂಡು ರಾವವನ್ನು (ಶಬ್ದವನ್ನು) ಮಾಡಿದೆ. ನಿನ್ನ ರಾವದಿಂದ ಜಗತ್ತು ತಲ್ಲಣಿಸಿತು. ನಿನಗೆ ರಾವಣನೆಂದು ಹೆಸರಾಗಲಿ!" ಎಂದನಂತೆ. ಅಲ್ಲಿಂದ ದಶಗ್ರೀವನಿಗೆ ರಾವಣನೆಂಬ ಹೆಸರು ಪ್ರಸಿದ್ಧವಾಯಿತು. ಈ ಕಥೆ ಉತ್ತರಕಾಂಡದ ಹದಿನಾರನೆಯ ಸರ್ಗದಲ್ಲಿ ಬಂದಿದೆ.

ಹನುಮಂತನು ಸೀತೆಯನ್ನು ಹುಡುಕುತ್ತ ರಾವಣನ ಅಂತಃಪುರಕ್ಕೆ ಹೋದಾಗ, ರಾವಣನು ನಿದ್ರಾಲೋಲನಾಗಿ ಪವಡಿಸಿದ್ದ. ಅವನ ಕೈಗಳು ಹಾಸಿಗೆಯ ಮೇಲೆ ಚಾಚಿದ್ದವು. ಅವು ಎಂಥ ಕೈಗಳು?

ಯಕ್ಷ ಪನ್ನಗ ಗಂಧರ್ವ ದೇವದಾನವರಾವಿಣೌ ॥

"ಯಕ್ಷರು, ಪನ್ನಗರು, ಗಂಧರ್ವರು, ದೇವತೆಗಳು ಮತ್ತು ದಾನವರನ್ನು ಕಿರಿಚಿಕೊಳ್ಳುವಂತೆ ಮಾಡಿದ ಕೈಗಳು!" ರಾವಣನೆಂದರೆ ಜಗತ್ತಿಗೆ ರಾವು ಹಿಡಿಸಿದವನು.

ಹನುಮಂತನು ಮೊದಲು ನೋಡಿದ್ದು ನಿದ್ರಿಸುತ್ತಿದ್ದ ರಾವಣನನ್ನು. ಆಗಿನ ರಾವಣನ ವರ್ಣನೆ ಅವನ ವ್ಯಕ್ತಿತ್ವವನ್ನು ಸ್ವಲ್ಪ ಮಟ್ಟಿಗೆ ಪರಿಚಯ ಮಾಡಿಕೊಡುತ್ತದೆ :

"ರಾವಣನು ಮಲಗಿದ್ದ ಸುವರ್ಣನಿರ್ಮಿತವಾದ ಮಂಚವು ಸೂರ್ಯನಂತೆ ಪ್ರಜ್ವಲಿಸುತ್ತಿತ್ತು. ಸುತ್ತಲೂ ಯಂತ್ರನಿರ್ಮಿತ ಪ್ರತಿಮೆಗಳು ಬೀಸಣಿಗೆಯಿಂದ ಗಾಳಿಹಾಕುತ್ತಿದ್ದವು. ಸುಗಂಧದ್ರವ್ಯದ ಪರಿಮಳ ಹರಡಿತ್ತು. ಮಂಚದ ಸುತ್ತಲೂ ಸುಗಂಧಿಯಾದ ಹೂಮಾಲೆಗಳು ತೂಗಾಡುತ್ತಿದ್ದವು. ಸುಪ್ಪತ್ತಿಗೆಯ ಮೇಲೆ ಶ್ರೇಷ್ಠವಾದ ಜಮಖಾನೆಗಳನ್ನೂ ಉಣ್ಣೆಯ ಬಟ್ಟೆಗಳನ್ನೂ ಹಾಸಿದ್ದರು. ಅದರ ಮೇಲೆ ರಾವಣನು ಚಿನ್ನದ ಜರತಾರಿಯುಳ್ಳ ರೇಶ್ಮೆಯ ದುಕೂಲವನ್ನುಟ್ಟು ಪವಡಿಸಿದ್ದನು. ಕಿವಿಯಲ್ಲಿ ಸುವರ್ಣಕುಂಡಲಗಳು ಪ್ರಜ್ವಲಿಸುತ್ತಿದ್ದವು. ಮೈಗೆ ರಕ್ತ

ಚಂದನವನ್ನು ಬಳಿದುಕೊಂಡಿದ್ದನು. ರೂಪವಂತನೂ ದಿವ್ಯಾಭರಣಧಾರಿಯೂ ಆದ ರಾವಣನು ಪುಷ್ಪಿತವೃಕ್ಷಗಳಿಂದ ಶೋಭಿಸುವ ಮಂದರಪರ್ವತದಂತೆ ಶೋಭಿಸುತ್ತಿದ್ದನು. ಚಿನ್ನದ ಭುಜ ಕೀರ್ತಿಗಳಿಂದ ಅಲಂಕೃತವಾಗಿ ಹಾಸಿಗೆಯ ಮೇಲೆ ಚಾಚಿದ ಅವನ ಬಾಹುಗಳು ಇಂದ್ರಧ್ವಜಗಳಂತೆ ಶೋಭಿಸುತ್ತಿದ್ದವು. ಆ ಬಾಹುಗಳ ಒಂದು ಪಾರ್ಶ್ವದಲ್ಲಿ ಐರಾವತದ ಕೋರೆಯ ಹಲ್ಲಿನಿಂದಾದ ಗಾಯ, ಇನ್ನೊಂದು ಕಡೆ ವಜ್ರಾಯುಧದ ಹೊಡೆತದಿಂದಾದ ಗುರುತು, ಇನ್ನೊಂದು ಜಾಗದಲ್ಲಿ ವಿಷ್ಣುವಿನ ಚಕ್ರಾಯುಧದ ಪೆಟ್ಟಿನಿಂದಾದ ಕಲೆ! ಪುಷ್ಟವಾಗಿಯೂ ಬಲಾಢ್ಯವಾಗಿಯೂ ಮೈಯ ಅಳತೆಗೆ ತಕ್ಕುದಾಗಿಯೂ ಇದ್ದ ಆ ತೋಳುಗಳು ಶುಭಲಕ್ಷಣಯುಕ್ತವಾದ ಉಗುರುಗಳಿಂದಲೂ ಹೆಬ್ಬೆರಳುಗಳಿಂದಲೂ ಶೋಭಿಸುತ್ತಿದ್ದವು. ಆನೆಯ ಸೊಂಡಿಲುಗಳಂತಿದ್ದ ಆ ಬಾಹುಗಳು ಐದು ಹೆಡೆಯ ಸರ್ಪಗಳಂತೆ ಹಾಸಿಗೆಯ ಮೇಲೆ ಚಾಚಿಕೊಂಡಿದ್ದವು. ದಿವ್ಯಚಂದನಲಿಪ್ತವಾದ ಆ ಭುಜ ಗಳನ್ನು ಓವ್ಯಸ್ತ್ರೀಯರು ಒತ್ತಿ ಸೇವಿ ಉಪಚರಿಸಿದ್ದರು.

ಮೇಘದಂತೆ ಕಪ್ಪಾಗಿದ್ದ ರಾವಣನು ಮಲಗಿದ್ದಾಗ ಉದ್ದಿನ ರಾಶಿಯನ್ನು ಪೇರಿಸಿದಂತೆ ಕಾಣಿಸುತ್ತಿತ್ತು! ಶುಭ್ರವರ್ಣದ ಮೇಲುಹಾಸಿಗೆಯಲ್ಲಿ ಅವನು ಮಲಗಿದ್ದಾಗ, ಗಂಗಾಪ್ರವಾಹದಲ್ಲಿ ಇಳಿದ ಗಜರಾಜನಂತೆ ತೋರುತ್ತಿದ್ದನು."

(ವಾಲ್ಮೀಕಿ ರಾಮಾಯಣ, ಸುಂದರಕಾಂಡ, ಸರ್ಗ ೧೦)

ಹನುಮಂತನು ಬ್ರಹ್ಮಾಸ್ತ್ರದಿಂದ ಬಂಧಿತನಾಗಿ ರಾಜಸಭೆಗೆ ತರಲ್ಪಟ್ಟಾಗ, ರಾವಣನು ಮೇರು ಪರ್ವತದ ಮೇಲಿರುವ ಕಾಲಮೇಘದಂತೆ ಸಿಂಹಾಸನದಲ್ಲಿ ಕುಳಿತಿದ್ದನು. ರಾವಣನ ಅದ್ಭುತತೇಜಸ್ಸಿಗೆ ಮಾರುಹೋದ ಹನುಮಂತನ ಬಾಯಿಂದ ಈ ಮಾತು ಹೊರಟಿತು :

ಅಹೋ ರೂಪಮಹೋ ಧೈರ್ಯಮಹೋ ಸತ್ತ್ವಮಹೋ ದ್ಯುತಿಃ ।
ಅಹೋ ರಾಕ್ಷಸರಾಜಸ್ಯ ಸರ್ವಲಕ್ಷಣಯುಕ್ತತಾ ॥
ಯದ್ಯಧರ್ಮೋ ನ ಬಲವಾನ್ ಸ್ಯಾದಯಂ ರಾಕ್ಷಸೇಶ್ವರಃ ।
ಸ್ಯಾದಯಂ ಸುರಲೋಕಸ್ಯ ಸಶಕ್ರಸ್ಯಾಪಿ ರಕ್ಷಿತಾ ॥

(ಸುಂದರ. ೪೯—೧೭, ೧೮)

"ಅಬ್ಬಾ! ಈತನ ರೂಪವೇನು! ಧೈರ್ಯವೇನು! ತೇಜಸ್ಸೇನು! ಅಬ್ಬಾ! ಈ ರಾಕ್ಷಸೇಶ್ವರನು ಸಮಸ್ತ ರಾಜಲಕ್ಷಣಗಳಿಂದಲೂ ಕೂಡಿದ್ದಾನೆ. ಇವನು ದೇವತೆಗಳಿಗೆ ಮಾತ್ರವಲ್ಲ, ದೇವೇಂದ್ರನಿಗೂ ಅಧಿಪತಿಯಾಗಬಲ್ಲ; ದೇವಲೋಕವನ್ನೂ ಆಳಬಲ್ಲ. ಆದರೆ, ಯದ್ಯಧರ್ಮೋ ನ ಬಲವಾನ್!"

ಅಯಂ ಹ್ಯುತ್ಸಹತೇ ಕ್ರುದ್ಧಃ ಕರ್ತುಮೇಕಾರ್ಣವಂ ಜಗತ್ ॥

"ಈತನು ಕ್ರುದ್ಧನಾದರೆ ಜಗತ್ತನ್ನೇ ಸಮುದ್ರದಲ್ಲಿ ಮುಳುಗಿಸಬಲ್ಲನು."

ರಾವಣನು ಎಂಥ 'ಅಸಾಧ್ಯಪಿಂಡ' ಎಂಬುದರ ಕಲ್ಪನೆಯು ಶ್ರೀರಾಮನಿಗೂ ಇದ್ದಂತೆ ತೋರುವುದಿಲ್ಲ. ಅವನು ಮೊದಲನೆಯ ಸಲ ರಾವಣನನ್ನು ರಣರಂಗದಲ್ಲಿ ಕಂಡಾಗ—

ಅಹೋ ದೀಪ್ತೋ ಮಹಾತೇಜಾ ರಾವಣೋ ರಾಕ್ಷಸೇಶ್ವರಃ ।
ಆದಿತ್ಯ ಇವ ದುಷ್ಪ್ರೇಕ್ಷ್ಯೋ ರಶ್ಮಿಭಿರ್ಭಾತಿ ರಾವಣಃ ॥
ಸುವ್ಯಕ್ತಂ ಲಕ್ಷ್ಯತೇ ಹ್ಯಸ್ಯ ರೂಪಂ ತೇಜಃಸಮಾವೃತಮ್ ।
ದೇವದಾನವವೀರಾಣಾಂ ವಪುರ್ನೈವಂವಿಧಂ ಭವೇತ್ ॥

(ಯುದ್ಧ. ೫೯—೨೬, ೨೭)

ಎಂದು ಉದ್ಗರಿಸಿದ್ದಾನೆ,

"ಅಬ್ಬಾ! ರಾಕ್ಷಸೇಶ್ವರನಾದ ಈ ರಾವಣ ಎಷ್ಟು ದೀಪ್ತಿಶಾಲಿ! ಎಂತಹ ತೇಜಸ್ವಿ! ಕಣ್ತೆರೆದು ಇವನನ್ನು ನೋಡುವುದೇ ಅಶಕ್ಯವಾಗಿದೆಯಲ್ಲ! ಸೂರ್ಯನಂತೆ ಕಣ್ಣು ಕುಕ್ಕುತ್ತಿದ್ದಾನೆ. ಈತನ ಸುತ್ತಲೂ ತೇಜಸ್ಸು ಉಕ್ಕಿ ಹರಿಯುವಂತೆ ಕಾಣುತ್ತಿದೆ. ಯಾವ ದೇವತೆಗಳಿಗೂ ದಾನವವೀರರಿಗೂ ಈ ಬಗೆಯ ಮೈಕಟ್ಟು ಇರಲಿಕ್ಕಿಲ್ಲ!"

ಶೌರ್ಯ, ಸಂಪತ್ತುಗಳೆಲ್ಲವೂ ರಾವಣನಿಗೆ ತಪಸ್ಸಿನಿಂದ ಲಭಿಸಿದವು. ಅವನು ತಪಸ್ವಿಯ ಮಗ. ಪಿತ್ರಾರ್ಜಿತವಾಗಿ ಯಾವ ರಾಜ್ಯವೂ ಅವನಿಗೆ ದೊರೆಯಲಿಲ್ಲ. ಅವನ ತಾಯಿ ಕೇಕಸಿ ಕುಬೇರನ ವೈಭವವನ್ನು ರಾವಣನಿಗೆ ತೋರಿಸಿ "ಮಗನೆ, ಕುಬೇರನು ನಿನ್ನ ಮಲತಾಯಿಯ ಮಗ. ಅವನ ಸಂಪತ್ತನ್ನು ನೋಡು! ನೀನು ಅವನ ತಮ್ಮನಾದರೂ ಎಷ್ಟು ಬಡತನದಲ್ಲಿದ್ದೀಯೆ! ಕುಬೇರನ ಯೋಗ್ಯತೆಯನ್ನಾದರೂ ಪಡೆ, ಮಗನೆ!" ಎಂದಳು. ರಜೋಗುಣದ ಮೂರ್ತಿಯಾದ ರಾವಣನು ಕೂಡಲೆ "ಅಮ್ಮ, ಅವನ ಯೋಗ್ಯತೆ? ಅವನಿಗಿಂತ ಅಧಿಕನಾಗುವೆನು!" ಎಂದು ಮಾತುಕೊಟ್ಟನು.

ಮಾತಿನಂತೆ ನಡೆದ ಮಹಾಬಲವಾದಿ ರಾವಣ. ಉಗ್ರತಪಸ್ಸನ್ನಾಚರಿಸಿದ ಮಹಾತಪಸ್ವಿ ಅವನು. ತಪೋಬಲದಿಂದ ದೀರ್ಘಾಯುಷ್ಯವನ್ನೂ ದೇವದಾನವಾದಿಗಳಿಂದ ಅವಧ್ಯತ್ವವನ್ನೂ ಪಡೆದ ತೇಜಸ್ವಿ ಅವನು. ಲಂಕೆಗೆ ಧಾಳಿಯಿಟ್ಟು ಕುಬೇರನನ್ನು ಓಡಿಸಿ ಪುಷ್ಪಕವನ್ನು ಕಿತ್ತುಕೊಂಡು ತನ್ನ ಪ್ರಭುತ್ವವನ್ನು ಅಲ್ಲಿ ಸ್ಥಾಪಿಸಿದನು. ರಾವಣನಿಗೆ ತಾಯಿಯ ವಂಶದಿಂದ ರಜಸ್ತಮೋಗುಣಗಳ ಅತಿರೇಕ ಪ್ರಾಪ್ತವಾಗಿತ್ತು. ತಂದೆಯ ಕಡೆಯಿಂದ ಸತ್ತ್ವಗುಣದ ಅಂಶವೂ ಬಂದಿತ್ತು. ಅವನು ತಪಸ್ವಿಮಾತ್ರನಲ್ಲದೆ ಕರ್ಮನಿಷ್ಠ; ಆಹಿತಾಗ್ನಿ; ವೇದಾಂತಶಾಸ್ತ್ರವನ್ನು ಬಲ್ಲವನು. ವಿಭೀಷಣನೇ ರಾವಣನ ವಿಷಯವಾಗಿ—

ಏಷೋಽಽಹಿತಾಗ್ನಿಶ್ಚ ಮಹಾತಪಾಶ್ಚ ।
ವೇದಾಂತಗಃ ಕರ್ಮಸು ಚಾಗ್ರ್ಯವೀರ್ಯಃ ॥

(ಯುದ್ಧ. ೧೧೨—೨೪)

ಎಂದು ಹೇಳಿದ್ದಾನೆ.

ರಾವಣನು ಶಿವನೊಬ್ಬನನ್ನು ಬಿಟ್ಟು ದಿಕ್ಪಾಲಕರನ್ನೆಲ್ಲಾ ಜಯಿಸಿದ. ಅಮರಾವತಿಯನ್ನು ಕೊಳ್ಳೆಹೊಡೆದ. ಕೊಳ್ಳೆಹೊಡೆದು ತಂದ ಐಶ್ವರ್ಯವನ್ನು ಲಂಕೆಯ ಅಭಿವೃದ್ಧಿಗಾಗಿ ವಿನಿಯೋಗಿಸಿದ. ಲಂಕಾನಗರದ ವರ್ಣನೆಯನ್ನೂ, ಯುದ್ಧಕಾಂಡದ ಸಂದರ್ಭವನ್ನೂ ಪರಿಶೀಲಿಸಿದರೆ, "ಲಂಕಾರಾಜ್ಯವು ಸಂಪತ್ಸಮೃದ್ಧವಾಗಿತ್ತು. ಪ್ರಜೆಗಳೆಲ್ಲರೂ ಸುಖದಿಂದಿದ್ದರು. ಅವರೆಲ್ಲರೂ ರಾವಣನಲ್ಲಿ ರಾಜನಿಷ್ಠೆಯುಳ್ಳವರಾಗಿದ್ದರು. ಸಕಲ ರಾಕ್ಷಸರೂ ತಮ್ಮ ಪ್ರಭುವಿಗಾಗಿ ಪ್ರಾಣವನ್ನು ತೆರಲು ಸಿದ್ಧರಾಗಿದ್ದರು" ಎಂಬುದು ಸ್ಪಷ್ಟವಾಗುತ್ತದೆ. ರಾವಣನು ದೇಶಾಂತರದ ಪ್ರಜೆಗಳಿಗೆ ಹಿಂಸೆ ಕೊಟ್ಟಿರಬಹುದು. ತನ್ನ ವಿರೋಧಿಗಳನ್ನು ದಮನ ಮಾಡಿರಬಹುದು. ಆದರೆ ತನ್ನನ್ನು ನಂಬಿದ ಪ್ರಜೆಗಳಿಗೆ ಅವನು ಹಿಂಸೆ ಕೊಡಲಿಲ್ಲ. ತನ್ನ ರಾಜ್ಯಕ್ಕೆ ಒದಗುವ ಸಕಲ ವಿಪತ್ತುಗಳನ್ನು ಭುಜಬಲದಿಂದ ತಡೆದಿದ್ದನು. ಸಮುದ್ರಮಧ್ಯದಲ್ಲಿದ್ದ ಅವನ ರಾಜ್ಯಕ್ಕೆ ಉತ್ತರದಿಕ್ಕಿನಿಂದ ಅಪಾಯ ಸಂಭವಿಸುವ ಭಯವಿತ್ತು. ದಂಡಕಾರಣ್ಯದಲ್ಲಿ ಖರನನ್ನು ಸೇನಾಬಲದೊಡನೆ ಸ್ಥಾಪಿಸಿದ್ದು ಅವನ ರಾಜಕೀಯ ಪ್ರಜ್ಞೆಗೆ ಒಂದು ಸಾಕ್ಷಿ.

ರಾವಣನಲ್ಲಿದ್ದ ಬಲವತ್ತರವಾದ ಅಧರ್ಮ ಯಾವುದು? ಅದು ಪರಸ್ತ್ರೀಹರಣ. ರಾವಣನು ಕಾಮಲಂಪಟ. ಬಲಾತ್ಕಾರದಿಂದ ಬಹುಮಂದಿ ತರುಣಿಯರನ್ನು ಅವನು ಅಪಹರಿಸಿ

ತಂದಿದ್ದನು. ರಂಭೆ, ಪುಂಜಿಕಸ್ಥಲೆಯರನ್ನು ಬಲಾತ್ಕರಿಸಿದ್ದನು. ವೇದವತಿಯ ಮಾನಭಂಗಕ್ಕೆ ಪ್ರಯತ್ನಿಸಿದ್ದನು. ಈ ಕಾಮಲಂಪಟತೆ ಅವನಲ್ಲಿದ್ದ ಒಂದು ದೊಡ್ಡ ದೌರ್ಬಲ್ಯ. ಈ ದೌರ್ಬಲ್ಯವನ್ನು ಶೂರ್ಪಣಖಿ ಕಂಡುಕೊಂಡಿದ್ದಳು! ಆಪಳು ತನ್ನ ಸೇಡು ತೀರಿಸಿಕೊಳ್ಳಲು ಮೊದಲು ಖರನನ್ನು ಎತ್ತಿಗಟ್ಟಿದಳು. ಅವನು ಸೇನಾಸಹಿತ ನಿರ್ನಾಮವಾದನು. ಅನಂತರ ನಿರ್ವಾಹವಿಲ್ಲದೆ ರಾವಣನ ಬಳಿಗೆ ಬಂದು ಸೀತೆಯ ಸೌಂದರ್ಯವನ್ನು ಬಾಯಿತುಂಬ ಹೊಗಳಿದಳು. ಸೀತೆಯನ್ನು ರಾವಣನಿಗೋಸ್ಕರ ಅಪಹರಿಸಿ ತರಲು ತಾನು ಪ್ರಯತ್ನಿಸಿದೆನೆಂದೂ ಅದರಿಂದ ಅನರ್ಥ ಸಂಭವಿಸಿತೆಂದೂ ಸುಳ್ಳು ಹೇಳಿದಳು. ಸೀತೆಯ ಸೌಂದರ್ಯವು ರಾವಣನ ಬುದ್ಧಿಯನ್ನು ಕೆಡಿಸಿತು.

ಅಹಂಕಾರಿಯೂ ಅಭಿಮಾನಶಾಲಿಯೂ ಆದ ರಾವಣನಿಗೆ ಕಳ್ಳತನದಿಂದ ಸೀತೆಯನ್ನು ಅಪಹರಿಸುವ ಬುದ್ಧಿ ಬಂದುದು ಸೋಜಿಗವೆನಿಸುತ್ತದೆ. ಅವನು ಶ್ರೀರಾಮನ ಪರಾಕ್ರಮವನ್ನು ಶೂರ್ಪಣಖಿಯ ಬಾಯಿಂದ ಕೇಳಿದ್ದನು. ಖರನು ಹತನಾದ ಕಥೆ ತಿಳಿದಿತ್ತು. ಯುದ್ಧಕ್ಕೆ ತೊಡಗಿದರೆ ಪರಿಣಾಮವೇನಾಗುವುದೋ ? ಮೊದಲು ಸೀತೆಯನ್ನು ದಕ್ಕಿಸಿಕೊಳ್ಳೋಣ, ಅನಂತರ ಪರಿಣಾಮವನ್ನೆದುರಿಸೋಣ — ಎಂಬುದು ಅವನ ಆಲೋಚನೆಯೆಂದು ತೋರುತ್ತದೆ. ರಾವಣನ ಕೀರ್ತಿಗೆ, ಅವನ ಅಹಂಕಾರ ಮಮಕಾರಗಳಿಗೆ ಸೀತಾಪಹರಣವು ಅನುರೂಪವಾದ ಕಾರ್ಯವಾಗಲಿಲ್ಲ.

ರಾವಣನ ಛಲ - ಹಠಮಾರಿತನ ಅವನಲ್ಲಿ ಪ್ರಬಲವಾಗಿದ್ದ ದುರ್ಗುಣ. ಅವನು ಹಿಡಿದದ್ದು ಅಧರ್ಮಮಾರ್ಗವೆಂಬುದು ಅವನಿಗೆ ತಿಳಿದಿತ್ತು. ಹಲವಾರು ಜನ ಅವನಿಗೆ ಬುದ್ಧಿವಾದ ಹೇಳಿದರು. ಯಾರ ಉಪದೇಶವನ್ನೂ ಅವನು ಕಿವಿಗೆ ಹಾಕಿಕೊಳ್ಳಲಿಲ್ಲ. ಮಾರೀಚ, ಹನುಮಂತ, ವಿಭೀಷಣ, ಶುಕಸಾರಣರು, ಮಾಲ್ಯವಂತ, ಅಂಗದ, ಕುಂಭಕರ್ಣ, ಮಂತ್ರಿವೃದ್ಧನಾದ ಅವಿದ್ಧ, ತಾಯಿ ಕೈಕಸಿ—ಇವರೆಲ್ಲರೂ ರಾವಣನು ಹಿಡಿದ ಹಾದಿ ತಪ್ಪೆಂದು ಸಾರಿಸಾರಿ ಹೇಳಿದರು. ಅವನು ತನ್ನ ಛಲವನ್ನು ಬಿಡಲಿಲ್ಲ. ಅವನು ಕಾಮಾಂಧನಾಗಿ ದುರಭಿಮಾನದ ಶಿಖರದ ಮೇಲೆ ಕುಳಿತಿದ್ದ. ಮಂತ್ರಾಲೋಚನೆಗಾಗಿ ಅವನು ಸಭೆ ಸೇರಿಸಿದ್ದುಂಟು. ಎಲ್ಲರೂ ಅವನ ಮಾತಿನ ನೇರಕ್ಕೆ ಮಂತ್ರಾಲೋಚನೆ ಹೇಳಬೇಕು. ಸ್ವತಂತ್ರವಾದ ಅಭಿಪ್ರಾಯವನ್ನು ಯಾರೂ ಸೂಚಿಸುವ ಹಾಗಿರಲಿಲ್ಲ. "ಹೀಗೆಯೇ ಎರಡು ಸೀಳಾಗಿಹೋದೇನು. ಆದರೆ ಯಾರಿಗೂ ನಾನು ತಲೆ ಬಾಗಲಿಕ್ಕಿಲ್ಲ! ಇದು ನನ್ನ ಸಹಜ ದೋಷ. ಸ್ವಭಾವವನ್ನು ಮೀರಲು ಸಾಧ್ಯವಿಲ್ಲ" ಎಂಬುದು ಅವನ ನಿಶ್ಚಯ.

ದ್ವಿಧಾ ಭಜ್ಯೇಯಮಪ್ಯೇವಂ ನ ನಮೇಯಂ ತು ಕಸ್ಯಚಿತ್ ।
ಏಷ ಮೇ ಸಹಜೋ ದೋಷಃ ಸ್ವಭಾವೋ ದುರತಿಕ್ರಮಃ ॥

(ಯುದ್ಧ. ೩೬-೧೧)

ನೈವ ಸೀತಾಂ ಪ್ರದಾಸ್ಯಾಮಿ ಸರ್ವಲೋಕಭಯಾದಪಿ ॥

(ಯುದ್ಧ. ೩೦-೧೫)

"ಸಮಸ್ತಲೋಕವೇ ನನ್ನನ್ನು ಹೆದರಿಸಿದರೂ ಸೀತೆಯನ್ನು ಒಪ್ಪಿಸುವುದಿಲ್ಲ" ಎಂಬುದು ಅವನ ಹಠ.

ಮಹಾಯುದ್ಧ ಪ್ರಾರಂಭವಾಯಿತು. ರಾವಣನ ಎಣಿಕೆಯೆಲ್ಲ ತಲೆಕೆಳಗಾಯಿತು. ಅತಿರಥ ಮಹಾರಥರು ಒಬ್ಬೊಬ್ಬರಾಗಿ ಉರುಳಿದರು. ಪ್ರಹಸ್ತ, ಅತಿಕಾಯ, ಕುಂಭಕರ್ಣರು ಮಡಿದರು.

ರಾವಣನ ಜಯಾಕಾಂಕ್ಷೆಗೆ ಕೇಂದ್ರಸ್ಥಾನವಾಗಿದ್ದ ಇಂದ್ರಜಿತುವೂ ಹತನಾದನು. ಶ್ರೀರಾಮನ ಸಾಮರ್ಥ್ಯ ಏನೆಂಬುದು ಆಗ ರಾವಣನಿಗೆ ತಿಳಿಯಿತು. ತಾನು ಎಣಿಸಿದ್ದಂತೆ ರಾಮನು ಒಬ್ಬ ಕುಮಾನುಷನಲ್ಲವೆಂದು ಅರಿವಾಯಿತು. 'ಅಂಗುಲ್ಯಾ ನ ಸಮೋ ರಾಮಃ' ಎಂಬ ದರ್ಪೋಕ್ತಿ ಶಿಥಿಲವಾಯಿತು. 'ಅಹೋ ನು ಬಲವಾನ್ ರಾಮಃ' ಎಂಬ ಉದ್ಗಾರ ತಾನಾಗಿ ಅವನ ಬಾಯಿಂದ ಹೊರಬಿತ್ತು.

ಸಾಗರಸ್ಯೇವ ಮೇ ವೇಗೋ ಮಾರುತಸ್ಯೇವ ಮೇ ಗತಿಃ ।
ನ ಹಿ ದಾಶರಥಿರ್ವೇದ ತೇನ ಮಾಂ ಯೋದ್ಧುಮಿಚ್ಛತಿ ॥

"ನನ್ನ ವೇಗ ಮಹಾಸಾಗರದಂತೆ. ನನ್ನ ಗಮನ ಬಿರುಗಾಳಿಯಂತೆ. ಇದು ರಾಮನಿಗೆ ಗೊತ್ತಿಲ್ಲ. ಆದ್ದರಿಂದ ನನ್ನೊಡನೆ ಯುದ್ಧಮಾಡಲು ಹವಣಿಸುತ್ತಿದ್ದಾನೆ" ಎಂಬ ಕೆಚ್ಚು ನುಚ್ಚಾಯಿತು.

ರಾವಣನು ಅಸಹಾಯಶೂರ. ಕೊನೆಗಾಲದಲ್ಲಿ ಅವನು ಏಕಾಕಿಯಾದರೂ ಕಂಗೆಡಲಿಲ್ಲ. ಅಸಮಸಾಹಸದಿಂದ ಹೋರಾಡಿದನು. ಆ ಬಗೆಯ ಭೀಕರಯುದ್ಧವನ್ನು ಜಗತ್ತು ಕಂಡಿರಲಿಲ್ಲ. ಪುನಃ ಕಾಣಲಿಲ್ಲ. 'ರಾಮರಾವಣಯೋರ್ಯುದ್ಧಂ ರಾಮರಾವಣಯೋರಿವ' ಎಂದು ವಾಲ್ಮೀಕಿ ಮುನಿಗಳು ಹೇಳಿ, ಯುದ್ಧದ ಭೀಕರತೆಯ ಸಮಗ್ರವರ್ಣನೆ ತಮಗೆ ನಿಲುಕದೆಂದು ಪರ್ಯಾಯವಾಗಿ ಹೇಳಿಕೊಳ್ಳಬೇಕಾಯಿತು. ಅಗಸ್ತ್ಯರು ಆದಿತ್ಯಹೃದಯವನ್ನು ಶ್ರೀರಾಮನಿಗೆ ಉಪದೇಶಿಸಿ ಅವನ ತೇಜಸ್ಸನ್ನು ಕೆದಕಬೇಕಾಯಿತು. ದಿವ್ಯಾಸ್ತ್ರಗಳೆಲ್ಲವೂ ನಿರುಪಯುಕ್ತವಾಗಲು, ಶ್ರೀರಾಮನು ಬ್ರಹ್ಮಾಸ್ತ್ರವನ್ನೇ ಹೂಡಬೇಕಾಯಿತು. ರಾವಣನು ಬ್ರಹ್ಮಾಸ್ತ್ರದಿಂದ ಹತನಾಗಿ ಭೂಮಿಗೆ ಬಿದ್ದಾಗ ವಿಭೀಷಣನು —'ಆದಿತ್ಯಃ ಪತಿತೋ ಭೂಮೌ' 'ಸೂರ್ಯನೇ ಭೂಮಿಗೆ ಉರುಳಿ ಬಿದ್ದನು' ಎಂದು ಗೋಳಿಟ್ಟನು.

ಶ್ರೀರಾಮನೇ ರಾವಣನ ಗುಣದೋಷಗಳನ್ನು ಸಂಗ್ರಹವಾಗಿ—ಸಾರವತ್ತಾಗಿ ಹೇಳಿದ್ದಾನೆ.

ಅಧರ್ಮಾನೃತಸಂಯುಕ್ತಃ ಕಾಮಂ ತ್ವೇಷ ನಿಶಾಚರಃ ।
ತೇಜಸ್ವೀ ಬಲವಾನ್ ಶೂರಃ ಸಂಯುಗೇಷು ಚ ನಿತ್ಯಶಃ ॥
ಮಹಾತ್ಮಾ ಬಲಸಂಪನ್ನೋ ರಾವಣೋ ಲೋಕರಾವಣಃ ॥

(ಯುದ್ಧ. ೧೧೪–೧೦೦, ೧೦೧)

"ಈ ರಾಕ್ಷಸನಲ್ಲಿ ಅಧರ್ಮ, ಅನೃತಗಳು ತುಂಬಿದ್ದರೂ ಈತನು ತೇಜಸ್ವಿ, ಬಲಾಢ್ಯ, ಯುದ್ಧದಲ್ಲಿ ಶೂರ. (ಮಹಾತಪಸ್ವಿಯಾದ್ದರಿಂದ) ಮಹಾತ್ಮ, ಪರಾಕ್ರಮಿ, ಮೂರು ಲೋಕಗಳನ್ನೂ ಗೋಳಾಡಿಸಿದ ಸಾಹಸಿ!"

ಮಂಡೋದರಿಯು ರಾವಣನ ಸಾವಿಗಾಗಿ ಪರಿತಪಿಸುತ್ತ ಹಲುಬುತ್ತ ಹೀಗೆಂದಳು:

ಇಂದ್ರಿಯಾಣಿ ಪುರಾ ಜಿತ್ವಾ ಜಿತಂ ತ್ರಿಭುವನಂ ತ್ವಯಾ ।
ಸ್ಮರದ್ಭಿರಿವ ತದ್ವೈರಮಿಂದ್ರಿಯೈರೇವ ನಿರ್ಜಿತಃ ॥

(ಯುದ್ಧ. ೧೧೪–೧೮)

"ರಾವಣ, ನೀನು ಇಂದ್ರಿಯಂಗಳನ್ನು ಜಯಿಸಿ ಅದರ ಬಲದಿಂದ ಮೂರು ಲೋಕಗಳನ್ನೂ ಗೆದ್ದೆ. ಈಗ ಇಂದ್ರಿಯಗಳೇ ನಿನ್ನನ್ನು ಸೋಲಿಸಿದವು. ಅವು ತಮ್ಮ ಸೇಡನ್ನು ತೀರಿಸಿಕೊಂಡವು!"

ಇದು ರಾಕ್ಷಸೇಶ್ವರನ ಉನ್ನತಿ–ಅವನತಿಗಳೆರಡನ್ನೂ ಸಕಾರಣವಾಗಿ ಸಾರುವ ಚರಮಶ್ಲೋಕ.

೨. ನನ್ನಿಯೊಳಿನತನಯಂ

ಶ್ರೀರಾಮಕಥೆಯಲ್ಲಿ ಸುಗ್ರೀವನ ಸಖ್ಯ ಒಂದು ದೊಡ್ಡ ಪ್ರಸಂಗ. ಸುಗ್ರೀವನಿಂದ ಶ್ರೀರಾಮನಿಗಾದ ಉಪಕಾರ ದೊಡ್ಡದು. ಅವನ ನೆರವಿಲ್ಲದಿದ್ದರೆ ಸೀತಾನ್ವೇಷಣೆ ಸಾಧ್ಯವಾಗುತ್ತಿತ್ತೆ ಎಂಬ ಪ್ರಶ್ನೆಗೆ ಉತ್ತರಹೇಳುವುದು ಕಷ್ಟ. ಸೀತಾನ್ವೇಷಣೆಯೆಂಬ ಮಹಾಕಾರ್ಯವನ್ನು ಸಾಧಿಸುವ ಬಗೆ ಯಾವುದೆಂದು ಚಿಂತಾಕ್ರಾಂತರಾಗಿದ್ದ ರಾಮಲಕ್ಷ್ಮಣರಿಗೆ ಸುಗ್ರೀವನ ಸಖ್ಯವನ್ನು ಬೆಳೆಸಬೇಕೆಂದು ದಾರಿತೋರಿದವನು ಕಬಂಧ. ಸುಗ್ರೀವನ ಬಲಪರಾಕ್ರಮಾದಿಗುಣಗಳನ್ನು ಹೊಗಳುತ್ತ ಕಬಂಧನು

ಸತ್ಯಸಂಧೋ ವಿನೀತಶ್ಚ ಧೃತಿಮಾನ್ ಮತಿಮಾನ್ ಮಹಾನ್ ॥

ಎಂದು ಸುಗ್ರೀವನನ್ನು ಕೊಂಡಾಡಿದ್ದಾನೆ. "ಶ್ರೀರಾಮ, ನೀನು ಸುಗ್ರೀವನ ಸಖ್ಯವನ್ನು ಬೆಳೆಸು. ಅಗ್ನಿಸಾಕ್ಷಿಕವಾಗಿ ನೀವೀರ್ವರೂ ಮಿತ್ರರಾಗಿರಿ. ಸುಗ್ರೀವನು ದಕ್ಷ, ಪ್ರಗಲ್ಭ, ಕೃತಜ್ಞ, ಸತ್ಯಸಂಧ. ಅವನಿಗೆ ಸೀತೆಯನ್ನು ಹುಡುಕಿಕೊಡುವ ಸಾಮರ್ಥ್ಯ ಉಂಟು, ನೈಪುಣ್ಯ ಉಂಟು. ಆ ವಾನರೇಂದ್ರನನ್ನು ಯಾವ ಸಮಯದಲ್ಲಿಯೂ ಉಪೇಕ್ಷಿಸಬೇಡ" ಎಂದು ಹೇಳಿ ಶ್ರೀರಾಮನಿಗೆ ದಾರಿ ತೋರಿಸಿದನು. ಕಬಂಧನ ಮಾತು ಅಕ್ಷರಶಃ ಸತ್ಯವೇ ಆಯಿತು.

ಸುಗ್ರೀವನೂ ಶ್ರೀರಾಮನಂತೆಯೇ ಕಷ್ಟದಲ್ಲಿ ಸಿಕ್ಕಿ ತೊಳಲುತ್ತಿದ್ದನು. ಅವನ ಹೆಂಡತಿಯಾದ ರುಮೆಯನ್ನು ವಾಲಿಯು ಅಪಹರಿಸಿ ಸುಗ್ರೀವನನ್ನು ರಾಜ್ಯದಿಂದ ಹೊರಗೆ ಅಟ್ಟಿದ್ದನು. ಶ್ರೀರಾಮ ಸುಗ್ರೀವರಿಬ್ಬರಿಗೂ ಪರಸ್ಪರ ಸಹಾಯಾಪೇಕ್ಷೆ ಇದ್ದುದರಿಂದ ಸಖ್ಯವು ಸುಲಭವಾಯಿತು. ವಾಲಿ ಸಂಹಾರ ನಡೆದು ಸುಗ್ರೀವನು ವಾನರಾಧಿಪತ್ಯವನ್ನು ವಹಿಸಿಕೊಂಡನು.

ವಾಲಿಯ ಸ್ನೇಹವನ್ನೇ ಬೆಳೆಸೆಂದು ಕಬಂಧನು ಶ್ರೀರಾಮನಿಗೆ ಏಕೆ ಹೇಳಲಿಲ್ಲ? ವಾಲಿಯು ಸುಗ್ರೀವನಿಗಿಂತ ಬಲಶಾಲಿಯಲ್ಲವೆ?

ಇದಕ್ಕೆ ಉತ್ತರವಾಗಿ ಕೆಲವು ಅಂಶಗಳನ್ನು ಪರಿಶೀಲಿಸಬೇಕಾಗುತ್ತದೆ:

(೧) ವಾಲಿಯು ಕಿಷ್ಕಿಂಧಾಧಿಪತಿಯಾಗಿ ಅಧಿಕಾರ, ಐಶ್ವರ್ಯ, ಪರಾಕ್ರಮಗಳಲ್ಲಿ ಓಲಾಡುತ್ತಿದ್ದನು. ಅವನಿಗೆ ಯಾವ ಸಹಾಯಾಪೇಕ್ಷೆಯೂ ಇರಲಿಲ್ಲ. ಶ್ರೀರಾಮನ ಸ್ನೇಹ ವಾಲಿಗೆ ಅನಪೇಕ್ಷಿತವಾದ ಹೊರೆ. ಆದ್ದರಿಂದ ಅವನು ಮಿತ್ರನಾಗಿ ಸೀತಾನ್ವೇಷಣೆಗೆ ನೆರವಾಗುವುದು ಅಸಂಭವ. 'ತಪ್ತಂ ತಪ್ತೇನ ಸಂಬಧ್ಯತೇ'.

(೨) ವಾಲಿ ರಾವಣರು ಕಾರಣಾಂತರಗಳಿಂದ ಮಿತ್ರರಾಗಿದ್ದರು. ವಾಲಿಯು ರಾವಣನ ಇಷ್ಟಕ್ಕೆ ವಿರೋಧವಾಗಿ ನಡೆಯತಕ್ಕವನಲ್ಲ.

(೩) ವಾಲಿಯು ತಮ್ಮನ ಪತ್ನಿಯಲ್ಲಿ ಅನುರಕ್ತನಾದವನು; ಚಾರಿತ್ರದೂಷಕ. ಶ್ರೀರಾಮನು ಅವನ ಸ್ನೇಹವನ್ನು ಬೆಳೆಸತಕ್ಕವನಲ್ಲ.

(೪) ಒಂದು ವೇಳೆ ವಾಲಿಯು ಶ್ರೀರಾಮನಿಗೆ ಸಹಾಯಮಾಡಲು ಒಪ್ಪಿದರೆ, ವಾಲಿಯ ಭಯಕ್ಕೆ ರಾವಣನು ಸೀತೆಯನ್ನು ಹಿಂದಕ್ಕೆ ಒಪ್ಪಿಸಿಬಿಡಬಹುದು. ಇದರಿಂದ ರಾವಣವಧೆಯೆಂಬ ದೇವಕಾರ್ಯ ನೆರವೇರದು.

ಇವೇ ಮೊದಲಾದ ನಿಮಿತ್ತಗಳಿಂದ ಕಬಂಧನು, ವಾಲಿಯ ಸ್ನೇಹವನ್ನು ಬೆಳೆಸಲು ಶ್ರೀರಾಮನಿಗೆ ಸಲಹೆಮಾಡಲಿಲ್ಲ.

ಸುಗ್ರೀವನ ಕಾರ್ಯ ಮೊದಲು ನೆರವೇರಿತು. ಅವನು ತನ್ನ ಹೆಂಡತಿಯನ್ನು ಪಡೆದನಲ್ಲದೆ ಕಿಷ್ಕಿಂಧೆಗೆ ಅಧಿಪತಿಯೂ ಆದನು. ಕೋಟಿ ಕೋಟಿ ವಾನರರು ಭೃತ್ಯರಾದರು. ಶ್ರೀರಾಮನ ಉಪಕಾರವನ್ನು ಅವನು ಮರೆಯಲಿಲ್ಲ. ಶ್ರೀರಾಮನ ಮಿತ್ರನಂತೆಯೂ ಭೃತ್ಯನಂತೆಯೂ ನಡೆದುಕೊಂಡನು. ಅವನ ಸೂಚನೆಯಂತೆ ಅಂಗದನಿಗೆ ಯುವರಾಜಪದವಿಯನ್ನು ಕೊಟ್ಟು ಆದರಿಸಿದನು.

ಸ್ವಲ್ಪಕಾಲದವರೆಗೆ ಸುಗ್ರೀವನು ಭೋಗಾಸಕ್ತನಾಗಿ ಶ್ರೀರಾಮನ ಕಾರ್ಯವನ್ನು ಮರೆತದ್ದು ಉಂಟು. ಆದರೆ ಹನುಮಂತನು ಎಚ್ಚರಿಕೆಯನ್ನಿತ್ತೊಡನೆ ಅವನು ಜಾಗರೂಕನಾಗಿ ಕಾರ್ಯಪ್ರವೃತ್ತನಾದನು. ಅವನ ಕಾರ್ಯಪ್ರವೃತ್ತಿಯಲ್ಲಿ ಒಂದು ವಿಶೇಷ ಉಂಟು. ಕಾರ್ಯಭಾರದ ಉತ್ತರದಾಯಿತ್ವವನ್ನು ಶಿರಸಾವಹಿಸಿ ಶ್ರದ್ಧೆಯಿಂದ ಅಚ್ಚುಕಟ್ಟಾಗಿ ನೆರವೇರಿಸಿದ ಕೀರ್ತಿ ಸುಗ್ರೀವನಿಗೆ ಸಲ್ಲುತ್ತದೆ. ಸಮಸ್ತವಾನರಸೇನೆಯನ್ನೂ ಕರೆಸಿ ಸೀತಾನ್ವೇಷಣೆಗೆ ನಿಯಮಿಸಿದನು. ದಿಗ್ದೇಶಗಳ ಪರಿಚಯವನ್ನು ವಾನರರಿಗೆ ಮಾಡಿಕೊಟ್ಟು ದಿಕ್ಕುದಿಕ್ಕುಗಳಿಗೆ ಅವರನ್ನು ಕಳಿಸಿದನು. ಒಂದು ತಿಂಗಳೊಳಗೆ ಸೀತಾವೃತ್ತಾಂತವನ್ನು ತರದಿದ್ದಲ್ಲಿ ಅವರನ್ನು ವಧಿಸುವುದಾಗಿ ಸುಗ್ರೀವಾಜ್ಞೆಯಾಯಿತು.

ಶ್ರೀರಾಮನ ಕಷ್ಟದ ದಿನಗಳಲ್ಲಿ ಅವನನ್ನು ಸಂತೈಸುತ್ತ ಧೈರ್ಯಹೇಳಿ ಸಕಲ ಸಹಾಯಗಳನ್ನು ಒದಗಿಸಿ ಆಪ್ತಮಿತ್ರನಾಗಿಯೇ ನಡೆದುಕೊಂಡ ಸುಗ್ರೀವನ ಸೌಜನ್ಯ, ಕೃತಜ್ಞತಾಭಾವ, ಮೈತ್ರಿ, ಸತ್ಯಸಂಧತೆಗಳು ಇತರದುರ್ಲಭ. ಸಕಲ ವಾನರಸೇನೆಯನ್ನು ಶ್ರೀರಾಮನೆದುರಿಗೆ ನಿಲ್ಲಿಸಿ—

ತ್ವತ್ಸೈನ್ಯಂ ತ್ವದ್ವಶೇ ಯುಕ್ತಮಾಜ್ಞಾಪಯಿತುಮರ್ಹಸಿ ॥

(ಕಿಷ್ಕಿಂಧಾ. ४೦–೮)

"ಶ್ರೀರಾಮ, ಇದು ನಿನ್ನ ಸೈನ್ಯ. ನಿನಗೆ ಅಧೀನವಾಗಿದೆ. ಈ ಸೇನೆಗೆ ಆಜ್ಞೆಯನ್ನು ಕೊಡು" ಎಂದು ಸುಗ್ರೀವನು ಹೇಳಿದ್ದಾನೆ. ಮಧುವನವನ್ನು ಕಪಿಗಳು ಹಾಳುಮಾಡಿದರೆಂಬ ದೂರನ್ನು ದಧಿಮುಖನು ತಂದನಷ್ಟೆ. ಆ ಕಪಿಗಳು ಸೀತೆಯನ್ನು ಕಂಡು ಬಂದಿದ್ದಾರೆಂದು ಸುಗ್ರೀವನಿಗೆ ಹೊಳೆಯಿತು. ಆಗ ಅವನಿಗಾದ ಆನಂದವೆಷ್ಟು! ತುಂಟತನಮಾಡಿದ ಕಪಿಗಳೆಲ್ಲರನ್ನೂ ಸಂತೋಷದಿಂದ ಮನ್ನಿಸಿ ಶ್ರೀರಾಮನ ಕಡೆಗೆ ತಿರುಗಿ—

ಕೌಸಲ್ಯಾ ಸುಪ್ರಜಾ ರಾಮ ಸಮಾಶ್ವಸಿಹಿ ಸುವ್ರತ ।
ದೃಷ್ಟಾ ದೇವೀ ನ ಸಂದೇಹೋ ನ ಚಾನ್ಯೇನ ಹನೂಮತಾ ॥

(ಸುಂದರ. ೬೫–೩೦)

ಎಂಬ ಅವನ ನುಡಿ ಸ್ನೇಹಾರ್ದ್ರವಾದ ಹೃದಯದಿಂದ ಬಂದದ್ದು. ವಾನರರು ಸೀತಾವೃತ್ತಾಂತವನ್ನು ಹೇಳಲು ಸಮೀಪಿಸಿದಾಗ—

ತತಃ ಶ್ರುತ್ವಾ ನಿನಾದಂ ತಂ ಕಪೀನಾಂ ಕಪಿಸತ್ತಮಃ ।
ಆಯತಾಂಚಿತಲಾಂಗೂಲಃ ಸೋಽಭವದ್ಧೃಷ್ಟಮಾನಸಃ ॥

(ಸುಂದರ. ೬೫–೩೬)

"ವಾನರೋತ್ತಮನಾದ ಸುಗ್ರೀವನು ಕಪಿಗಳು ಬರುವ ಶಬ್ದವನ್ನು ಕೇಳಿ ಹರ್ಷದಿಂದ ತನ್ನ ಬಾಲವನ್ನು ಉದ್ದವಾಗಿ ಬೀಸಿ ಅಲ್ಲಾಡಿಸತೊಡಗಿದನು!"

ರಾಕ್ಷಸರೊಡನೆ ಯುದ್ಧವು ಸಮೀಪಿಸಿದಾಗ ರಾವಣನು ಒಂದು ಭೇದೋಪಾಯವನ್ನೊಡ್ಡಿದನು. ಅವನು ಶುಕನೆಂಬ ಮಂತ್ರಿಯೊಡನೆ ಸುಗ್ರೀವನಿಗೆ ಈ ರೀತಿ ಹೇಳಿಕಳಿಸಿದನು:

"ಸುಗ್ರೀವ, ನೀನು ಮಹಾರಾಜವಂಶದಲ್ಲಿ ಜನಿಸಿದ್ದೀಯೆ. ಮಹಾಪರಾಕ್ರಮಿಯಾಗಿದ್ದೀಯೆ. ನಿನಗೆ ಈ ಯುದ್ಧದಿಂದ ಆಗಬೇಕಾದ್ದೇನು ? ಯುದ್ಧದಿಂದ ಲಾಭವೂ ಇಲ್ಲ, ಯುದ್ಧ ಮಾಡದಿದ್ದರೆ ನಷ್ಟವೂ ಇಲ್ಲ! ನೀನು ನನ್ನ ಸೋದರನಿಗೆ ಸಮಾನ. ರಾಮನ ಹೆಂಡತಿಯನ್ನು ನಾನು ಅಪಹರಿಸಿ ತಂದರೆ ನಿನಗಾಗುವ ತೊಂದರೆಯೇನು ? ಸುಮ್ಮನೆ ನೀನು ಕಿಷ್ಕಿಂಧೆಗೆ ಹೊರಟುಹೋಗುವುದೊಳ್ಳೆಯದು!"

ಸತ್ಯಸಂಧನಾದ ಸುಗ್ರೀವನು ಇಂತಹ ಭೇದೋಪಾಯಕ್ಕೆ ಒಳಗಾಗುವನೆ? ರಾವಣನ ಸಂದೇಶವನ್ನು ಧಿಕ್ಕರಿಸಿದನು. ಸೀತಾನ್ವೇಷಣೆ, ಸೇತುಬಂಧ, ಘೋರಸಂಗ್ರಾಮಗಳಲ್ಲಿ ಸುಗ್ರೀವ ನಿಂದಲೂ ಅವನ ಪಡೆಯಿಂದಲೂ ಶ್ರೀರಾಮನಿಗಾದ ಉಪಕಾರ ಅಮೂಲ್ಯವಾದುದು. "ಸುಗ್ರೀವ, ನಿನ್ನಂತಹ ಮಿತ್ರರು ದುರ್ಲಭ" ಎಂಬ ಪ್ರಶಂಸೆ ಶ್ರೀರಾಮನ ಬಾಯಿಂದ ಬಂದಿತು. ತನ್ನ ಮಾತಿಗೆ ಯಾವ ಅಪ್ರೋಹವೂ ಬಾರದಂತೆ ಕಾಯವಾಙ್ಮನಸ್ಸುಗಳಿಂದ ನಡೆದುಕೊಂಡ ಸತ್ಯಸಂಧ ಸುಗ್ರೀವ. ಸುಗ್ರೀವನ ಸಖ್ಯದಿಂದ ಶ್ರೀರಾಮನಿಗೆ ಸೀತೆಯ ಪ್ರಾಪ್ತಿಯಾದುದು ಮಾತ್ರವೇ ಅಲ್ಲ. ಇನ್ನೊಬ್ಬ ಮಹಾಪುರುಷನ ಲಾಭವೂ ಆಯಿತು. ಆ ಮಹಾಪುರುಷನೇ ಹನುಮಂತ!

೩. ಗಂಡಿನೊಳ್ ವಾಯುಪುತ್ರಂ

ಗಂಡು, ಬಲ, ಚಾಪವಿದ್ಯಾಬಲ ಎಂಬ ಶಬ್ದಗಳಿಗೆ ಅರ್ಥವಿವರಣೆ ಇಲ್ಲಿ ಆವಶ್ಯಕ. ಗಂಡು ಎಂಬ ಶಬ್ದವನ್ನು ಮುಖ್ಯವಾಗಿ ದೈಹಿಕಶಕ್ತಿ ಎಂಬ ಅರ್ಥದಲ್ಲಿ ಉಪಯೋಗಿಸಿದೆ: ಮುಂದೆ ಸಂಭವಿಸಬಹುದಾದ ಆಕಸ್ಮಿಕ ಘಟನೆಗಳನ್ನೂ ಶತ್ರುಬಲವನ್ನೂ ಲೆಕ್ಕಿಸದೆ ಆತ್ಮಶಕ್ತಿಯೊಂದನ್ನೇ ನಂಬಿ ಮುನ್ನುಗ್ಗುವ ಸಾಹಸಪ್ರವೃತ್ತಿ ಇದು ಅಸ್ತ್ರಶಸ್ತ್ರಾದಿ ವಿವಿಧೋಪಾಯಗಳಿಂದ ಸಂಘಟಿಸಿ ಕೊಂಡಿರುವ ಶಕ್ತಿಯೇ ಬಲ: ಇದರಲ್ಲಿ ಪೂರ್ವಯೋಜನೆಯ ಹಂಚಿಕೆಯುಂಟು. ಧನುರ್ವಿದ್ಯೆಯಲ್ಲಿ ಗಳಿಸಿರುವ ನೈಪುಣ್ಯವೇ ಚಾಪವಿದ್ಯಾಬಲ.

ಹನುಮಂತನೆಂದೊಡನೆ ಅವನ ವಜ್ರಕಾಯ, ಅವನ ಶೌರ್ಯಧೈರ್ಯಗಳು, ಅವನ ದಾಕ್ಷ್ಯಸಾಮರ್ಥ್ಯಗಳು, ಅವನ ಶ್ರದ್ಧಾಭಕ್ತಿಗಳು ಕಣ್ಣಿಗೆ ಕಟ್ಟಿದಂತಾಗುತ್ತವೆ. ಸಾಹಸದ ಪ್ರತಿರೂಪ ಆಂಜನೇಯ. ನಿಷ್ಕಾಮಕರ್ಮಯೋಗದ ಪ್ರಥಮೋದಾಹರಣೆ ಆಂಜನೇಯ. ಅವನ ನಿಷ್ಕಳಂಕವಾದ ಚಾರಿತ್ರ, ವಾಗ್ಮಿತೆ ಅನ್ಯದುರ್ಲಭ.

ಸಮುದ್ರಲಂಘನ, ಲಂಕಾದಹನಗಳು ಅವನ ಗಂಡುತನಕ್ಕೆ ಉತ್ತಮ ನಿದರ್ಶನ. ಸಮುದ್ರ ಲಂಘನಕಾಲದಲ್ಲೊದಗುವ ಎಡರುತೊಡರುಗಳನ್ನು ಲೆಕ್ಕಿಸದೆ ಧೀಂಕಿಟ್ಟು ನೆಗೆದ ಹನುಮಂತ ರಾವಣನ ಲಂಕೆಯಲ್ಲಿ ಎದುರಿಸಬೇಕಾಗುವ ವಿಪತ್ತುಗಳನ್ನೂ ಎಣಿಸಲಿಲ್ಲ. ಸುರಸೆಯನ್ನು ಜಯಿಸಿ, ಸಿಂಹಿಕೆಯನ್ನು ಘಾತಿಸಿ, ಲಂಕಿಣಿಯನ್ನು ಭಂಗಿಸಿ, ರಾವಣನನ್ನು ಹಂಗಿಸಿ, ಲಂಕೆಗೆ ಬೆಂಕಿಯಿಟ್ಟು ಬಂದ ಅಪ್ರತಿಮಸಾಹಸಿಯವನು. ಸೀತೆಯು ಲಂಕೆಯಲ್ಲಿ ದೊರೆಯದಿದ್ದರೆ,

ಬದ್ಧ್ವಾ ರಾಕ್ಷಸರಾಜಾನಮಾನಯಿಷ್ಯಾಮಿ ರಾವಣಮ್ ॥

"ರಾಕ್ಷಸರಾಜನಾದ ರಾವಣನನ್ನೇ ಸೆರೆಹಿಡಿದು ತರುವೆನು" ಎಂಬ ಕೆಚ್ಚಿನಿಂದ ಹೋದ ಮಲ್ಲನವನು.

ಲಂಕಾನಗರದ ರಾಕ್ಷಸರೆದುರಿಗೆ ಹೀಗೆ ಘೋಷಿಸಿದನು :

ದಾಸೋಽಹಂ ಕೋಸಲೇಂದ್ರಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ ।
ಹನುಮಾನ್ ಶತ್ರುಸೈನ್ಯಾನಾಂ ನಿಹಂತಾ ಮಾರುತಾತ್ಮಜಃ ॥
ನ ರಾವಣಸಹಸ್ರಂ ಮೇ ಯುದ್ಧೇ ಪ್ರತಿಬಲಂ ಭವೇತ್ ॥

(ಸುಂದರ. ೪೨–೩೪, ೩೫)

"ಕೋಸಲೇಂದ್ರನೂ ಸದಾಚಾರನಿರತನೂ ಆದ ಶ್ರೀರಾಮನ ಭೃತ್ಯ ನಾನು. ನಾನು ವಾಯುಪುತ್ರ. ನನ್ನ ಹೆಸರು ಹನುಮಂತ. ನಾನು ಶತ್ರುಸೈನ್ಯಗಳನ್ನು ಧ್ವಂಸಮಾಡತಕ್ಕವನು. ರಾವಣನಂತಹವರು ಸಾವಿರಜನ ಬಂದರೂ ನನಗೆ ಎದುರಲ್ಲ!"

ಒಂದು ರಾತ್ರಿ ಇಂದ್ರಜಿತು ಮಾಯಾಯುದ್ಧವನ್ನಾರಂಭಿಸಿದನು. ರಾಮಲಕ್ಷ್ಮಣರು ಮೂರ್ಛಿತರಾಗಿ ಬಿದ್ದರು. ಕಪಿಸೇನೆಯು ಬಹುಭಾಗ ಹತವಾಯಿತು. ಇತರವಾನರರು ಎಚ್ಚರ ದಪ್ಪಿದರು. ಶ್ರೀರಾಮನ ಪಕ್ಷದಲ್ಲಿ ಎಚ್ಚರವಾಗಿ ಉಳಿದವರು ಹನುಮಂತ, ವಿಭೀಷಣ—ಇಬ್ಬರೇ. ಯಾರು ಯಾರು ಜೀವಹಿಡಿದಿದ್ದಾರೆಂದು ನೋಡಲು ಅವರಿಬ್ಬರೂ ದೀಪದ ಬೆಳಕಿನಲ್ಲಿ ಅರಸುತ್ತ ಹೊರಟರು. ಒಂದೆಡೆ ಜಾಂಬವಂತನು ಜರ್ಝರಿತಶರೀರನಾಗಿ ಮಲಗಿದ್ದನು. ವಿಭೀಷಣನು ಅವನನ್ನು ಸಂತೈಸುತ್ತಿರುವಾಗ ಜಾಂಬವಂತನು "ಅಪ್ಪಾ—ವಿಭೀಷಣ, ಧ್ವನಿಯಿಂದ ನಿನ್ನನ್ನು ಗುರುತು ಹಿಡಿದೆ. ನಾನು ಕಣ್ಣು ಬಿಡಲಾರೆ. ನನಗೆ ಒಂದು ವಿಷಯವನ್ನು ಹೇಳು; ವಾಯುಪುತ್ರನಾದ ಹನುಮಂತನು ಬದುಕಿರುವನೆ?" ಎಂದು ಕೇಳಿದನು. ವಿಭೀಷಣನಿಗೆ ಆಚ್ಚರಿಯಾಯಿತು. ಅವನು "ಆರ್ಯ, ಮಹಾರಾಜನಾದ ಸುಗ್ರೀವನಲ್ಲಿ, ಯುವರಾಜನಾದ ಅಂಗದನಲ್ಲಿ, ಶ್ರೀರಾಮನಲ್ಲಿ—ತೋರದ ಸ್ನೇಹವನ್ನು ವಿಶೇಷವಾಗಿ ಹನುಮಂತನಲ್ಲಿ ತೋರಿಸಿದೆಯಲ್ಲ?" ಎಂದನು. ಆಗ ಜಾಂಬವಂತನು ಹೇಳಿದ ಮಾತು ಹನುಮಂತನಿಗೆ ಸಲ್ಲುವ ವೀರಪ್ರಶಸ್ತಿ:

ತಸ್ಮಿನ್ ಜೀವತಿ ವೀರೇ ತು ಹತಮಪ್ಯಹತಂ ಬಲಮ್ ।
ಹನೂಮತ್ಯುಜ್ಝಿತಪ್ರಾಣೇ ಜೀವಂತೋಽಪಿ ವಯಂ ಹತಾಃ ॥

(ಯುದ್ಧ. ೭೪–೨೨)

"ಆ ವೀರನು ಬದುಕಿದ್ದರೆ ನಮ್ಮ ಸೇನೆಯೆಲ್ಲವೂ ಸತ್ತರೂ ಸಾಯದಿದ್ದಂತೆ. ಹನುಮಂತನೇನಾದರೂ ಪ್ರಾಣವನ್ನು ತೊರೆದರೆ ನಾವೆಲ್ಲ ಬದುಕಿದ್ದರೂ ಸತ್ತಂತೆಯೇ!"

ಸುಗ್ರೀವನಿಗೆ ಹನುಮಂತನ ಕಾರ್ಯದಕ್ಷತೆಯಲ್ಲಿ ಸಂಪೂರ್ಣ ವಿಶ್ವಾಸವಿತ್ತು. ಋಷ್ಯಮೂಕದ ಬಳಿ ರಾಮಲಕ್ಷ್ಮಣರನ್ನು ಮೊದಲು ಕಂಡಾಗ ಸುಗ್ರೀವನು ಭಯಗ್ರಸ್ತನಾಗಿ ಅವರೀರ್ವರ ಉದ್ದೇಶವನ್ನು ತಿಳಿದು ಬರಲು ಹನುಮಂತನನ್ನೇ ಕಳಿಸಿದನು. ಹನುಮಂತನ ವಾಙ್ನೈಪುಣ್ಯವನ್ನು ಕಂಡು ಶ್ರೀರಾಮನು ಪ್ರಥಮದರ್ಶನದಲ್ಲಿ ಕೊಟ್ಟ ಪ್ರಶಸ್ತಿ ಇದು:

ಉಚ್ಚಾರಯತಿ ಕಲ್ಯಾಣೀಂ ವಾಚಂ ಹೃದಯಹಾರಿಣೀಮ್ ॥

"ಈತನು ಪ್ರಶಸ್ತವಾಗಿಯೂ ಹೃದಯಾನಂದಕರವಾಗಿಯೂ ಮಾತನಾಡುತ್ತಿದ್ದಾನೆ."

ಏವಂಗುಣಗಣೈರ್ಯುಕ್ತಾಃ ಯಸ್ಯ ಸ್ಯುಃ ಕಾರ್ಯಸಾಧಕಾಃ ।
ತಸ್ಯ ಸಿಧ್ಯಂತಿ ಸರ್ವಾರ್ಥಾ ದೂತವಾಕ್ಯಪ್ರಚೋದಿತಾಃ ॥

(ಕಿಷ್ಕಿಂಧಾ. ೩–೩೫)

"ಇಂತಹ ಗುಣಗಣಮಂಡಿತರೂ ಕಾರ್ಯಸಾಧನದಕ್ಷರೂ ಆದ ದೂತರು ಯಾರಿಗಿರುವರೋ ಅವರ ಸಮಸ್ತಕಾರ್ಯಗಳೂ ದೂತವಾಕ್ಯದ ಚೋದನಾಸಾಮರ್ಥ್ಯದಿಂದಲೇ ಸಿದ್ಧಿಸುತ್ತವೆ."

ದಕ್ಷಿಣದಿಕ್ಕಿನಲ್ಲಿ ರಾವಣನ ರಾಜಧಾನಿಯಿದೆಯೆಂಬುದೂ ಸೀತೆಯನ್ನು ರಾವಣನು ಬಹುಶಃ ಅಲ್ಲಿಯೇ ಇಟ್ಟಿರುವನೆಂಬುದೂ ಸುಗ್ರೀವನಿಗೆ ತಿಳಿದಿತ್ತು. ಆದ್ದರಿಂದಲೇ ಅವನು ತನ್ನ ಸೇನಾಯೂಥದಲ್ಲಿ ಅತಿದಕ್ಷರಾದ ಹನುಮಂತ, ಅಂಗದ ಜಾಂಬವಂತ ಮುಂತಾದ ನಾಯಕರನ್ನು ದಕ್ಷಿಣಕ್ಕೆ ಕಳಿಸಿದನು. ವಿಶೇಷವಾಗಿ ಹನುಮಂತನನ್ನು ಕುರಿತು "ವಾನರಶ್ರೇಷ್ಠ, ಭೂಮ್ಯಂತರಿಕ್ಷಗಳಲ್ಲಿ ನಿನಗೆ ಅಸದೃಶವಾದ ಗಮನಸಾಮರ್ಥ್ಯ ಉಂಟು. ನಿನ್ನ ತೇಜಸ್ಸಿಗೆ ಎಣೆಯಾದ ತೇಜಸ್ಸು ಇನ್ನೊಬ್ಬನಲ್ಲಿಲ್ಲ. ಬಲ, ಬುದ್ಧಿ, ಪರಾಕ್ರಮಗಳೂ, ದೇಶಕಾಲಜ್ಞತೆಯೂ ನಿನ್ನಲ್ಲಿಯೇ ನೆಲೆಸಿವೆ. ರಾಜನೀತಿಯಲ್ಲಿ ಪಂಡಿತ ನೀನು. ಹೇಗಾದರೂ ಸೀತಾದೇವಿಯು ದೊರಕುವಂತೆ ಪ್ರಯತ್ನಿಸು" ಎಂದು ಸಂದೇಶವನ್ನಿತ್ತನು. ಆ ಸಂದೇಶದ ರಹಸ್ಯವನ್ನರಿತ ಶ್ರೀರಾಮನು ತನ್ನ ಅಂಗುಳೀಯಕವನ್ನು ಹನುಮಂತನ ಕೈಯಲ್ಲಿತ್ತನು.

ತಾನು ಹೊತ್ತ ಕಾರ್ಯಭಾರವನ್ನು ಅಸದೃಶವೆಂಬಂತೆ ನಿರ್ವಹಿಸಿ ಲಂಕಾಭಯಂಕರನೆನಿಸಿ ವಿಜಯಪತಾಕೆಯನ್ನು ಮೆರೆಸಿದ ಈ ರಣಮಲ್ಲನ ನಯವಿನಯಗಳೆಷ್ಟು! ಲಂಕೆಯಲ್ಲಿ ತಾನು ಸಾಧಿಸಿದ ಕಾರ್ಯವನ್ನು ಅಂಗದಾದಿಗಳಿಗೆ ವಿವರಿಸಿ ಕಡೆಯಲ್ಲಿ ಹೀಗೆನ್ನುತ್ತಾನೆ:
ಇದೆಲ್ಲವೂ—

ರಾಘವಸ್ಯ ಪ್ರಭಾವೇಣ ಭವತಾಂ ಚೈವ ತೇಜಸಾ ॥

"ಶ್ರೀರಾಮನ ಮಹಿಮೆಯಿಂದಲೂ ನಿಮ್ಮೆಲ್ಲರ ತೇಜಸ್ಸಿನಿಂದಲೂ ಸಾಧ್ಯವಾಯಿತು."

ಅಶೋಕವನದಲ್ಲಿ ವಾನರಸೇನೆಯ ಬಲವನ್ನು ವರ್ಣಿಸಿ ಸೀತೆಯನ್ನು ಸಂತೈಸುತ್ತ—

"ದೇವಿ, ಸುಗ್ರೀವನ ಸೇನೆಯಲ್ಲಿರುವ ವಾನರರು ನನಗಿಂತ ಬಲಶಾಲಿಗಳಾಗಿದ್ದಾರೆ. ಕೆಲವರು ನನ್ನಷ್ಟು ವೀರರಾಗಿದ್ದಾರೆ. ಆದರೆ—

ಮತ್ತಃ ಪ್ರತ್ಯವರಃ ಕಶ್ಚಿತ್ ನಾಸ್ತಿ ಸುಗ್ರೀವಸಂನಿಧೌ ॥

(ಸುಂದರ. ೩೯–೩೮)

ಸುಗ್ರೀವನ ಹತ್ತಿರ ನನಗಿಂತ ಕಡಮೆಯಾದವನು ಒಬ್ಬನೂ ಇಲ್ಲ!"—ಎನ್ನುತ್ತಾನೆ.

ಶ್ರೀರಾಮನ ಪಟ್ಟಾಭಿಷೇಕ ನಡೆದಿದೆ; ಉತ್ಸವ ಕಾಲ. ಪಾರಿತೋಷಿಕಗಳ ವಿತರಣೆಯಾಗುತ್ತಿದೆ. ಜಾನಕಿಯು ತನ್ನ ಕೊರಳಲ್ಲಿದ್ದ ಒಂದು ಶುಭ್ರವಾದ ಮುಕ್ತಾಹಾರವನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡು ಒಮ್ಮೆ ಗಂಡನ ಮುಖವನ್ನೂ ಒಮ್ಮೆ ಕಪಿಗಳ ಸಭೆಯನ್ನೂ ನೋಡುತ್ತಿದ್ದಾಳೆ. ಅವಳ ಇಂಗಿತ ಶ್ರೀರಾಮನಿಗೆ ತಿಳಿಯಿತು. ಅವನು—

ಪ್ರದೇಹಿ ಸುಭಗೇ! ಹಾರಂ ಯಸ್ಯ ತುಷ್ಟಾಸಿ ಭಾಮಿನಿ ।
ತೇಜೋ ಧೃತಿರ್ಯಶೋ ದಾಕ್ಷ್ಯಂ ಸಾಮರ್ಥ್ಯಂ ವಿನಯೋ ನಯಃ ॥
ಪೌರುಷಂ ವಿಕ್ರಮೋ ಬುದ್ಧಿರ್ಯಸ್ಮಿನ್ನೇತಾನಿ ನಿತ್ಯದಾ ॥

(ಯುದ್ಧ. ೧೩೧—೮೧, ೮೨)

ಎಂದು ಹೇಳಿದನು.

"ಸೌಭಾಗ್ಯಶಾಲಿನಿ, ಯಾರ ವಿಷಯದಲ್ಲಿ ಪ್ರಸನ್ನಳಾಗಿರುವೆಯೋ, ಯಾರಲ್ಲಿ ತೇಜಸ್ಸು, ಧೈರ್ಯ, ಕೀರ್ತಿ, ದಕ್ಷತೆ, ಸಾಮರ್ಥ್ಯ, ವಿನಯ, ನೀತಿ, ಪೌರುಷ, ಪರಾಕ್ರಮ, ಬುದ್ಧಿ—ಇವು ಸತ್ಯವಾಗಿ ನೆಲಸಿವೆಯೋ ಅವನಿಗೆ ಈ ಹಾರವನ್ನು ಅರ್ಪಿಸು."

ಮರುಕ್ಷಣದಲ್ಲಿ ಆ ಪಾರಿತೋಷಿಕ ಹನುಮಂತನಿಗೆ ಲಭಿಸಿತು.

೪. ಬಲದೊಳ್ ಶಕ್ರಾರಿ

ಶ್ರೀರಾಮನು ಅಯೋಧ್ಯೆಯಲ್ಲಿ ಪಟ್ಟಾಭಿಷಿಕ್ತನಾದಮೇಲೆ ಅವನನ್ನು ಅಭಿನಂದಿಸುವುದಕ್ಕಾಗಿ ಅಗಸ್ತ್ಯಾದಿಮುನಿಗಳು ಬಂದರು. ರಾವಣಾದಿರಾಕ್ಷಸರನ್ನು ಸಂಹರಿಸಿದ್ದಕ್ಕಾಗಿ ಶ್ರೀರಾಮನನ್ನು ಸ್ತುತಿಸಿ "ಶ್ರೀರಾಮ, ರಾವಣನನ್ನು ಪರಾಭವಗೊಳಿಸಿದ್ದು ದೊಡ್ಡ ವಿಷಯವಲ್ಲ. ಅವನ ಮಗನಾದ ಇಂದ್ರಜಿತುವನ್ನು ಸಂಹರಿಸಿದ್ದು ದೊಡ್ಡ ವಿಷಯ. ಮಹಾಮಾಯಾವಿಯೂ ಸಾಕ್ಷಾತ್ ಯಮನೂ ಆಗಿದ್ದ ಆತನ ವಧೆ ವಿಸ್ಮಯಕರ" ಎಂದರು. ಅವರ ಮಾತಿನಿಂದ ಶ್ರೀರಾಮನಿಗೂ ವಿಸ್ಮಯವಾಯಿತು. "ಮುನಿಗಳೆ, ರಾವಣ ಕುಂಭಕರ್ಣ ಅತಿಕಾಯ ಮುಂತಾದ ಮಹಾವೀರರನ್ನು ಅತಿಕ್ರಮಿಸಿ ಇಂದ್ರಜಿತುವನ್ನು ಇಷ್ಟೇಕೆ ಹೊಗಳುವಿರಿ?" ಎಂದು ಕೇಳಿದನು. (ಉತ್ತರ ಕಾಂಡ—೧)

ಇಂದ್ರಜಿತುವಿನ ಜನ್ಮನಾಮ ಮೇಘನಾದ. ಜನಿಸಿದಾಗಲೇ ಅವನು ಮೇಘದಂತೆ ಗುಡುಗಿದ ನಂತೆ! ಇಂದ್ರನನ್ನು ಜಯಿಸಿ ಇಂದ್ರಜಿತ್ ಎಂದು ಪ್ರಸಿದ್ಧನಾದನು. ರಾವಣನಿಗೆ ಯುದ್ಧದಲ್ಲಿ ದೇವೇಂದ್ರನನ್ನು ಗೆಲ್ಲಲು ಶಕ್ಯವಾಗಲಿಲ್ಲವೆಂದೂ ಮೇಘನಾದನು ತನ್ನ ಮಾಯಾಬಲದಿಂದ ದೇವೇಂದ್ರನನ್ನು ಗೆದ್ದು ಸೆರೆಹಿಡಿದನೆಂದೂ ಉತ್ತರಕಾಂಡದ ಮೂವತ್ತೆರಡನೆಯ ಸರ್ಗದಲ್ಲಿ ಉಕ್ತವಾಗಿದೆ.

ಮೇಘನಾದನು ಸಂಪಾದಿಸಿದ ಬಲವೆಲ್ಲವೂ ತಪಸ್ಸಿನಿಂದ, ಮಾಯಾಶಕ್ತಿಯಿಂದ. ಅಭಿಚಾರ ಕರ್ಮದಲ್ಲಿ ಅವನು ನಿಷ್ಣಾತ. ನಿಕುಂಭಿಳೆಯೆಂಬ ಯಾಗಭೂಮಿಯಲ್ಲಿ ಅಭಿಚಾರವನ್ನು ಮಾಡಿ ಹೊಸಶಕ್ತಿಯನ್ನು ಸಂಪಾದಿಸಿ ಅವನು ಸಂಗ್ರಾಮಭೂಮಿಗೆ ಸಾಗುತ್ತಿದ್ದನು. ಲಂಕೆಯಲ್ಲಿ ಆಂಜನೇಯನನ್ನು ಬ್ರಹ್ಮಾಸ್ತ್ರದಿಂದ ಬಂಧಿಸಿ ತಂದ ವೀರನೇ ಮೇಘನಾದ. ರಾಮಾಯಣಯುದ್ಧದಲ್ಲಿ ರಾಮಲಕ್ಷ್ಮಣರಿಗೂ ವಾನರಸೇನೆಗೂ ಅಪಾರಹಾನಿಯನ್ನು ಬಾರಿಬಾರಿಗೂ ತಂದೊಡ್ಡಿ ವಿಜೃಂಭಿಸಿದ ವೀರಾಗ್ರಣಿ ಮೇಘನಾದ, ರಾಮಲಕ್ಷ್ಮಣರನ್ನು ನಾಗಪಾಶದಿಂದ ಅವನು ಬಂಧಿಸಿದ. ಸೀತೆಯನ್ನು ರಣಭೂಮಿಗೆ ಕಳಿಸಿ ರಾಮಲಕ್ಷ್ಮಣರು ಹತರಾದರೆಂದು ತೋರಿಸಿ ವಂಚನೆಯಿಂದ ಗೋಳಾಡಿಸಿದ. ರಾತ್ರಿಯಲ್ಲಿ ನಡೆದ ಮಾಯಾಯುದ್ಧದಲ್ಲಿ ಸುಗ್ರೀವಾದಿವಾನರರನ್ನು ಮಥಿಸಿ ರಾಮಲಕ್ಷ್ಮಣರನ್ನು ಮೂರ್ಛೆಗೊಳಿಸಿದ. ಹನುಮಂತನೆದುರಿಗೆ ಮಾಯಾಸೀತೆಯನ್ನು ಕೊಂದು ಶ್ರೀರಾಮಾದಿಗಳಿಗೆ ದಿಗ್ಭ್ರಮೆ ಹಿಡಿಸಿದ. ಅವನ ಉಪದ್ರವ ಎಲ್ಲಿಯವರಿಗೆ ಹೋಯಿತೆಂದರೆ, ಒಂದು ಸಲ ಲಕ್ಷ್ಮಣನು ಮಾರ್ಗಾಂತರವಿಲ್ಲದೆ ಬ್ರಹ್ಮಾಸ್ತ್ರವನ್ನೇ ಪ್ರಯೋಗಿಸಿ ಇಂದ್ರಜಿತುವಿನ ಕಾಟವನ್ನು ತಪ್ಪಿಸಿ ಕೊಳ್ಳಬೇಕೆಂದು ಸಂಕಲ್ಪಿಸುವಂತಾಯಿತು. ಆದರೆ ಶ್ರೀರಾಮನು ಬ್ರಹ್ಮಾಸ್ತ್ರದ ಪ್ರಯೋಗಕ್ಕೆ ಅನುಮತಿಯನ್ನೀಯಲಿಲ್ಲ.

ಇಂದ್ರಜಿತುವಿನ ಸಮಸ್ತಪ್ರಯತ್ನಗಳೂ ಒಂದಲ್ಲ ಒಂದು ಕಾರಣದಿಂದ ವಿಫಲವಾದವು. ಅವನು ಕಂಗೆಡುವ ಚೇತನವಲ್ಲ. ಕಡೆಗೆ ಅಭಿಚಾರಕರ್ಮಕ್ಕಾಗಿ ನಿಕುಂಭಿಳೆಗೆ ಹೋದನು. ವಿಭೀಷಣನ ಚೋದನೆಯಂತೆ ಲಕ್ಷ್ಮಣನೂ ಸಕಲವಾನರರೂ ನಿಕುಂಭಿಳೆಯನ್ನು ಮುತ್ತಿದರು. ಅಭಿಚಾರಕರ್ಮ ಪೂರ್ಣವಾಗಲಿಲ್ಲ. ಲಕ್ಷ್ಮಣನಿಗೂ ಇಂದ್ರಜಿತುವಿಗೂ ಘನಘೋರಸಂಗ್ರಾಮವು ದೀರ್ಘಕಾಲ ನಡೆಯಿತು. ಲಕ್ಷ್ಮಣನ ಅಸ್ತ್ರವಿದ್ಯಾಬಲವೆಲ್ಲವೂ ಪ್ರದರ್ಶಿತವಾಯಿತು. ಕಡೆಯಲ್ಲಿ ಲಕ್ಷ್ಮಣನು ಐಂದ್ರಾಸ್ತ್ರವನ್ನು ಧನುಸ್ಸಿಗೆ ಹೂಡಿದನು.

ಶರಶ್ರೇಷ್ಠಂ ಧನುಃಶ್ರೇಷ್ಠೇ ಸರಶ್ರೇಷ್ಠೋಽಭಿಸಂದಧೇ ॥

ಆ ಮಹಾಸ್ತ್ರದಲ್ಲಿಯೂ ಲಕ್ಷ್ಮಣನಿಗೆ ವಿಶ್ವಾಸಮೂಡಲಿಲ್ಲ. ಅವನು—

ಧರ್ಮಾತ್ಮಾ ಸತ್ಯಸಂಧಶ್ಚ ರಾಮೋ ದಾಶರಥಿರ್ಯದಿ ।
ಪೌರುಷೇ ಚಾಪ್ರತಿದ್ವಂದ್ವಃ ಶರೈನಂ ಜಹಿ ರಾವಣಿಮ್ ॥

(ಯುದ್ಧ. ೯೧-೭೩)

"ದಶರಥಪುತ್ರನಾದ ಶ್ರೀರಾಮನು ಧರ್ಮಾತ್ಮನೂ ಸತ್ಯಸಂಧನೂ ಪೌರುಷದಲ್ಲಿ ಅಪ್ರತಿಮನೂ ಆಗಿರುವುದು ಸತ್ಯವಾದರೆ, ಎಲೈ ಅಸ್ತ್ರವೇ, ಈ ರಾವಣಪುತ್ರನನ್ನು ಸಂಹರಿಸು"—ಎಂದು ಶಪಥ ಪೂರ್ವಕವಾಗಿ ಅಸ್ತ್ರಪ್ರಯೋಗಮಾಡಿದನು. ರಾಮಮಂತ್ರವು ಐಂದ್ರಾಸ್ತ್ರಕ್ಕೆ ಇಂದ್ರಜಿತುವನ್ನು ಸಂಹರಿಸುವ ಚೈತನ್ಯವನ್ನೊದಗಿಸಿತು.

ಅಹೋರಾತ್ರೈಸ್ತ್ರಿಭಿರ್ವೀರಃ ಕಥಂಚಿದ್ವಿನಿಪಾತಿತಃ ॥

(ಯುದ್ಧ. ೯೨-೧೬)

"ಮೂರುದಿನಗಳವರೆಗೆ ಹಗಲೂ ರಾತ್ರಿಯೂ ಯುದ್ಧಮಾಡಿ ಆ ವೀರನನ್ನು ಹೇಗೋ ಸಂಹರಿಸಿದ್ದಾಯಿತು."

೫. ಅತ್ಯುನ್ನತಿಯ ಮಹಿಮೆಯೊಳ್ ಕೌಶಿಕಂ

ಶ್ರೀಮದ್ರಾಮಾಯಣದಲ್ಲಿ ಬರುವ ತಪೋಮಹಿಮಾನ್ವಿತರಲ್ಲಿ ಉನ್ನತಸ್ಥಾನವು ವಿಶ್ವಾಮಿತ್ರ ಮುನಿಗಳಿಗೆ ಸಲ್ಲುತ್ತದೆ ಕಥಾಸರಣಿಯಲ್ಲಿ ಅವರ ಪ್ರವೇಶದಂತೆ ನಿರ್ಗಮವೂ ಅನಿರೀಕ್ಷಿತ. ಇದ್ದಕ್ಕಿದ್ದಂತೆ ಅವರು ದಶರಥನ ಆಸ್ಥಾನವನ್ನು ಪ್ರವೇಶಿಸಿ ಶ್ರೀರಾಮನನ್ನು ತಮ್ಮೊಡನೆ ಕಳಿಸುವಂತೆ ದಶರಥನನ್ನು ಕೇಳುತ್ತಾರೆ. ಜಾನಕೀಪರಿಣಯವಾದೊಡನೆ ಮಿಥಿಲೆಯಿಂದ ನಿರ್ಗಮಿಸುತ್ತಾರೆ. ಪುನಃ ಅವರ ಸುಳಿವೇ ರಾಮಾಯಣದಲ್ಲಿಲ್ಲ. ಮಹಾಜ್ಯೋತಿಯಂತೆ ಕ್ಷಣಕಾಲ ಮಿನುಗಿ ಮರೆಯಾಗುತ್ತಾರೆ. ಅಲ್ಪಕಾಲದಲ್ಲಿಯೇ ಅವರೊತ್ತುವ ಪ್ರಭಾವಮುದ್ರೆ ನಮ್ಮ ಚಿತ್ತಭೂಮಿಕೆಯಲ್ಲಿ ನಿರಂತರ ಉಳಿಯುತ್ತದೆ.

"ಧಿಗ್ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋಬಲಂ ಬಲಮ್" ಎಂದು ಘೋಷಿಸಿ ದೈವ ದತ್ತವಾದ ಕ್ಷತ್ರಿಯಕಾಯವನ್ನು ಪೌರುಷದಿಂದ ಬ್ರಹ್ಮಮಯವಾಗಿ ಮಾಡಿಕೊಂಡ ವಿಶ್ವಾಮಿತ್ರರ ಅಸಮಸಾಹಸಕ್ಕೆ ಸರಿಗಟ್ಟುವ ನಿದರ್ಶನ ಪುರಾಣೇತಿಹಾಸಗಳಲ್ಲಿ ಇನ್ನೊಂದು ಸಿಗಲಾರದು. ಮಹಾಸಾಗರದ ಅಲೆಗಳಂತೆ ಎದ್ದೆದ್ದುಬಂದ ಎಡರುಗಳನ್ನು ಅಕಂಪ್ಯನಿರ್ಧಾರದಿಂದ ಎದುರಿಸಿದ ಮಲಯಾಚಲ ವಿಶ್ವಾಮಿತ್ರಮುನಿಗಳು. "ಅನ್ಯಮಿಂದ್ರಂ ಕರಿಷ್ಯಾಮಿ ಲೋಕೋ ವಾ ಸ್ಯಾದನಿಂದ್ರಕಃ" ಎಂಬ ಗಡಸುತನ ಇನ್ನೊಬ್ಬ ತಪಸ್ವಿಯಲ್ಲಿ ಕಾಣಸಿಗದು. "ನನಗೆ ಬ್ರಹ್ಮರ್ಷಿ ಪದವಿಯು ಬರುವವರೆಗೂ ತಪಸ್ಸುಮಾಡುವೆನು. ಇಂದ್ರಿಯಗಳನ್ನು ಜಯಿಸಿ ದೇಹವ ನ್ನೊಣಗಿಸುವೆನು.

ಅನುಚ್ಛ್ವಸನ್ನಭುಂಜಾನಸ್ತಿಷ್ಠೇಯಂ ಶಾಶ್ವತೀಃ ಸಮಾಃ ।
ನ ಹಿ ಮೇ ತಪ್ಯಮಾನಸ್ಯ ಕ್ಷಯಂ ಯಾಸ್ಯಂತಿ ಮೂರ್ತಯಃ ॥

(ಬಾಲ. ೬೪-೨೦)

ಉಸಿರಾಡದೆ ಆಹಾರವಿಲ್ಲದೆ ಶಾಶ್ವತಕಾಲದವರೆಗೂ ನಾನು ಇರಬಲ್ಲೆ. ನಾನು ತಪಸ್ಸು ಮಾಡುವಾಗ ನನ್ನ ಅವಯವಗಳು ಕುಂದವು, ಕುಗ್ಗವು" ಎಂಬ ದೃಢನಿಶ್ಚಯದಿಂದ ಗುರಿಯನ್ನು ಸಾಧಿಸಿದ ಸೀಮಾಪುರುಷರಿವರು.

ವಿಶ್ವಾಮಿತ್ರರ ಈ ಪೂರ್ವಕಥೆ ನೇರವಾಗಿ ರಾಮಾಯಣಕಥೆಗೆ ಸಂಬಂಧಿಸಿಲ್ಲ. ಆದರೆ ಅವರ ಪೂರ್ವಚರಿತೆಯನ್ನು ತಿಳಿಯುವ ಕುತೂಹಲವು ರಾಮಲಕ್ಷ್ಮಣರಲ್ಲಿ ಜನಿಸಿದಾಗ, ಅದನ್ನು ತಣಿಸುವುದಕ್ಕಾಗಿ ಶತಾನಂದರು ಪೂರ್ವಕಥೆಯನ್ನು ವಿವರಿಸಿದರು. ಕಥಾಶ್ರವಣಕುತೂಹಲವನ್ನು ರಾಮಲಕ್ಷ್ಮಣರಲ್ಲಿ ಕೆರಳಿಸಿದವರು ವಿಶ್ವಾಮಿತ್ರರೇ. ಆ ಬಾಲಕರಿಗೆ ಬೇಸರವಾಗದಿರಲೆಂದು ಅರಣ್ಯದಲ್ಲಿ ವಿಶ್ವಾಮಿತ್ರರು ವಿವಿಧಕಥೆಗಳನ್ನು ಹೇಳಿ ಕಥಾಶ್ರವಣದಲ್ಲಿ ಅವರಿಗೆ ಅಭಿರುಚಿಯನ್ನುಂಟು ಮಾಡಿದ್ದರು.

ಶ್ರೀರಾಮನನ್ನು ಮುಂದಿನ ಮಹಾಕಾರ್ಯಕ್ಕೆ ಸಿದ್ಧಪಡಿಸುವುದೇ ವಿಶ್ವಾಮಿತ್ರರ ಆಗಮನದ ಉದ್ದೇಶವೆಂದು ತೋರುತ್ತದೆ. ಅವರು ವಿಶೇಷವಾಗಿ ನೆಲೆಸಿದ್ದುದು ಹಿಮಾಲಯದ ಕೌಶಿಕೀತೀರದಲ್ಲಿ. ರಾಕ್ಷಸಬಹುಳವಾದ ಸಿದ್ಧಾಶ್ರಮಕ್ಕೆ ಬಂದು ಯಾಗದೀಕ್ಷೆಯನ್ನು ಕೈಗೊಳ್ಳುವುದರಲ್ಲಿ ಅನ್ಯೋದ್ದೇಶವಿರಲಾರದು.

ಅರಣ್ಯಗಳ ಪರಿಚಯ, ರಾಕ್ಷಸಸ್ವಭಾವದರ್ಶನ, ಋಷಿಗಳ ಸಹವಾಸ, ಲೋಕಾನುಭವ, ಪೂರ್ವಚರಿತಶ್ರವಣ—ಇವು ಶ್ರೀರಾಮನಿಗೆ ವಿಶ್ವಾಮಿತ್ರರಿಂದಾದ ಪ್ರಯೋಜನಗಳು. ಬಲಾ, ಅತಿಬಲಾ ಎಂಬ ಮಹಾವಿದ್ಯೆಗಳು ವಿಶ್ವಾಮಿತ್ರರಿಂದ ಲಭಿಸಿದವು. ತಾಟಕಾವಧೆಯಿಂದ ಅವರು ಸಂತುಷ್ಟರಾಗಿ ವಿವಿಧಾಯುಧಗಳನ್ನು ಶ್ರೀರಾಮನಿಗೆ ಕೊಟ್ಟು ಬಹುಬಗೆಯ ಮಂತ್ರಾಸ್ತ್ರಗಳನ್ನು ಉಪದೇಶಿಸಿದರು. ಶ್ರೀರಾಮನೊಡನೆ ಲಕ್ಷ್ಮಣನಿಗೂ ಅವುಗಳನ್ನು ಉಪದೇಶಿಸಿರಬಹುದೆಂದು ತೋರುತ್ತದೆ. ಯುದ್ಧಕಾಂಡದಲ್ಲಿ ಲಕ್ಷ್ಮಣನು ವಿವಿಧಮಂತ್ರಾಸ್ತ್ರಗಳನ್ನು ಉಪಯೋಗಿಸಿದನೆಂದೂ ಒಮ್ಮೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಬೇಕೆಂದು ಸಂಕಲ್ಪಿಸಿದನೆಂದೂ ವರ್ಣನೆ ಇದೆ.

ಶ್ರೀರಾಮನನ್ನು ಸಮರದಲ್ಲಿ ಅಪ್ರತಿದ್ವಂದ್ವನನ್ನಾಗಿ ಮಾಡಿದ ಕೀರ್ತಿ ವಿಶ್ವಾಮಿತ್ರರಿಗೆ ಸಲ್ಲುತ್ತದೆ. ಅಸ್ತ್ರವಿದರಲ್ಲಿ ವಿಶ್ವಾಮಿತ್ರರಿಗೆ ಸದೃಶರು ಇನ್ನೊಬ್ಬರಿರಲಿಲ್ಲ. ಈ ರಹಸ್ಯ ವಸಿಷ್ಠರಿಗೆ ಗೊತ್ತಿತ್ತು. ಆದ್ದರಿಂದಲೇ ದಶರಥನು ಶ್ರೀರಾಮನನ್ನು ಸಿದ್ಧಾಶ್ರಮಕ್ಕೆ ಕಳಿಸಲು ಹಿಂಜರಿದಾಗ ವಸಿಷ್ಠರು "ರಾಜ, ನಿಶ್ಚಿಂತೆಯಿಂದ ರಾಮನನ್ನು ವಿಶ್ವಾಮಿತ್ರರೊಡನೆ ಕಳಿಸು. ಇವರ ರಕ್ಷಣೆಯಲ್ಲಿರುವ ರಾಮನಿಗೆ ರಾಕ್ಷಸರಿಂದ ಯಾವ ಹಿಂಸೆಯೂ ಆಗದು. ವಿಶ್ವಾಮಿತ್ರರಿಗೆ ಗೊತ್ತಿರುವ ಮಂತ್ರಾಸ್ತ್ರಗಳು ಈ ಜಗತ್ತಿನಲ್ಲಿ ಇನ್ನು ಯಾರಿಗೂ ತಿಳಿದಿಲ್ಲ.

ಏಷ ವಿಗ್ರಹವಾನ್ ಧರ್ಮಃ ಏಷ ವೀರ್ಯವತಾಂ ವರಃ ।
ಏಷ ಬುದ್ಧ್ಯಾಧಿಕೋ ಲೋಕೇ ತಪಸಶ್ಚ ಪರಾಯಣಮ್ ॥

(ಬಾಲ. ೨೧-೧೦)

ವಿಶ್ವಾಮಿತ್ರಮುನಿಗಳೆಂದರೆ ಸಾಕ್ಷಾತ್ ಧರ್ಮಪುರುಷರು; ವೀರರಲ್ಲಿ ವೀರರು; ವಿದ್ಯಾನಿಧಿಗಳು; ತಪಸ್ಸಿನ ಪರಾಕಾಷ್ಠೆ ಇವರು. ರಾಕ್ಷಸರನ್ನು ಸದೆಬಡಿಯಲು ಇವರೇ ಸಮರ್ಥರಾದರೂ ನಿನ್ನ ಮಗನ ಶ್ರೇಯಸ್ಸಿಗಾಗಿ ಇಲ್ಲಿಗೆ ಬಂದು ನಿನ್ನನ್ನು ಬೇಡಿಕೊಳ್ಳುತ್ತಿದ್ದಾರೆ" ಎಂದು ಹೇಳಿದರು.

ವಸಿಷ್ಠರು ತಪೋಮಹಿಮೆಯಲ್ಲಿ ವಿಶ್ವಾಮಿತ್ರರಿಗಿಂತ ಕಡಮೆಯವರಲ್ಲ. ಅಧಿಕರೆಂದೇ ಹೇಳಬಹುದು. ಆದರೆ ರಾಮಾಯಣದಲ್ಲಿ ಅವರ ಪಾತ್ರ ಗೌಣ.

ವಿಶ್ವಾಮಿತ್ರರಂಥ ಅಸ್ತ್ರವಿದ್ಯಾಗುರುಗಳು ಶ್ರೀರಾಮನಿಗಲ್ಲದೆ ಇನ್ನೊಬ್ಬರಿಗೆ ಲಭಿಸಲಿಲ್ಲ. ಶ್ರೀರಾಮನಂಥ ಶಿಷ್ಯನು ಲಭಿಸಿದನೆಂದು ಅವರು ಸಂತೃಪ್ತರಾಗಿರಬೇಕು. ಅವನನ್ನು ಮಿಥಿಲೆಗೆ ಕರೆದೊಯ್ದು ಸಾಧ್ವೀಮಣಿಯಾದ ಜಾನಕಿಯೊಡನೆ ಮದುವೆಮಾಡಿಸಿ ಶಿಷ್ಯದಕ್ಷಿಣೆಯನ್ನಿತ್ತು ನಿರ್ಗಮಿಸಿದರು !

ವಿಶ್ವಾಮಿತ್ರರು ಶ್ರೀರಾಮನ ವ್ಯಕ್ತಿತ್ವದಮೇಲೆ ಎಷ್ಟು ಪ್ರಭಾವವನ್ನು ಬೀರಿದ್ದರೆಂಬುದು ಈ ಮಂಗಳಶ್ಲೋಕದಿಂದ ಗೊತ್ತಾಗುತ್ತದೆ.

> ವಿಶ್ವಾಮಿತ್ರಾಂತರಂಗಾಯ ಮಿಥಿಲಾನಗರೀಪತೇಃ ।
> ಭಾಗ್ಯಾನಾಂ ಪರಿಪಾಕಾಯ ಭವ್ಯರೂಪಾಯ ಮಂಗಲಮ್ ॥

ವಿಶ್ವಾಮಿತ್ರಾಂತರಂಗಾಯ : ಶ್ರೀರಾಮನು ವಿಶ್ವಾಮಿತ್ರರ ಅಂತರಂಗ. ಅವರ ಹೃದಯದಲ್ಲಿರುವ ರಹಸ್ಯವನ್ನರಿತವನು, ಅವರ ಗೂಢಾಶಯದಂತೆ ನಡೆದುಕೊಂಡವನು, ಅವರು ತಿಳಿದಿದ್ದ ವಿದ್ಯೆಗಳನ್ನು ಬಲ್ಲವನು, ಅವರ ಹೃದ್ದೇಶದಲ್ಲಿ ಸಾಕ್ಷಿಯಾಗಿದ್ದ ಚೈತನ್ಯ.

೬. ಚಾಪವಿದ್ಯಾಬಲದೊಳ್ ಸೌಮಿತ್ರಿ

ಬಾಲ್ಯದಿಂದಲೂ ರಾಮಲಕ್ಷ್ಮಣರಿಗೆ ಅಮಿತವಾದ ಸ್ನೇಹವಿತ್ತು. ರಾಮನಿದ್ದಲ್ಲಿ ಲಕ್ಷ್ಮಣನಿದ್ದಾನೆಂದೇ ತಿಳಿಯಬೇಕು. ಲಕ್ಷ್ಮಣನಿಲ್ಲದಿದ್ದರೆ ರಾಮನಿಗೆ ನಿದ್ರೆ ಬರುತ್ತಿರಲಿಲ್ಲ. ವ್ಯಾಪ್ಯಾನ್ನವು ರುಚಿಸುತ್ತಿರಲಿಲ್ಲ ರಾಮನು ತಮ್ಮ ಜೊತೆಗೆ ಬರಬೇಕೆಂದು ವಿಶ್ವಾಮಿತ್ರರು ಅಪೇಕ್ಷಿಸಿದರು. ರಾಮನೊಡನೆ ಲಕ್ಷ್ಮಣನೂ ಬಂದನು. ಅವನೇಕೆಂದು ವಿಶ್ವಾಮಿತ್ರರೂ ಕೇಳಲಿಲ್ಲ. ದಶರಥನೂ ವಿಚಾರಿಸಲಿಲ್ಲ. ರಾಮಲಕ್ಷ್ಮಣರ ಅನ್ಯೋನ್ಯ ಮೈತ್ರಿ ಅಷ್ಟು ವಿಖ್ಯಾತ, ಅಷ್ಟು ಸಹಜ. ವಿವಾಹಾನಂತರದಲ್ಲಿಯೂ ಶ್ರೀರಾಮನ ಅಂತಃಪುರವನ್ನು ಪ್ರವೇಶಿಸಲು ಲಕ್ಷ್ಮಣನಿಗೆ ಯಾವ ನಿರ್ಬಂಧವೂ ಇರಲಿಲ್ಲ.

ಶ್ರೀರಾಮನ ಸದ್ಗುಣಗಳಿಗೆ ಲಕ್ಷ್ಮಣನು ಮರುಳಾಗಿದ್ದನು. ಅವನಿಗೋಸ್ಕರ ಲಕ್ಷ್ಮಣನು ತಂದೆ, ತಾಯಿ, ಪತ್ನಿ, ರಾಜಭೋಗಗಳೆಲ್ಲವನ್ನೂ ತೊರೆದು ಅರಣ್ಯಕ್ಕೆ ನಡೆದನು. ವನವಾಸದ ಕಷ್ಟವನ್ನು ತಾನಾಗಿ ತನ್ನಮೇಲೆ ಹೊರಿಸಿಕೊಂಡನು. ತನ್ನ ಸಹಾಯದಿಂದ ಅಣ್ಣನ ಕಷ್ಟ ಕೊಂಚ ತಗ್ಗಬಹುದೇನೋ ಎಂಬ ಸ್ನೇಹಮಯವಾದ ಕರುಣೆ ಅದಕ್ಕೆ ನಿಮಿತ್ತ.

ಅವನಿಗೆ ಶ್ರೀರಾಮನಷ್ಟು ತಾಳ್ಮೆಯಿಲ್ಲ. ದುಡುಕಿನ ಸ್ವಭಾವವೆಂದೇ ಹೇಳಬಹುದು. ಅವನು ಸಂಶಯದೃಷ್ಟಿಯುಳ್ಳ ಕುಶಲಮತಿ. ದಶರಥನು ಕೈಕೇಯಿಯ ವಂಚನೆಯ ಬಲೆಯಲ್ಲಿ ಸಿಕ್ಕಿದನೆಂದು ಲಕ್ಷ್ಮಣನಿಗೆ ನಂಬಿಕೆಯಾಗಲಿಲ್ಲ. ದಶರಥ, ಕೈಕೇಯಿ–ಇಬ್ಬರೂ ಸೇರಿ ಶ್ರೀರಾಮನನ್ನು ಕಾಡಿಗೆ ಅಟ್ಟಲು ಹಂಚಿಕೆ ಹೂಡಿದ್ದಾರೆಂದು ಅವನು ಭಾವಿಸಿದನು. ಗಂಗಾತೀರದಲ್ಲಿ ಸೀತಾರಾಮರಿಗೆ ಮಲಗಲು ಹುಲ್ಲನ್ನು ಹಾಸಿಕೊಟ್ಟು ತಾನು ಧನುರ್ಧಾರಿಯಾಗಿ ರಾತ್ರಿಯೆಲ್ಲಾ ಕಾವಲಾಗಿದ್ದನು. ಕೈಕೇಯಿಯ ಹಸ್ತಕರು ದ್ರೋಹದಿಂದ ಶ್ರೀರಾಮನಮೇಲೆ ಕೈಮಾಡಬಹುದೆಂದು ಅವನ ಶಂಕೆ. ಚಿತ್ರಕೂಟದಲ್ಲಿ ಭರತಸೇನಾಗಮನವನ್ನು ಕಂಡು ಭರತನೇ ತಮ್ಮನ್ನು ಮುಗಿಸಲು ದಂಡೆತ್ತಿ ಬಂದಿದ್ದಾನೆಂದು ಅವನ ಊಹೆ. ಮಾರೀಚನು ಸ್ವರ್ಣಮೃಗವಾಗಿ ಬಂದಾಗ 'ಇದು ರಾಕ್ಷಸರ

ಮಾಯೆ, ನಂಬತಕ್ಕದ್ದಲ್ಲ ' ಎಂದು ಮರುಕ್ಷಣದಲ್ಲಿ ನಿರ್ಣಯಿಸಿ ಹೇಳಿದವನು ಲಕ್ಷ್ಮಣ. ಮಾರೀಚನು ಸಾಯುವಾಗ ವಂಚಿಸುವುದಕ್ಕಾಗಿ ಕೂಗಿದ ಆರ್ತಧ್ವನಿಯನ್ನು ಕೇಳಿ ' ಇದು ರಾಕ್ಷಸರ ಮೋಸ, ಸರ್ವಥಾ ಶ್ರೀರಾಮನ ಧ್ವನಿಯಲ್ಲ ' ಎಂದು ನಿರ್ಧರಿಸಿದವನು ಲಕ್ಷ್ಮಣ.

ಯುದ್ಧಕಾಂಡದವರೆಗೂ ಲಕ್ಷ್ಮಣನ ಚಾಪವಿದ್ಯಾಬಲಪ್ರದರ್ಶನಕ್ಕೆ ಸರಿಯಾದ ಸಮಯ ಸಿಗಲಿಲ್ಲ. ಖರದೂಷಣಪ್ರಸಂಗದಲ್ಲಿ ಶ್ರೀರಾಮನು ಆಣೆಯಿಟ್ಟು ಯುದ್ಧಮಾಡದಂತೆ ಲಕ್ಷ್ಮಣನನ್ನು ತಡೆದನು. ಒಮ್ಮೆ ಸುಗ್ರೀವನಮೇಲೆ ಕ್ರೋಧದಿಂದ ಏಕಾಕಿಯಾಗಿ ಕಿಷ್ಕಿಂಧೆಯೊಳಗೆ ನುಗ್ಗಿ ಹೋದನು. ವಿರಾಧ ಮತ್ತು ಕಬಂಧ - ಇವರಿಬ್ಬರ ಬಾಹುಚ್ಛೇದಗಳು ಮಾತ್ರ ಯುದ್ಧಕಾಂಡ ಪರ್ಯಂತ ಅವನ ಶೌರ್ಯಪ್ರದರ್ಶನ ನಿದರ್ಶನಗಳು.

ಲಂಕೆಯ ಬಳಿ ವಾನರಸೇನಾವ್ಯೂಹವು ಸಂನದ್ಧವಾಗಿ ನಿಂತಿತು. ಶ್ರೀರಾಮನ ಪಾರ್ಶ್ವದಲ್ಲಿ ಲಕ್ಷ್ಮಣನು ಸಜ್ಜಾಗಿ ನಿಂತಿದ್ದನು. ಆಗ ಶುಕನು ರಾವಣನಿಗೆ ಶತ್ರುಬಲದ ಪರಿಚಯ ಮಾಡಿಕೊಡುತ್ತ ಲಕ್ಷ್ಮಣನನ್ನು ತೋರಿಸಿ ಹೀಗೆಂದನು :

ಯಸ್ಯೈಷ ದಕ್ಷಿಣೇ ಪಾರ್ಶ್ವೇ ಶುದ್ಧಜಾಂಬೂನದಪ್ರಭಃ ।
ವಿಶಾಲವಕ್ಷಾಸ್ತಾಮ್ರಾಕ್ಷೋ ನೀಲಕುಂಚಿತಮೂರ್ಧಜಃ ॥
ಏಷೋಽಸ್ಯ ಲಕ್ಷ್ಮಣೋ ನಾಮ ಭ್ರಾತಾ ಪ್ರಾಣಸಮಃ ಪ್ರಿಯಃ ।
ನಯೇ ಯುದ್ಧೇ ಚ ಕುಶಲಃ ಸರ್ವಶಸ್ತ್ರಭೃತಾಂ ವರಃ ॥
ಅಮರ್ಷೀ ದುರ್ಜಯೋ ಜೇತಾ ವಿಕ್ರಾಂತೋ ಬುದ್ಧಿಮಾನ್ ಬಲೀ ।
ರಾಮಸ್ಯ ದಕ್ಷಿಣೋ ಬಾಹುರ್ನಿತ್ಯಂ ಪ್ರಾಣೋ ಬಹಿಶ್ಚರಃ ॥
ನ ಹ್ಯೇಷ ರಾಘವಸ್ಯಾರ್ಥೇ ಜೀವಿತಂ ಪರಿರಕ್ಷತಿ ।
ಏಷೈವಾಶಂಸತೇ ಯುದ್ಧೇ ನಿಹಂತುಂ ಸರ್ವರಾಕ್ಷಸಾನ್ ॥

(ಯುದ್ಧ. ೨೮—೨೨, ೨೩, ೨೪, ೨೫)

“ ರಾಕ್ಷಸೇಶ್ವರ, ಇತ್ತ ನೋಡು. ರಾಮನ ಬಲಪಾರ್ಶ್ವದಲ್ಲಿ ಅಪರಂಜಿಯ ಮೈಬಣ್ಣದವನೂ ವಿಶಾಲವಕ್ಷನೂ ಕಪ್ಪುಬಣ್ಣದ ಗುಂಗುರು ಕೇಶರಾಶಿಯುಳ್ಳವನೂ ಆದ ಒಬ್ಬನು ರಕ್ತನೇತ್ರನಾಗಿ ನಿಂತಿರುವನಲ್ಲ, ಅವನೇ ಲಕ್ಷ್ಮಣ ; ರಾಮನಿಗೆ ಪ್ರಾಣಪ್ರಿಯನಾದ ತಮ್ಮ. ಅವನು ರಾಜನೀತಿ ಯಲ್ಲಿಯೂ ಯುದ್ಧದಲ್ಲಿಯೂ ವಿಶಾರದ. ಶಸ್ತ್ರಧಾರಿಗಳಲ್ಲಿ ಅಗ್ರೇಸರ. ಅವಮಾನವನ್ನು ಸಹಿಸದ ವೀರ. ಅವನನ್ನು ಗೆಲ್ಲುವುದು ಅಶಕ್ಯ. ಪರಾಕ್ರಮ, ಬುದ್ಧಿ, ಬಲಗಳು ಲಕ್ಷ್ಮಣನಲ್ಲಿ ನೆಲಸಿವೆ. ಅವನು ರಾಮನ ಬಲಗೈಯಾಗಿದ್ದಾನೆ. ರಾಮನಿಗೆ ಹೊರಗಡೆ ಸಂಚರಿಸುವ ಪ್ರಾಣ ವೆನಿಸಿದ್ದಾನೆ. ರಾಮನ ಕಾರ್ಯಕ್ಕಾಗಿ ಅವನು ಜೀವವನ್ನೇ ಅರ್ಪಿಸುತ್ತಾನೆ. ಲಕ್ಷ್ಮಣನು ತಾನೊಬ್ಬನೇ ಸಮಸ್ತರಾಕ್ಷಸರನ್ನು ವಧಿಸಲು ಉತ್ಸಾಹಿಯಾಗಿದ್ದಾನೆ.”

ಇದು ಶತ್ರುಪಕ್ಷದಿಂದ ಲಕ್ಷ್ಮಣನಿಗೆ ಬಂದ ಪ್ರಶಸ್ತಿ. ಲಕ್ಷ್ಮಣನು ಯಾವ ರಾಕ್ಷಸನಾಯಕ ರೊಡನೆ ಯುದ್ಧಮಾಡಿದನೋ ಅವರು ಮುಖ್ಯವಾಗಿ ನಾಲ್ವರು: ರಾವಣ, ಕುಂಭಕರ್ಣ, ಅತಿಕಾಯ ಮತ್ತು ಇಂದ್ರಜಿತು. ರಾವಣನೊಡನೆ ಹಲವಾರು ಸಲ ಯುದ್ಧ ನಡೆಯಿತು. ರಾವಣನು ಲಕ್ಷ್ಮಣನ ಯುದ್ಧಸಾಮರ್ಥ್ಯ, ಹಸ್ತಲಾಘವಗಳನ್ನು ಕಂಡು ' ವಿಸಿಷ್ಮಿಯೇ ' ಆಶ್ಚರ್ಯಚಕಿತ ನಾದನು. ಕುಂಭಕರ್ಣನೊಡನೆ ಸರಿಸಮವಾಗಿ ನಿಂತು ಯುದ್ಧಮಾಡಿದವರು ರಾಮಲಕ್ಷ್ಮಣ ರೀರ್ವರೇ. ಕುಂಭಕರ್ಣನು ಲಕ್ಷ್ಮಣನೊಡನೆ ಬಹಳಹೊತ್ತು ಹೋರಾಡಿ “ ಲಕ್ಷ್ಮಣ, ನಿನ್ನ

ಧೈರ್ಯ, ಬಲೋತ್ಸಾಹಗಳಿಂದ ನನಗೆ ತೃಪ್ತಿಯಾಯಿತು. ಆದರೆ ನಾನು ರಾಮನನ್ನು ಹುಡುಕುತ್ತಿದ್ದೇನೆ " ಎಂದು ಹೇಳಿ ಮುಂದಕ್ಕೆ ಹೋದನು. ರಾವಣ, ಕುಂಭಕರ್ಣರಿಬ್ಬರೂ ಶ್ರೀರಾಮನಿಂದ ಹತರಾಗಲು ಮೀಸಲಾಗಿದ್ದವರು. ರಾಕ್ಷಸಬಲದಲ್ಲಿದ್ದ ಉಳಿದ ಮಹಾಶೂರರು ಇಬ್ಬರೇ : ಅತಿಕಾಯ ಮತ್ತು ಇಂದ್ರಜಿತು. ಇವರಿಬ್ಬರನ್ನೂ ಲಕ್ಷ್ಮಣನು ಸಂಹರಿಸಿದನು.

ಇಂದ್ರಜಿತುವಿನ ಪೀಡೆ ಶ್ರೀರಾಮನಿಗೆ ತಲೆನೋವಾಗಿ ಪರಿಣಮಿಸಿತು. ಅವನ ಮಾಯಾಬಲ, ಅಸ್ತ್ರವಿದ್ಯಾಬಲಗಳು ಅದಮ್ಯವಾಗಿ ತೋರಿದವು. ಆ ಸಮಯದಲ್ಲಿ ಶ್ರೀರಾಮನಿಗೆ ಧೈರ್ಯ ಹೇಳಿದವನು ವಿಭೀಷಣ. ಅವನು ರಾಮಸೇನೆಯಲ್ಲಿ ಸಂಚರಿಸುತ್ತ ಎಲ್ಲರ ಬಲಪರಾಕ್ರಮಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಿದ್ದನು. ಇಂದ್ರಜಿತುವನ್ನು ಸಂಹರಿಸಲು ಲಕ್ಷ್ಮಣನೇ ಸಮರ್ಥನೆಂದೂ ಅವನು ಸಂನದ್ಧನಾಗಿ ನಿಕುಂಭಿಳೆಗೆ ನುಗ್ಗಬೇಕೆಂದೂ ಸೂಚಿಸಿದನು. ಅದರಂತೆ ಶ್ರೀರಾಮನು ಒಪ್ಪಿ ಲಕ್ಷ್ಮಣನಿಗೆ ಅನುಮತಿಯನ್ನಿತ್ತೊಡನೆ,

ಜಗ್ರಾಹ ಕಾರ್ಮುಕಶ್ರೇಷ್ಠಮಂತ್ಯದ್ಭುತಪರಾಕ್ರಮಃ ॥

" ಅದ್ಭುತಪರಾಕ್ರಮನಾದ ಲಕ್ಷ್ಮಣನು ಶ್ರೇಷ್ಠವಾದ ಧನುಸ್ಸನ್ನು ಕೈಗೆ ತೆಗೆದುಕೊಂಡನು."

ಲಕ್ಷ್ಮಣನಿಗೂ ಇಂದ್ರಜಿತುವಿಗೂ ಹಗಲು ರಾತ್ರಿಯೆನ್ನದೆ ಮೂರು ದಿನಗಳವರೆಗೆ ಅವಿಚ್ಛಿನ್ನವಾದ ಘೋರಸಂಗ್ರಾಮ ನಡೆಯಿತು. ಇಂದ್ರಜಿತು ಹತನಾದನು.

ಲಕ್ಷ್ಮಣನ ಅಸ್ತ್ರವಿದ್ಯಾಬಲದ ವಿಷಯವಾಗಿ ಶ್ರೀರಾಮನ ಬಾಯಿಂದ ಬಂದ ಪ್ರಶಸ್ತಿ ಇದು :

ವಿಸಸರ್ಜೈಕವೇಗೇನ ಪಂಚ ಬಾಣಶತಾನಿ ಯಃ ।
ಇಷ್ವಸ್ತ್ರೇಷ್ವಧಿಕಸ್ತಸ್ಮಾತ್ ಕಾರ್ತವೀರ್ಯಾಚ್ಚ ಲಕ್ಷ್ಮಣಃ ॥

(ಯುದ್ಧ. ೪೯—೨೦)

" ಲಕ್ಷ್ಮಣನು ಒಂದೇಸಲಕ್ಕೆ ಸಮಾನವೇಗದಿಂದ ಐನೂರು ಬಾಣಗಳನ್ನು ಬಿಡಲು ಸಮರ್ಥ, ಆದ್ದರಿಂದ ಇವನು ಚಾಪವಿದ್ಯಾಬಲದಲ್ಲಿ (ಸಹಸ್ರಬಾಹುವಾದ) ಕಾರ್ತವೀರ್ಯನಿಗಿಂತ ಅಧಿಕನಾಗಿದ್ದಾನೆ."

೭. ಸೌ ಶೀ ಲ್ಯ ದೊ ಳ ವ ನಿ ಜೆ

ಜನಕಸ್ಯ ಕುಲೇ ಜಾತಾ ದೇವಮಾಯೇವ ನಿರ್ಮಿತಾ ।
ಸರ್ವಲಕ್ಷಣಸಂಪನ್ನಾ ನಾರೀಣಾಮುತ್ತಮಾ ವಧೂಃ ॥

(ಬಾಲ. ೧—೨೭)

ಎಂದು ವಾಲ್ಮೀಕಿಮುನಿಗಳು ಗ್ರಂಥಾರಂಭದಲ್ಲಿ ಕೀರ್ತಿಸಿದ್ದಾರೆ. " ಜನಕವಂಶದಲ್ಲಿ ಜನಿಸಿದವಳು " ಎಂಬುದರಿಂದ ಶ್ರೇಷ್ಠವಂಶವನ್ನೂ, " ದೇವಮಾಯೆಯೋ ಎಂಬಂತೆ ಇದ್ದಳು " ಎಂಬುದರಿಂದ ಸೌಂದರ್ಯಾತಿಶಯವನ್ನೂ " ಸರ್ವಲಕ್ಷಣಸಂಪನ್ನೆ " ಎಂಬುದರಿಂದ ಸಕಲಸದ್ಗುಣಗಳನ್ನೂ ನಿರೂಪಿಸಿದ್ದಾರೆ. " ಸ್ತ್ರೀಯರಲ್ಲಿ ಅವಳು ಅತ್ಯುತ್ತಮಳು "—ಎಂಬುದು ಫಲಿತಾರ್ಥಕಥನ. ಸೀತೆಯ ದಿವ್ಯಚಿತ್ರಣದ ಸೂತ್ರವಿದು. ಮುಂದಿನ ಕಥಾವರ್ಣನೆಯೆಲ್ಲವೂ ಇದರ ಭಾಷ್ಯ.

ಶ್ರೀರಾಮನಿಗೆ ಸೀತೆಯು ವೀರ್ಯಶುಲ್ಕೆಯಾಗಿ ಲಭಿಸಿದರೂ ಮಹಾಮಹಿಮರಾದ ವಿಶ್ವಾಮಿತ್ರರು ಗೊತ್ತುಮಾಡಿದ ಪತ್ನಿ ಅವಳು. ಜನಕರಾಜನಿಗೆ ಔರಸಪುತ್ರಿಯಾದ ಊರ್ಮಿಳೆ

ಯಲ್ಲಿದ್ದುದಕ್ಕಿಂತ ಹೆಚ್ಚಿನ ಪ್ರೀತಿವಾತ್ಸಲ್ಯಗಳು 'ಜಾನಕಿ'ಯಲ್ಲಿದ್ದುವು. ಅವಳಿಗೆ ತಕ್ಕವರನ್ನು ಅರಸಲು ಅವನು ಅಗಾಧವಾದ ಶ್ರಮವನ್ನು ವಹಿಸಿದ್ದನು. ಜನಕರಾಜನ 'ಭಾಗ್ಯಪರಿಪಾಕ'ವಾಗಿ ಶ್ರೀರಾಮನು ಅಳಿಯನಾದನು.

ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ ।
ಪತಿವ್ರತಾ ಮಹಾಭಾಗಾ ಛಾಯೇವಾನುಗತಾ ಸದಾ ॥

"ನನ್ನ ಮಗಳಾದ ಈ ಸೀತೆ ನಿನಗೆ ಸಹಧರ್ಮಚಾರಿಣಿಯಾಗಿರುತ್ತಾಳೆ. ಇವಳು ಪತಿವ್ರತೆಯೂ ಮಹಾಭಾಗ್ಯಶಾಲಿನಿಯೂ ಆಗಿ ನೆರಳಿನಂತೆ ಸದಾ ನಿನ್ನನ್ನು ಅನುಸರಿಸಿಕೊಂಡಿರುವಳು"—ಎಂದು ಹೇಳಿ ಜನಕರಾಜನು ಸೀತೆಯನ್ನು ಶ್ರೀರಾಮನಿಗೆ ಧಾರೆಯೆರೆದು ಕೊಟ್ಟನು.

ನೆರಳಿನಂತೆಯೇ ಸೀತೆಯು ಪತಿಯನ್ನು ಅನುಸರಿಸಿಕೊಂಡಿದ್ದಳು. ನೆರಳಿನಂತೆಯೇ ಅರಣ್ಯಕ್ಕೆ ಹಿಂಬಾಲಿಸಿ ನಡೆದಳು. "ಕೃತಕೃತ್ಯಾಹಿ ವೈದೇಹೀ ಛಾಯೇವಾನುಗತಾ ಪತಿಮ್." ಶ್ರೀರಾಮನು ವನವಾಸದ ಕಷ್ಟವನ್ನು ಬಗೆಬಗೆಯಾಗಿ ವರ್ಣಿಸಿ ಕಾಡಿಗೆ ಬರಬೇಡವೆಂದನು. ಅವಳು ಕೇಳಲಿಲ್ಲ. "ನಿನ್ನೊಡನಿದ್ದರೆ ನನಗೆ ಯಾವ ಕಷ್ಟವೂ ತೋರುವುದಿಲ್ಲ"—ಎಂದಳು. ವನ್ಯಮೃಗಗಳ ಭೀತಿಯನ್ನು ತೋರಿಸಿದನು. "ನಿನ್ನನ್ನು ನೋಡಿದೊಡನೆ ಅವು ಹೆದರಿ ಓಡುತ್ತವೆ"—ಎಂದಳು. ಹಸಿವು ಬಾಯಾರಿಕೆಗಳ ಹೆದರಿಕೆಯನ್ನು ಹೇಳಿದನು. "ನೀನು ತಿಂದು ಮಿಕ್ಕುದನ್ನು ತಿನ್ನುವೆನು ಹಸಿವು ಬಾಯಾರಿಕೆಗಳ ಹೆಸರನ್ನು ನಾನು ಎತ್ತುವುದಿಲ್ಲ"—ಎಂದಳು. ಕಲ್ಲುಮುಳ್ಳುಗಳ ತೊಂದರೆಯನ್ನು ತಿಳಿಸಿದನು. "ಕಲ್ಲುಮುಳ್ಳುಗಳನ್ನು ತೆಗೆದು ನಿನಗೆ ದಾರಿಮಾಡಿಕೊಡುತ್ತ ಮುಂದೆ ಹೋಗುವೆನು"—ಎಂದಳು! ರಾಕ್ಷಸರ ಕಾಟವನ್ನು ವರ್ಣಿಸಿದನು. "ನಿಖಿಲರಾಕ್ಷಸರನ್ನು ನೀನು ಕೊಲ್ಲಲು ಸಮರ್ಥನಲ್ಲವೆ?"—ಎಂದು ಕೇಳಿದಳು. ಬಂಧುಗಳನ್ನಗಲಿರುವುದು ಕಷ್ಟಕರವೆಂದನು. "ನಿನ್ನೊಡನಿದ್ದರೆ ತವರುಮನೆಯೇ ನನಗೆ ನೆನಪಾಗದು"—ಎಂದು ಉತ್ತರಿಸಿದಳು. ಅರಮನೆಯಲ್ಲಿ ನೀನು ಸುಖದಲ್ಲಿರು" ಎಂದನು. "ನೀನಿಲ್ಲದ ಸ್ವರ್ಗವೂ ನನಗೆ ಬೇಡ" ಎಂದು ತಿಳಿಸಿದಳು. ಅತ್ತೆ ಮಾವಂದಿರನ್ನು ಸೇವಿಸುತ್ತಿರುವುದು ನಿನಗೆ ಯೋಗ್ಯವೆಂದನು. "ಗಂಡನಿಗಿಂತ ದೊಡ್ಡ ದೇವತೆ ನನಗಿಲ್ಲ" ಎಂದು ನುಡಿದಳು. ನನ್ನ ಮಾತನ್ನು ಉಪೇಕ್ಷಿಸಿ ಕಾಡಿಗೆ ಬರುವುದು ಧರ್ಮವಲ್ಲವೆಂದನು. "ಯಾವುದು ಧರ್ಮವೆಂಬುದನ್ನು ನನ್ನ ತಾಯಿತಂದೆಗಳು ಕಲಿಸಿದ್ದಾರೆ"—ಎಂದು ಉತ್ತರಹೇಳಿದಳು! ಕಡೆಗೆ ಶ್ರೀರಾಮನು "ಪ್ರಿಯೆ, ನೀನು ವನವಾಸಕ್ಕಾಗಿಯೇ ಜನಿಸಿದಂತಾಯಿತು. ಆಗಲಿ, ನನ್ನೊಡನೆ ಬಂದು ಸಹಧರ್ಮಚಾರಿಣಿಯಾಗಿರು. ಇನ್ನು ಅರಣ್ಯಗಮನಕ್ಕೆ ಬೇಕಾದ ಸನ್ನಾಹಗಳನ್ನು ಮಾಡು"—ಎಂದನು. ಸೀತೆಯು ಸಂತೋಷದಿಂದ ಹಿಗ್ಗುತ್ತ ವನವಾಸಕ್ಕೆ ಸಿದ್ಧಳಾದಳು.

ಶ್ರೀರಾಮನು ತನ್ನ ಪಟ್ಟಾಭಿಷೇಕವು ತಪ್ಪಿತೆಂದೂ ತಾನು ಹದಿನಾಲ್ಕುವರ್ಷ ವನವಾಸಕ್ಕಾಗಿ ಹೊರಡುವೆನೆಂದೂ ಸೀತೆಗೆ ತಿಳಿಸಿದಾಗ, ಅವಳು ದಶರಥನ ವಿಷಯದಲ್ಲಾಗಲಿ ಕೈಕೇಯಿಯ ವಿಷಯದಲ್ಲಾಗಲಿ ಒಂದು ಬಿರುನುಡಿಯನ್ನಾದರೂ ಆಡಿದಳೆ? ಅದೊಂದೂ ತನಗೆ ಸೇರಿದುದಲ್ಲ—ತಾನು ಕೇಳತಕ್ಕದ್ದಲ್ಲವೆಂದು ತಿಳಿದು ಆ ಸುಶೀಲೆ ಒಂದು ಚಕಾರವನ್ನೂ ಎತ್ತಲಿಲ್ಲ. ಶ್ರೀರಾಮನು ತನ್ನನ್ನು ಅರಮನೆಯಲ್ಲಿ ಬಿಟ್ಟುಹೋಗಲು ಉದ್ದೇಶಿಸಿದ್ದಾನೆಂದು ತಿಳಿದು ಅವಳಿಗೆ ದುಃಖವಾಯಿತು. ಆ ವಿಷಯದಲ್ಲಿ ಅವಳು ಹಠಹಿಡಿದಳು, ಸುಮಂತ್ರನು ರಾಮಲಕ್ಷ್ಮಣರನ್ನು ಕಾಡಿಗೆ ಕರೆದೊಯ್ಯಲು ರಥವನ್ನು ತಂದಾಗ ಮೊದಲು ರಥವನ್ನು ಹತ್ತಿದವಳು ಸೀತೆ.

ದಶರಥನು ಕಾಮವಶನಾಗಿ ತಪ್ಪು ಮಾಡಿದನೆಂದು ಶ್ರೀರಾಮನು ಹೇಳಿದ್ದುಂಟು. ಕ್ಷುದ್ರಳಾದ ಕೈಕೇಯಿಯು ಕೌಸಲ್ಯೆಗೆ ತೊಂದರೆಯನ್ನು ಕೊಡಬಹುದೆಂದು ಚಿಂತಿಸಿದ್ದುಂಟು. ಅಯೋಧ್ಯೆಯನ್ನು ಬಿಟ್ಟು ಬಂದುದಕ್ಕಾಗಿ ಚಿತ್ತಕ್ಷೋಭೆಯನ್ನು ಪಡೆದದ್ದುಂಟು. ಆದರೆ ಸಾಧ್ವೀಶಿರೋಮಣಿಯಾದ ಜಾನಕಿ ಒಮ್ಮೆಯೂ ದಶರಥಾದಿಗಳಲ್ಲಿ ತಪ್ಪನ್ನೆಣಿಸಲಿಲ್ಲ. ಸುಖದ ದಿನಗಳನ್ನು ಸ್ಮರಿಸಿಕೊಳ್ಳಲಿಲ್ಲ. ಕಷ್ಟದಲ್ಲಿ ತವರುಮನೆಯನ್ನು ನೆನೆಯಲಿಲ್ಲ. ಅವಳ ಸೌಶೀಲ್ಯವನ್ನು ಅನಸೂಯೆ ಮೆಚ್ಚಿದಳು. ಅಗಸ್ತ್ಯರು ಹೊಗಳಿದರು.

ವನವಾಸವು ಅನಿವಾರ್ಯವಾಗಿ ಗಂಟುಬಿದ್ದಿತೆಂದು ಹೇಗೋ ಕಷ್ಟದಿಂದ ಅದನ್ನು ಸೀತೆಯು ಸಹಿಸಿಕೊಂಡಳೆಂದು ತಿಳಿಯಬಾರದು. ಅವಳು ಸಂತೃಪ್ತಿಯಿಂದಲೇ ವನವಾಸವನ್ನು ಅನುಭವಿಸಿದಳು. ಋಷಿಗಳ, ಋಷಿಪತ್ನಿಯರ ಸೇವೆಗೈಯುತ್ತ, ವೃಕ್ಷಲತಾಗುಲ್ಮಗಳಲ್ಲಿ ವಿಹರಿಸುತ್ತ, ವನ್ಯಮೃಗಪಕ್ಷಿಗಳನ್ನು ನೋಡಿ ನಲಿಯುತ್ತ, ಹೂಗಳನ್ನು ಬಿಡಿಸುತ್ತ, ನದೀಸರೋವರಗಳಲ್ಲಿ ಶ್ರೀರಾಮನೊಡನೆ ಜಲಕ್ರೀಡೆಯಾಡುತ್ತ, ಧರ್ಮವಿಚಾರಗಳನ್ನು ಚರ್ಚಿಸುತ್ತ, ಪರ್ಣಶಾಲೆಯಲ್ಲಿ ಗೃಹಿಣೀಕೃತ್ಯವನ್ನು ನಿರ್ವಹಿಸುತ್ತ ಕಾಲಕಳೆದಳು. ಕೆಲವುಸಲ ಲಕ್ಷ್ಮಣನೊಡನೆ ಬಹಳಹೊತ್ತು ಹರಟೆಹೊಡೆಯುತ್ತಿದ್ದಳೆಂದು ತೋರುತ್ತದೆ! ರಾವಣನು ಸೀತೆಯನ್ನು ಅಪಹರಿಸಿದಮೇಲೆ ಶ್ರೀರಾಮನು ಸೀತಾವಿರಹದಿಂದ ದುಃಖಿಸುತ್ತ ಹೀಗೆ ವಿಲಪಿಸುತ್ತಾನೆ.

"ಲಕ್ಷ್ಮಣ, ನನ್ನ ಸೀತೆ ಈ ಕಲ್ಲುಬಂಡೆಯ ಮೇಲೆ ನನ್ನೊಡನೆ ಕುಳಿತುಕೊಂಡು ನಗುತ್ತ ನಿನ್ನೊಂದಿಗೆ ವಿಧವಿಧವಾಗಿ ಬಹಳ ಮಾತನಾಡುತ್ತಿದ್ದಳಲ್ಲವೆ?"

(ಅರಣ್ಯ. ೬೩—೧೨)

ಸೀತೆಗೆ ವನವಾಸದಲ್ಲಿ ಮನಃಶಾಂತಿಯೇ ದೊರೆಯಿತೆಂದು ಹೇಳಬಹುದು. ಅವಳ ಸಾಧುಸ್ವಭಾವಕ್ಕೆ ಕಾಡಿನ ಶಾಂತಜೀವನ ಒಗ್ಗಿತು. ಅಯೋಧ್ಯೆಯಲ್ಲಿನ ರಾಜವೈಭವಕ್ಕಿಂತ ಅರಣ್ಯದಲ್ಲಿನ ತಾಪಸವೃತ್ತಿ ಅವಳಿಗೆ ಹಿತಕರವೆನಿಸಿತು. ಶ್ರೀರಾಮನು ರಾಕ್ಷಸವಧೆಯ ಸಂಕಲ್ಪವನ್ನು ತ್ಯಜಿಸಿ ಆಯುಧಗಳನ್ನು ದೂರವಿಡುವುದು ಯುಕ್ತವೆಂದು ಅವಳು ತಿಳಿದಳು. ಅಯೋಧ್ಯೆಗೆ ಹಿಂದಿರುಗುವುದಕ್ಕೆ ಪ್ರತಿಯಾಗಿ ಶ್ರೀರಾಮನು ವನದಲ್ಲಿ ತಪೋನಿರತನಾದರೆ ಒಳ್ಳೆಯದೇ ಸರಿ ಎಂದು ಅವಳು ಆಶಿಸಿದಳು. (ಅರಣ್ಯ. ೯—೨೯)

ದೀರ್ಘಕಾಲದ ಅರಣ್ಯವಾಸ ಆ ಸುಕುಮಾರಿಗೆ ಅತಿ ಘೋರವೇ ಸರಿ. ಆದರೆ ಪತಿಸಾನ್ನಿಧ್ಯದಲ್ಲಿ ಯಾವ ಕಷ್ಟವೂ ಅವಳ ಗಣನೆಗೆ ಬರಲಿಲ್ಲ. ಲಂಕೆಯಲ್ಲಿ ಅವಳು ಅನುಭವಿಸಿದ ಮನೋಯಾತನೆ ತೀವ್ರವಾದುದು. ಅಂತಹ ಸಂದರ್ಭದಲ್ಲಿಯೂ ಹನುಮಂತನೊಡನೆ ರಾಮಲಕ್ಷ್ಮಣರ ಕುಶಲವನ್ನು ವಿಚಾರಿಸುತ್ತಾಳೆ. ಸೀತೆಯಲ್ಲಿದ್ದ ಶ್ರೀರಾಮನ ಪ್ರೇಮವನ್ನೂ ಅವನ ಶೋಕಪರಾಯಣತೆಯನ್ನೂ ಹನುಮಂತನು ತಿಳಿಸಿದಾಗ, ಸಂತೋಷ ದುಃಖಗಳೆರಡೂ ಒಟ್ಟಿಗೆ ಸಂಭವಿಸಿದವು.

ಅಮೃತಂ ವಿಷಸಂಸೃಷ್ಟಂ ತ್ವಯಾ ವಾನರ ಭಾಷಿತಮ್ ।
ಯಚ್ಚ ನಾನ್ಯಮನಾ ರಾಮೋ ಯಚ್ಚ ಶೋಕಪರಾಯಣಃ ॥

(ಸುಂದರ. ೩೭—೨)

"ಹನುಮಂತ, ರಾಮನು ಬೇರೆ ಏನನ್ನೂ ಚಿಂತಿಸದೆ ನನ್ನನ್ನೇ ಸ್ಮರಿಸಿಕೊಳ್ಳುವನೆಂದೂ ನನಗಾಗಿ ಶೋಕದಲ್ಲಿ ಮುಳುಗಿರುವನೆಂದೂ ಹೇಳಿದೆಯಲ್ಲ—ಇದು ವಿಷಮಿಶ್ರವಾದ ಅಮೃತ"—ಎಂದಳು,

ಅಶೋಕವನದಲ್ಲಿ ರಾಕ್ಷಸಿಯರು ಸುತ್ತಲೂ ಮುತ್ತಿಕೊಂಡು ಸೀತೆಯನ್ನು ಪೀಡಿಸುತ್ತಿದ್ದ ಬಗೆಯನ್ನು ಹನುಮಂತನು ಕಂಡಿದ್ದನು. ರಾವಣವಧೆಯನ್ನೂ ರಾಮವಿಜಯವನ್ನೂ ಸೀತೆಗೆ ನಿವೇದಿಸುವುದಕ್ಕಾಗಿ ಪುನಃ ಅಶೋಕವನಕ್ಕೆ ಹೋದಾಗ, ಹನುಮಂತನಿಗೆ ಆ ರಾಕ್ಷಸಿಯರಮೇಲೆ ಸೇಡುತೀರಿಸಿಕೊಳ್ಳಬೇಕೆನ್ನಿಸಿತು. ಅವನು ಸೀತೆಯನ್ನು ಕುರಿತು “ದೇವಿ, ಈ ರಾಕ್ಷಸಿಯರು ನಿನಗೆ ಬಹಳ ಹಿಂಸೆಯನ್ನು ಕೊಟ್ಟಿದ್ದಾರೆ. ಇವರನ್ನು ಚಿತ್ರಹಿಂಸೆಯಿಂದ ಕೊಲ್ಲಬೇಕೆಂದಿದ್ದೇನೆ!”—ಎಂದು ಹೇಳಿದನು. ಆಗ ಸೀತೆಯು “ವಾನರೋತ್ತಮ, ಈ ರಾಕ್ಷಸಿಯರು ತಮ್ಮ ಪ್ರಭುವಿಗೆ ವಿಧೇಯರಾಗಿದ್ದ ದಾಸಿಯರು. ರಾವಣನ ಆಜ್ಞೆಯಂತೆ ಅವರು ನನ್ನನ್ನು ಹಿಂಸಿಸಿದರು. ಅದು ಅವರ ಕರ್ತವ್ಯವಾಗಿತ್ತು. ನನ್ನ ದುರ್ಭಾಗ್ಯದ ಫಲ ನನಗೆ ಸಂದಿತು. ಈ ರಾಕ್ಷಸಿಯರನ್ನು ಈಗ ಪೀಡಿಸುವುದು ಅಧರ್ಮ”—ಎಂದಳು. ಆಗ ಹನುಮಂತನು ವಿಸ್ಮಿತನಾಗಿ “ತಾಯಿ ಶ್ರೀರಾಮನಿಗೆ ತಕ್ಕ ಧರ್ಮಪತ್ನಿ ನೀನು!”—ಎಂದು ಉದ್ಗರಿಸಿದನು.

ಶ್ರೀರಾಮನು ಲೋಕಾಪವಾದಕ್ಕಂಜಿ ಅಪರಂಜಿಯನ್ನು ಹಿತ್ತಾಳೆ ಎಂದು ಹೇಳಿಬಿಟ್ಟನು. ಸೀತೆಯು ಅಗ್ನಿಪ್ರವೇಶ ಮಾಡಿದಳು. ಆ ಲೋಕೋತ್ತರವಾದ ಅಪರಂಜಿಯನ್ನು ಒರಹಚ್ಚುವ ನಿಕಷೋಪಲ ಯಾವುದು? ಅದನ್ನು ಕರಗಿಸುವ ಅಗ್ನಿ ಯಾವುದು? ಲೋಕಪಾವನೆಯಾದ ಗಂಗೆಯನ್ನು ಪವಿತ್ರಗೊಳಿಸುವ ಇನ್ನೊಂದು ವಸ್ತು ಎಲ್ಲಿದ್ದೀತು?

ರಾವಣನ ಅಮಾನುಷ ಭೋಗವೈಭವಗಳನ್ನು ತೃಣೀಕರಿಸಿ ಅವನ ಮುಖಕ್ಕೆ ಹುಲ್ಲುಕಡ್ಡಿಯನ್ನು ಹಿಡಿದ ಆ ಧೀರೆಯ ಸೌಶೀಲ್ಯದಲ್ಲಿ ಶ್ರೀರಾಮನಿಗೆ ಅಣುಮಾತ್ರವೂ ಸಂದೇಹವಿರಲಿಲ್ಲ. “ಈ ಜಾನಕಿ ನನ್ನಲ್ಲಿ ಎಷ್ಟು ಅನುರಕ್ತಳೆಂಬುದೂ ಎಷ್ಟು ಪರಿಶುದ್ಧಳೆಂಬುದೂ ನನಗೆ ಗೊತ್ತಿದೆ. ಇವಳು ತನ್ನ ತೇಜೋಬಲದಿಂದಲೇ ತನ್ನನ್ನು ರಕ್ಷಿಸಿಕೊಂಡಿದ್ದಾಳೆ. ಈ ದೇವಿಯನ್ನು ನಾನು ತ್ಯಜಿಸುವೆನೆ? ವೀರನು ಕೀರ್ತಿಯನ್ನು ಉಪೇಕ್ಷಿಸುವನೆ? ಸೂರ್ಯಪ್ರಭೆಯು ಸೂರ್ಯನನ್ನು ಬಿಟ್ಟು ಬೇರೆಯಾದೀತೆ?” ಎಂಬ ಶ್ರೀರಾಮನ ನುಡಿಗಿಂತ ಸೀತೆಗೆ ದೊಡ್ಡ ಪ್ರಶಸ್ತಿ ಇಲ್ಲ.

೮. ಸೌಭ್ರಾತ್ರದೊಳ್ ಕೈಕಯೀಜಂ

ಅಣ್ಣತಮ್ಮಂದಿರಲ್ಲಿರುವ ಅನ್ಯೋನ್ಯವಾದ ಪ್ರೀತಿ ಸೌಭ್ರಾತ್ರ. ಇದು ಭಾರತೀಯ ಕುಟುಂಬ ಪದ್ಧತಿಯಲ್ಲಿರುವ ಒಂದು ವಿಶೇಷ. ಭಾರತೀಯ ಸಾಹಿತ್ಯದ ಎರಡು ಕಣ್ಣುಗಳಂತಿರುವ ರಾಮಾಯಣ ಮಹಾಭಾರತಗಳಲ್ಲಿ ಸೌಭ್ರಾತ್ರದ ಮೀಮಾಂಸೆ ಮುಖ್ಯವಾಗಿ ಎದ್ದು ಕಾಣುವುದು. ಸೋದರಪ್ರೀತಿ ಧರ್ಮದ ಪರಿಸರಕ್ಕೆ ಸೇರುವುದಕ್ಕಿಂತ ಅಂತಃಕರಣದ ಪರಿಸರಕ್ಕೆ ಅಧಿಕವಾಗಿ ಸೇರಿದೆ. ಅದು ಹೃದಯದ ಪ್ರಶ್ನೆ.

ಪಾಂಡವರ ಸೋದರಪ್ರೀತಿಯು ದೃಢವಾಗಿದ್ದರೂ ಆಗಾಗ ಸ್ವಲ್ಪ ಕಲಕಿದೆ. ಕೌರವರಲ್ಲಿಯೂ ಅಣ್ಣತಮ್ಮಂದಿರಲ್ಲಿ ಒಗ್ಗಟ್ಟು ಇತ್ತು. ಅದು ಪರೀಕ್ಷೆಗೆ ಒಳಗಾಗಲಿಲ್ಲ. ಕೌರವರೂ ಪಾಂಡವರೂ ಅಣ್ಣತಮ್ಮಂದಿರೇ! ಸೌಭ್ರಾತ್ರದ ವೈಪರೀತ್ಯಕ್ಕೆ ಅಲ್ಲಿ ಉದಾಹರಣೆ ಇದೆ. ರಾಮಾಯಣದಲ್ಲಿರುವ ಸೋದರಪ್ರೀತಿಯು ತಿಳಿಯಾದ ಗಂಗಾಜಲ. ಅದು ಕಣ್ಣಿಗೆ ರಮಣೀಯ. ಜಿಹ್ವೆಗೆ ಆಸ್ವಾದನೀಯ. ಹೃದಯಕ್ಕೆ ಆಪ್ಯಾಯನ.

ರಾಮ, ಲಕ್ಷ್ಮಣ, ಭರತ, ಶತ್ರುಘ್ನರು ದಶರಥನ “ಚತ್ವಾರ ಇವ ಬಾಹವಃ”—ನಾಲ್ಕು ತೋಳುಗಳಂತಿದ್ದರು. ಈ ಉಪಮಾನದಲ್ಲಿ ಒಂದು ಸೊಬಗುಂಟು. ಒಬ್ಬನ ಕೈಗಳಲ್ಲಿ



ಚಲದೊಳ್ ದೈತ್ಯೇಶ್ವರಂ ನನ್ನಿಯೊಳಿನತನಯಂ ಗಂಡಿನೊಳ್ ವಾಯುಪುತ್ರಂ
ಬಲದೊಳ್ ಶಕ್ರಾರಿಯತ್ಯುನ್ನತಿಯ ಮಹಿಮೆಯೊಳ್ ಕೌಶಿಕಂ ಚಾಪವಿದ್ಯಾ- ।
ಬಲದೊಳ್ ಸೌಮಿತ್ರಿ ಸೌಶೀಲ್ಯದೊಳವನಿಜೆ ಸೌಭ್ರಾತ್ರದೊಳ್ ಕೈಕಯೀಜಂ
ಲಲಿತಂ ಕಾರುಣ್ಯಪೂರಂ ಮಿಗಿಲಮಿತಬಲಂ ಧರ್ಮದೊಳ್ ರಾಮಚಂದ್ರಂ ॥

ಅನ್ಯೋನ್ಯವಾಗಿ ಜಗಳವಾಗದು. ಅವುಗಳ ಕಾರ್ಯದಲ್ಲಿ ಒಂದು ಹೊಂದಾಣಿಕೆ, ಸಾಮರಸ್ಯ, ಪರಸ್ಪರ ನೆರವು ಇರುತ್ತವೆ. ಅವೆಲ್ಲವೂ ಈ ಸೋದರರಲ್ಲಿದ್ದವೆಂಬುದು ಇಲ್ಲಿ ಸೂಚ್ಯ.

ಶ್ರೀರಾಮನ ಸರ್ವಾತಿಶಾಯಿಗುಣಸಂದೋಹದಲ್ಲಿ ಭ್ರಾತೃವಾತ್ಸಲ್ಯವೂ ಅಂತರ್ಗತವಾಗಿದೆ. ಲಕ್ಷ್ಮಣನ ವಿವಿಧಗುಣಾವಳಿಯಲ್ಲಿ ಇದೂ ಒಂದು. ಶತ್ರುಘ್ನನ ಗುಣಚಿತ್ರಣಕ್ಕೆ ಲಭ್ಯವಾಗುವ ಸಾಮಗ್ರಿ ಸ್ವಲ್ಪವೇ. ಭರತನಲ್ಲಿ ಪ್ರಧಾನವಾಗಿ ತೋರುವ ಗುಣ ಈ ಭ್ರಾತೃವಾತ್ಸಲ್ಯ

ಆತನಿಗೆ ಅಣ್ಣನಲ್ಲಿ ನಿರ್ವ್ಯಾಜವಾದ ಪ್ರೀತಿ ಮೊದಲೇ ಇತ್ತು. ದಶರಥನ ಮರಣವಾರ್ತೆಯು ತಿಳಿದೊಡನೆ ತನಗೆ ಇನ್ನು ಶ್ರೀರಾಮನೇ ಗತಿಯೆಂದು ಭರತನು ಗೋಳಾಡುತ್ತಾನೆ:

ಯೋ ಮೇ ಭ್ರಾತಾ ಪಿತಾ ಬಂಧುರ್ಯಸ್ಯ ದಾಸೋಽಸ್ಮಿ ಧೀಮತಃ ।
ತಸ್ಯ ಮಾಂ ಶೀಘ್ರಮಾಖ್ಯಾಹಿ ರಾಮಸ್ಯಾಕ್ಲಿಷ್ಟಕರ್ಮಣಃ ॥
ಪಿತಾ ಹಿ ಭವತಿ ಜ್ಯೇಷ್ಠೋ ಧರ್ಮಮಾರ್ಯಸ್ಯ ಜಾನತಃ ।
ತಸ್ಯ ಪಾದೌ ಗ್ರಹೀಷ್ಯಾಮಿ ಸ ಹೀದಾನೀಂ ಗತಿರ್ಮಮ ॥

(ಅಯೋಧ್ಯಾ. ೭೨—೩೨, ೩೩)

"ಇನ್ನು ಮೇಲೆ ಅಣ್ಣನಾದ ರಾಮನೇ ನನಗೆ ತಂದೆ. ಅವನೇ ಬಂಧು. ಆ ಧೀಮಂತನಿಗೆ ನಾನು ದಾಸ. ಆ ಧರ್ಮನಿಷ್ಠನಿಗೆ ನಾನು ಬಂದ ವಾರ್ತೆಯನ್ನು ಬೇಗನೆ ತಿಳಿಸು. ಧರ್ಮವನ್ನು ಬಲ್ಲ ಶೀಲವಂತನಿಗೆ ಅಣ್ಣನು ತಂದೆ ಇದ್ದಂತೆ. ನಾನು ರಾಮನ ಪಾದಗಳನ್ನು ಹಿಡಿದುಕೊಳ್ಳುವೆನು. ಈಗ ಅವನೇ ನನಗೆ ಗತಿ."

ಈ ಸಂದರ್ಭದಲ್ಲಿ ಶ್ರೀರಾಮನ ವನವಾಸವೃತ್ತಾಂತವು ಭರತನಿಗೆ ತಿಳಿದಿರಲಿಲ್ಲ. ಅದು ತಿಳಿದಾಗ ಅವನಿಗಾದ ವ್ಯಥೆ, ಮಾನಸಿಕ ಯಾತನೆ ಅಷ್ಟಿಷ್ಟಲ್ಲ. ತನ್ನ ತಾಯಿಯು ಒಂದು ದುರುದ್ದೇಶದಿಂದ ಈ ಅನರ್ಥವು ಸಂಭವಿಸಿತೆಂದೂ ಪರ್ಯಾಯವಾಗಿ ತಾನೇ ಅದಕ್ಕೆ ನಿಮಿತ್ತವೆಂದೂ ಗೊತ್ತಾಗಲು ಆ ರಾಜಪುತ್ರನ ದುಃಖ ಹೊಳೆಯಾಗಿ ಹೊಮ್ಮಿತು. "ಕೈಕೇಯಿ, ನನಗೆ ದುಃಖದ ಮೇಲೆ ದುಃಖವನ್ನು ತಂದೊಡ್ಡಿದೆ. ಗಾಯದ ಮೇಲೆ ಉಪ್ಪುಸುರಿದೆ. ಮಹಾರಾಜನನ್ನು ಪ್ರೇತಭಾವಕ್ಕೆ ತಳ್ಳಿ ರಾಮನನ್ನು ಕಾಡಿಗೆ ಕಳಿಸಿದೆ. ಇಕ್ಷ್ವಾಕುವಂಶವನ್ನು ನಾಶಪಡಿಸುವುದಕ್ಕಾಗಿ ಕಾಳರಾತ್ರಿಯಂತೆ ಬಂದು ಸೇರಿದೆ. ರಾಜ್ಯಾದ್ ಭ್ರಂಶಸ್ವ ಕೈಕೇಯಿ!" ಎಂದು ಹಲುಬಿದನು. ಶೋಕಕ್ರೋಧಗಳ ಆವಿಷ್ಟಮೂರ್ತಿಯಾದನು. ತಾಯಿಯನ್ನು "ಅಮ್ಮ" ಎಂದು ಸಂಬೋಧಿಸಲು ಅವನಿಗೆ ಜುಗುಪ್ಸೆಯಾಯಿತು. ಕೈಕೇಯಿ, ಪಾಪದರ್ಶಿನಿ, ಪಾಪಿ, ಕುಲಪಾಂಸನಿ – ಎಂಬಿವೇ ಅವನು ಬಳಸಿದ ಶಬ್ದಗಳು. ಉದ್ವೇಗಭರದಲ್ಲಿ ತಾಯಿಯನ್ನೇ ಕೊಂದುಬಿಡುತ್ತಿದ್ದನೋ ಏನೋ! "ಶ್ರೀರಾಮನು ನನ್ನ ಮೇಲೆ ಕೋಪಿಸಿಕೊಂಡಾನು. ನಾನು ಮಾತೃಘಾತುಕನೆಂದು ನನ್ನೊಡನೆ ಮಾತನಾಡುವುದನ್ನೇ ಬಿಟ್ಟಾನು!" ಎಂದು ಹಿಂಜರಿದನು.

ತನಗೆ ಹಿತವನ್ನು ಕೋರಿದ ತಾಯಿಯ ವಿಷಯದಲ್ಲಿ ಭರತನ ನಿಷ್ಠುರವರ್ತನೆ ಅತಿಯಾಯಿತೋ ಎನಿಸುತ್ತದೆ. ತಂದೆಯ ಮರಣ, ರಾಮಲಕ್ಷ್ಮಣಸೀತೆಯರ ರಾಜ್ಯಭ್ರಂಶ, ತನಗೆ ಬಂದ ಅಪಕೀರ್ತಿ, ಕುಲಕ್ಕೆ ಬಂದ ಕೆಟ್ಟ ಹೆಸರು—ಈ ಚಿಂತಾತರಂಗಗಳಿಂದಾದ ಭಾವತುಮುಲದಲ್ಲಿ ಅತಿಯೂ ಸಮುಚಿತವೆನಿಸುತ್ತದೆ.

ಕೌಸಲ್ಯೆಯನ್ನು ಕಂಡಾಗ ಅವನ ಶೋಕ ಉಮ್ಮಳಿಸಿತು. ತಾನು ಶ್ರೀರಾಮನ ವನವಾಸದ ವಿಷಯದಲ್ಲಿ ಅನಪರಾಧಿಯೆಂದು ಒಂದರಮೇಲೊಂದರಂತೆ ಭೀಕರವಾದ ಆಣೆಗಳನ್ನಿಟ್ಟುಕೊಂಡು

ಒಂದು ರಾತ್ರಿಯನ್ನೇ ಶೋಕದಲ್ಲಿ ಕಳೆದನು. ಕೌಸಲ್ಯೆಯು ಭರತನನ್ನು ಕುರಿತು "ಮಗನೆ, ನೀನು ಹೀಗೆ ದುಃಖಿಸಿದರೆ ನನ್ನ ಜೀವಕ್ಕೆ ಸಂಕಟವಾಗುತ್ತದೆ. ನೀನು ಧರ್ಮವನ್ನು ಬಿಟ್ಟು ಹೋಗಲಿಲ್ಲ. ನಿನ್ನ ಆತ್ಮ ಶುದ್ಧವಾದದ್ದು. ಇದು ನಮ್ಮ ಭಾಗ್ಯ. ನೀನು ಸತ್ಯಸಂಧನಾಗಿ ಸದ್ಗತಿಯನ್ನು ಪಡೆ"—ಎಂದು ಹೇಳಿದಾಗ ಶೋಕದ ಭಾರ ಅವನಿಗೆ ಸ್ವಲ್ಪ ಹಗುರವೆನಿಸಿತು.

ಅರಮನೆಯಲ್ಲಿ ಪ್ರತಿದಿನ ಪ್ರಾತಃಕಾಲ ಮಂಗಳವಾದ್ಯವನ್ನು ನಡೆಸುವುದು ರಾಜಪದ್ಧತಿ. ದಶರಥನು ಮೃತನಾದಾಗ ಹದಿನಾಲ್ಕು ದಿನಗಳವರೆಗೆ ಅದು ನಡೆಯಲಿಲ್ಲ. ಮಾರನೆಯ ದಿನ ರಾತ್ರಿ ಕಳೆಯುವಾಗ ಎಂದಿನಂತೆ ಮಂಗಳವಾದ್ಯ ಆರಂಭಿಸಿತು. ಶೋಕಸಂತಪ್ತನಾಗಿದ್ದ ಭರತನಿಗೆ ಅದು ಕಿವಿಯನ್ನು ಕೊರೆಯಿತು. ಅವನು ಕೂಡಲೆ "ವಾದ್ಯಘೋಷವನ್ನು ನಿಲ್ಲಿಸಿರಿ, ನಾನೇನೂ ರಾಜನಲ್ಲ" ಎಂದು ಹೇಳಿ ಆ ವಾದ್ಯವನ್ನು ನಿಲ್ಲಿಸಿದನು. ಈ ಸಂದರ್ಭವು ಭರತನ ಮನಃ ಶುದ್ಧಿಗೆ ಉತ್ತಮ ನಿದರ್ಶಕ.

ಆಸ್ಥಾನದಲ್ಲಿ ಸಭೆ ನೆರೆಯಿತು. ಮಂತ್ರಿಗಳೂ ಪೌರರೂ ಸೇರಿದ್ದರು. ಮುಂದಿನ ರಾಜ್ಯ ಭಾರದ ವ್ಯವಸ್ಥೆ ನಡೆಯಬೇಕಾಗಿತ್ತು. ಭರತನ ಅಂತಃಕರಣವು ಹೇಗೆ ಮಿಡಿಯುತ್ತಿದ್ದಿತೆಂಬುದು ವಸಿಷ್ಠರಿಗೆ ತಿಳಿಯದೆ ಇರಲಿಲ್ಲ. ಆದರೂ ಅವರು ಸಾಂಪ್ರದಾಯಿಕವಾಗಿ "ಭರತ, ನಿನ್ನ ತಂದೆಯೂ ಅಣ್ಣನೂ ನಿಷ್ಕಂಟಕವಾಗಿ ರಾಜ್ಯವನ್ನು ನಿನಗೆ ಬಿಟ್ಟುಕೊಟ್ಟಿದ್ದಾರೆ. ನೀನು ಈ ರಾಜ್ಯವನ್ನು ಪಾಲಿಸು. ಬೇಗನೆ ಪಟ್ಟಾಭಿಷಿಕ್ತನಾಗು"—ಎಂದರು. ಭರತನು ಕೊಟ್ಟ ಉತ್ತರವೇನು ? "ಗುರುಗಳೆ, ಇದು ಶ್ರೀರಾಮನ ರಾಜ್ಯ. ಅದನ್ನು ನಾನು ಅಪಹರಿಸಬಹುದೆ ? ದಶರಥನಿಗೆ ಮಗ ನಾಗಿ ಹುಟ್ಟಿದವನು ಇನ್ನೊಬ್ಬನ ಸ್ವತ್ತನ್ನು ಅಪಹರಿಸಿಯಾನೆ ? ನೀವು ನನಗೆ ಧರ್ಮಮಾರ್ಗವನ್ನು ಉಪದೇಶಿಸಬೇಕಲ್ಲದೆ ಇಂಥ ಮಾತನ್ನು ಹೇಳುವುದು ತರವಲ್ಲ!"—ಎಂದು ವಸಿಷ್ಠರನ್ನು ಆಕ್ಷೇಪಿಸಿದನು. ಅಷ್ಟರೊಳಗೇ ಅವನು ಮುಂದಿನ ಮಾರ್ಗವನ್ನು ನಿರ್ಧರಿಸಿಬಿಟ್ಟಿದ್ದನು. ಶ್ರೀರಾಮನನ್ನು ಅರಣ್ಯದಿಂದ ಕರೆತಂದು ಅವನಿಗೆ ಪಟ್ಟಾಭಿಷೇಕಮಾಡಬೇಕೆಂದು ನಿಶ್ಚಯಿಸಿ, ಪ್ರಯಾಣಕ್ಕೆ ಸಿದ್ಧರಾಗಿರಬೇಕೆಂದು ಸೈನಿಕರಿಗೆ ಆಜ್ಞಾಪಿಸಿದ್ದನು.

ಭರತನ ನಿರ್ಧಾರ—ರಾಜ್ಯತಿರಸ್ಕಾರ ಎಲ್ಲರಿಗೂ ವಿಸ್ಮಯಕರವೇ. ತಾನಾಗಿ ಬಂದ ಚಕ್ರಾಧಿಪತ್ಯವನ್ನು ಯಾವನು ಬೇಡವೆಂದಾನು ? ಲಕ್ಷ್ಮಿಯೇ ಒಲಿದು ಮನೆಗೆ ಬರುವೆನೆಂದರೆ ಬಾಗಿಲು ಹಾಕಿಕೊಳ್ಳುವರಾರು ? ಬೆಳದಿಂಗಳು ಬೇಡವೆಂದು ಕೊಡೆಯನ್ನು ಯಾರು ಹಿಡಿದಾರು ? ಆದ್ದರಿಂದ ಗುಹನಿಗೂ ಭರತನ ಚರ್ಯೆಯಲ್ಲಿ ಸಂದೇಹ. ಭರದ್ವಾಜಮುನಿಗಳಿಗೂ ಸಂದೇಹ.

ಭರದ್ವಾಜರು ಒಂದು ಔತಣ ಕೂಟವನ್ನೇರ್ಪಡಿಸಿದರು. ಭರತನ ಸೇನೆ ತಿಂದು ಕುಡಿದು ನಲಿಯಿತು. ಸ್ವರ್ಗಲೋಕವೇ ಇಳಿದು ಬಂದಿತ್ತು. ದೇವೇಂದ್ರನ ವೈಭವವನ್ನೂ ಅದು ಮೀರಿಸಿತ್ತು. ಭರದ್ವಾಜರು ತಮ್ಮ ತಪೋಬಲದಿಂದ ಆ ಸತ್ಕಾರವನ್ನೇರ್ಪಡಿಸಿದ್ದರು. ಭರದ್ವಾಜರ ಉದ್ದೇಶವೇನು ? ಅದನ್ನು ದೀರ್ಘವಾಗಿ ವರ್ಣಿಸುವ ವಾಲ್ಮೀಕಿಮುನಿಗಳ ಗೂಢಾಶಯವೇನು ?

ಇದೆಲ್ಲವೂ ಭರತನನ್ನು ಪರೀಕ್ಷಿಸುವುದಕ್ಕಾಗಿ ಭರದ್ವಾಜರು ಮಾಡಿದ ಹಂಚಿಕೆಯೆಂದು ತೋರುತ್ತದೆ. ಆ ಬಗೆಯ ರಾಜವೈಭವಕ್ಕೆ ಭರತನು ಮೆಚ್ಚಿ ಮರುಳಾಗುವನೆ ? ಆ ವೈಭವವನ್ನು ಶಾಶ್ವತವಾಗಿ ಅನುಭವಿಸಬೇಕೆಂದು ರಾಜ್ಯಲೋಭದಿಂದ ಅಯೋಧ್ಯೆಗೆ ಹಿಂದಿರುಗುವನೆ ?—ಎಂಬುದನ್ನು ಪರೀಕ್ಷಿಸಿ ತಿಳಿಯುವುದು ಭರದ್ವಾಜರ ಉದ್ದೇಶವಾಗಿರಬೇಕು. ತಪೋಬಲ ನಿರ್ಮಿತವಾದ ಸತ್ಕಾರಭವನವನ್ನು ಭರತನು ಪ್ರವೇಶಿಸಿದಾಗ ಅಲ್ಲೊಂದು ದಿವ್ಯವಾದ ಸಿಂಹಾಸನ

ಇತ್ತು. ಛತ್ರಚಾಮರಗಳು ಶೋಭಿಸುತ್ತಿದ್ದವು. ಅತಿಥಿಯಾಗಿ ಬಂದ ರಾಜನಿಗೆ ಅದು ಮೀಸಲಾಗಿತ್ತು. ಭರತನು ಅದರಲ್ಲಿ ಮಂಡಿಸಬಹುದೆ ?

ಭರತನು ಸಿಂಹಾಸನಕ್ಕೆ ರಾಜಾರ್ಹವಾದ ಗೌರವವನ್ನು ತೋರಿಸಿ ಮಂತ್ರಿಗಳೊಡನೆ ಅದನ್ನು ಪ್ರದಕ್ಷಿಣೆಮಾಡಿದನು. ಅಲ್ಲಿದ್ದ ಚಾಮರವನ್ನು ಕೈಯಲ್ಲಿ ಹಿಡಿದು ಶ್ರೀರಾಮನನ್ನು ಧ್ಯಾನಮಾಡಿ ನಮಸ್ಕರಿಸಿ, ಚಾಮರವನ್ನು ಬೀಸಿ ರಾಜಸೇವೆಯನ್ನು ಸಲ್ಲಿಸಿ, ಮಂತ್ರಿಗಳಿಗೆ ಉಚಿತವಾದ ಇನ್ನೊಂದು ಆಸನದಲ್ಲಿ ಕುಳಿತುಕೊಂಡನು ! ಮಾರನೆಯ ದಿನ ಶ್ರೀರಾಮನು ವಾಸವಾಗಿದ್ದ ಚಿತ್ರಕೂಟಪರ್ವತದೆಡೆಗೆ ಹೊರಟನು.

ಶ್ರೀರಾಮನನ್ನು ಅಯೋಧ್ಯೆಗೆ ಹಿಂದಿರುಗಿಸಲು ಮನುಷ್ಯಸಾಧ್ಯವಾದ ಪ್ರಯತ್ನಗಳೆಲ್ಲವನ್ನೂ ಮಾಡಿದನು. ಸತ್ಯಪರಾಕ್ರಮನಾದ ಶ್ರೀರಾಮನ ಅಚಲಸಂಕಲ್ಪವನ್ನು ಕದಲಿಸಲು ಭರತನಿಂದಾಗಲಿಲ್ಲ. ವಸಿಷ್ಠರು ಮಧ್ಯಸ್ಥರಾಗಿ ಉಭಯಸಂಮತವಾದ ಒಂದು ದಾರಿಯನ್ನು ತೋರಿಸಿದರು. ಭರತನು ಶ್ರೀರಾಮನ ಪಾದುಕೆಗಳನ್ನು ಹೊತ್ತು ತಂದು ನಂದಿಗ್ರಾಮದಲ್ಲಿ ಪ್ರತಿಷ್ಠಾಪಿಸಿ ಶ್ರೀರಾಮನ ಪ್ರತಿನಿಧಿಯಾಗಿ ರಾಜ್ಯಭಾರವನ್ನು ನಿರ್ವಹಿಸಿದನು. ಶ್ರೀರಾಮನಂತೆ ಜಟಾವಲ್ಕಲಧಾರಿಯಾಗಿ ವ್ರತನಿಯಮಗಳನ್ನು ಪಾಲಿಸಿದನು. ಯಾವುದೊಂದು ರಾಜಕಾರ್ಯವು ಒದಗಿದರೂ, ಬೆಲೆಬಾಳುವ ಯಾವುದೇ ಕಾಣಿಕೆಯು ಬಂದರೂ—

ಸ ಪಾದುಕಾಭ್ಯಾಂ ಪ್ರಥಮಂ ನಿವೇದ್ಯ
ಚಕಾರ ಪಶ್ಚಾದ್ ಭರತೋ ಯಥಾವತ್ ॥

(ಅಯೋಧ್ಯಾ. ೧೧೫—೨೭)

"ಅದನ್ನು ಪಾದುಕೆಗಳಿಗೆ ಅರಿಕೆಮಾಡಿ ಭರತನು ರಾಜಕಾರ್ಯವನ್ನು ನಡೆಸಿಕೊಂಡು ಹೋಗುತ್ತಿದ್ದನು"

ಶ್ರೀರಾಮನಿಗೆ ಪ್ರತಿಯಾಗಿ ಭರತನು ತಾನೇ ಹದಿನಾಲ್ಕುವರ್ಷ ವನವಾಸಮಾಡುವುದಾಗಿಯೂ ಶ್ರೀರಾಮನು ಅಯೋಧ್ಯೆಗೆ ಹಿಂದಿರುಗಲೆಂದೂ ಹೇಳಿದನು. ತನ್ನ ಪ್ರತಿನಿಧಿಯಿಂದ ವನವಾಸವನ್ನು ನಡೆಸುವ ವ್ಯಾಜದ ಧರ್ಮಾಚರಣೆಗೆ ಶ್ರೀರಾಮನು ಒಪ್ಪಲಿಲ್ಲ. ಶ್ರೀರಾಮನೊಡನೆ ತಾನೂ ವನಕ್ಕೆ ಬರುವುದಾಗಿ ಭರತನು ಹೇಳಿದನು. ಆ ಪಕ್ಷದಲ್ಲಿ ರಾಜ್ಯವು ಅನಾಯಕವಾಗುವುದೆಂದೂ ರಾಜ್ಯವನ್ನು ನೋಡಿಕೊಳ್ಳತಕ್ಕವರಾರೆಂದೂ ಶ್ರೀರಾಮನು ಆಕ್ಷೇಪಿಸಿದನು. ಹೀಗೆ ಭರತನ ಕೋರಿಕೆ ಯಾವುದೂ ನಡೆಯಲಿಲ್ಲ. ಕಡೆಗೆ ನಂದಿಗ್ರಾಮದಲ್ಲಿದ್ದು ರಾಜಭೋಗಗಳನ್ನು ತ್ಯಜಿಸಿ ವನವಾಸದ ಕಷ್ಟಗಳೆಲ್ಲವನ್ನೂ ತಾನಾಗಿ ವಹಿಸಿಕೊಂಡನು.

ಹದಿನಾಲ್ಕು ವರ್ಷಗಳು ಹೇಗೋ ಕಳೆದವು. ಶ್ರೀರಾಮನು ಅಯೋಧ್ಯಾಭಿಮುಖನಾಗಿ ಭರದ್ವಾಜಾಶ್ರಮಕ್ಕೆ ಬಂದಿದ್ದಾನೆಂಬ ವಾರ್ತೆಯನ್ನು ಹನುಮಂತನು ತಂದಾಗ ಭರತನಿಗಾದ ಆನಂದವೆಷ್ಟು!

ಪಪಾತ ಸಹಸಾ ಹೃಷ್ಟೋ ಹರ್ಷಾನ್ಮೋಹಂ ಜಗಾಮ ಹ ॥

(ಯುದ್ಧ. ೧೨೫—೩೯)

"ಭರತನು ಆನಂದಾತಿರೇಕದಿಂದ ಉಬ್ಬಿ ಎಚ್ಚರದಪ್ಪಿದಂತಾದನು."

ಅವನು ಹನುಮಂತನನ್ನು ನೋಡಿ "ಸೌಮ್ಯ, ನೀನಾರು ? ದೇವತೆಯೋ ಮನುಷ್ಯನೋ ? ಎಂತಹ ಆನಂದದ ಸುದ್ದಿಯನ್ನು ತಂದೆ ! ನಿನಗೆ ಒಂದು ಲಕ್ಷ ಗೋವುಗಳನ್ನು ಪಾರಿತೋಷಿಕವಾಗಿ

ಕೊಡುವೆನು ! ನೂರು ಗ್ರಾಮಗಳನ್ನು ದಾನಮಾಡುವೆನು ! ಹದಿನಾರುಮಂದಿ ಸುಂದರಕನ್ಯೆಯರನ್ನು ಕೊಟ್ಟು ನಿನಗೆ ಮದುವೆ ಮಾಡಿಸುವೆನು !

ಏತಿ ಜೀವಂತಮಾನಂದೋ ನರಂ ವರ್ಷಶತಾದಪಿ ॥

" ' ಮನುಷ್ಯನು ಬದುಕಿದ್ದರೆ ನೂರುವರ್ಷಗಳ ಮೇಲಾದರೂ ಆನಂದದ ದಿನವನ್ನು ಕಾಣಬಹುದು ' ಎಂಬ ಗಾದೆ ಸತ್ಯವಾಯಿತು ! "—ಎಂದು ಹೇಳಿ ಆನಂದಪರವಶನಾದನು. ಹನುಮಂತನನ್ನು ಅಪ್ಪಿಕೊಂಡು ಆನಂದಬಾಷ್ಪಗಳನ್ನು ಸುರಿಸಿದನು.

ಭರತನು ಆ ಪಾದುಕೆಗಳನ್ನು ಶ್ರೀರಾಮನ ಕಾಲಿಗೆ ತೊಡಿಸಿ, " ಮಹಾರಾಜ, ನಿನ್ನ ರಾಜ್ಯವನ್ನು ನಿನ್ನ ಆಜ್ಞೆಯಂತೆ ರಕ್ಷಿಸಿ ನಿನಗೆ ಪುನಃ ಅರ್ಪಿಸಿದ್ದೇನೆ. ನನ್ನ ಜನ್ಮ ಸಾರ್ಥಕವಾಯಿತು. ನಿನ್ನ ತೇಜಸ್ಸಿನಿಂದ ನಿನ್ನ ಭಂಡಾರವನ್ನು ಹತ್ತುಮಡಿಯಾಗಿ ಹೆಚ್ಚಿಸಿದ್ದೇನೆ ಸ್ವೀಕರಿಸು " ಎಂದನು. ಅಭೂತಪೂರ್ವವಾದ ಆ ಸೌಭ್ರಾತ್ರವನ್ನು ಕಂಡು ಸಂತೃಲೂ ನೆರೆದಿದ್ದ ಸುಗ್ರೀವಾದಿ ಕಪಿಗಳು ಕಣ್ಣೀರು ಹರಿಸಿದರು ! ರಾಕ್ಷಸನಾದ ವಿಭೀಷಣನ ಕಣ್ಣಿಂದ ನೀರು ತೊಟ್ಟಿಕ್ಕಿತು !

೬. ಲಲಿತಂ ಕಾರುಣ್ಯಪೂರಂ ಮಿಗಿಲಮಿತಬಲಂ ಧರ್ಮದೊಳ್ ರಾಮಚಂದ್ರಂ

ಲಲಿತಂ

ಲಲಿತಶಬ್ದವು ಸೌಂದರ್ಯ, ಸೌಲಭ್ಯ—ಎಂಬ ಎರಡು ಅರ್ಥಗಳನ್ನು ಒಳಗೊಳ್ಳುತ್ತದೆ. ಅರ್ಥದ್ವಯವೂ ಇಲ್ಲಿ ವಿವಕ್ಷಿತ.

ಸೌಂದರ್ಯ :—ಒಬ್ಬ ಮನುಷ್ಯನನ್ನು ನೋಡಿದಾಗ ಪ್ರೇಕ್ಷಕನ ಮನಸ್ಸಿನಮೇಲೆ ಮೊದಲು ಪ್ರಭಾವವನ್ನು ಬೀರತಕ್ಕದ್ದು ಅವನ ಆಕೃತಿ. ವಿದ್ಯೆ, ಅಧಿಕಾರ, ಸದಾಚಾರ, ಸಂಪತ್ತು—ಎಲ್ಲವೂ ವ್ಯಕ್ತಿಯಲ್ಲಿ ಒಂದು ತೇಜಸ್ಸನ್ನು ಆಧಾನಮಾಡುತ್ತವೆ. ಶಾಕುಂತಲನಾಟಕದಲ್ಲಿ ದುಷ್ಯಂತನು ಕಣ್ವಾಶ್ರಮಕ್ಕೆ ಬಂದಾಗ ಅವನನ್ನು ನೋಡಿದೊಡನೆ ಪ್ರಿಯಂವದೆಯು " ಅನಸೂಯೆ, ಚತುರ ಗಂಭೀರಾಕೃತಿಯಾದ ಈತನು ಬಹಳ ಪ್ರಭಾವಶಾಲಿಯಾಗಿ ಕಾಣುವನಲ್ಲ, ಇವನು ಯಾರಿರ ಬಹುದು ? " ಎಂದು ತನ್ನ ಸಖಿಯನ್ನು ಕೇಳುತ್ತಾಳೆ. ರಘುವಂಶದ ಆರಂಭದಲ್ಲಿ ದಿಲೀಪನನ್ನು ವರ್ಣಿಸುವಾಗ ಕಾಳಿದಾಸನು—

ವ್ಯೂಢೋರಸ್ಕೋ ವೃಷಸ್ಕಂಧಃ ಸಾಲಪ್ರಾಂಶುರ್ಮಹಾಭುಜಃ ।
ಆತ್ಮಕರ್ಮಕ್ಷಮಂ ದೇಹಂ ಕ್ಷಾತ್ರೋ ಧರ್ಮ ಇವ ಶ್ರಿತಃ ॥

ಎಂದು ಹೇಳುತ್ತ ದಿಲೀಪನ ಆಕೃತಿಯನ್ನು ಪರಿಚಯ ಮಾಡಿಸುತ್ತಾನೆ.

ಶ್ರೀಮದ್ರಾಮಾಯಣದ ಕಥಾನಾಯಕನೂ ಸಕಲಮಹಾಗುಣಗಳಿಗೆ ಆಕರನೂ ಆದ ಶ್ರೀರಾಮಚಂದ್ರನ ಆಕೃತಿ ಹೇಗಿದ್ದಿರಬಹುದು ?

ದಿವ್ಯಸುಂದರ ವಿಗ್ರಹ, ಪುಂಸಾಂ ಮೋಹನರೂಪಾಯ, ಭವ್ಯರೂಪಾಯ ಎಂದು ಕವಿಗಳು ಹಾಡಿದ್ದುಂಟು. ಆ ಮಗುವಿನ ರಮಣೀಯವಾದ ಸೌಂದರ್ಯದಿಂದ ಮುಗ್ಧರಾದ ವಸಿಷ್ಠರು " ರಾಮ " ಎಂದು ನಾಮಕರಣ ಮಾಡಿದರಂತೆ :

ರಾಮ ಇತ್ಯಭಿರಾಮೇಣ ವಪುಷಾ ತಸ್ಯ ಚೋದಿತಃ ।
ನಾಮಧೇಯಂ ಗುರುಶ್ಚಕ್ರೇ ಜಗತ್ಪ್ರಥಮಮಂಗಲಮ್ ॥

(ರಘುವಂಶ, ೧೧—೬೭)

ಶ್ರೀರಾಮನ ದಿವ್ಯಸೌಂದರ್ಯವನ್ನೂ ಧೀರಗಂಭೀರವಾದ ಕ್ಷತ್ರಿಯೋಚಿತವಾದ ವ್ಯಕ್ತಿತ್ವವನ್ನೂ ಎಷ್ಟುಸಲ ಎಷ್ಟುಬಗೆಯಲ್ಲಿ ವರ್ಣಿಸಿದರೂ ವಾಲ್ಮೀಕಿಮುನಿಗಳಿಗೆ ತೃಪ್ತಿ ಇಲ್ಲ. ಮತ್ತೆಮತ್ತೆ ಅದರ ಪ್ರಸ್ತಾವ ಬರುತ್ತಲೇ ಇರುತ್ತದೆ. ಶ್ರೀರಾಮನು 'ಸೋಮವತ್ ಪ್ರಿಯದರ್ಶನಃ' ನೋಡಲು ಚಂದ್ರನಂತೆ ಆಹ್ಲಾದಕಾರಿ ಎಂಬುದು ಎಷ್ಟುಸಲವೊ! ರಾಮಚಂದ್ರ ಎಂಬ ಶಬ್ದದ ಈಚಿನ ಬಳಕೆಗೆ ಈ ವರ್ಣನೆಯೇ ನಿಮಿತ್ತವಾಗಿರಬೇಕು.

ರಾಮಲಕ್ಷ್ಮಣರು ವಿಶ್ವಾಮಿತ್ರರೊಡನೆ ವಿಶಾಲಾನಗರಕ್ಕೆ ಬಂದಾಗ ರಾಜನಾದ ಸುಮತಿಗೆ ವಿಸ್ಮಯವನ್ನುಂಟುಮಾಡಿದ್ದು ಆ ಬಾಲಕರ ಸೌಂದರ್ಯ. ಅವರು ಅಶ್ವಿನೀದೇವತೆಗಳಂತೆ ಆ ರಾಜನಿಗೆ ಕಾಣಿಸಿದರು. "ಪದ್ಮಪತ್ರವಿಶಾಲಾಕ್ಷರಾದ ಇವರು ಯಾರು?"—ಎಂದು ಸುಮತಿಯು ವಿಶ್ವಾಮಿತ್ರರನ್ನು ಕೇಳಿದನು. ಜನಕರಾಜನೂ ಹಾಗೆಯೇ ವಿಸ್ಮಿತನಾಗಿ ಅದೇ ಮಾತನ್ನು ಪುನರುಚ್ಚರಿಸಿದನು.

ಶ್ರೀರಾಮನನ್ನು ಎಷ್ಟುಸಲ ನೋಡಿದರೂ ಹೇಗೆ ಹೇಗೆ ನೋಡಿದರೂ ದಶರಥನಿಗೆ ತೃಪ್ತಿ ಇಲ್ಲ. ಕಣ್ಣಿನ ಬಯಕೆ ತಣಿಯುವುದಿಲ್ಲ:

ಗಂಧರ್ವರಾಜಪ್ರತಿಮಂ ಲೋಕೇ ವಿಖ್ಯಾತಪೌರುಷಮ್ ।
ದೀರ್ಘಬಾಹುಂ ಮಹಾಸತ್ತ್ವಂ ಮತ್ತಮಾತಂಗಗಾಮಿನಮ್ ॥
ಚಂದ್ರಕಾಂತಾನನಂ ರಾಮಮತೀವ ಪ್ರಿಯದರ್ಶನಮ್ ।
ರೂಪೌದಾರ್ಯಗುಣೈಃ ಪುಂಸಾಂ ದೃಷ್ಟಿಚಿತ್ತಾಪಹಾರಿಣಮ್ ॥
ಘರ್ಮಾಭಿತಪ್ತಾಃ ಪರ್ಜನ್ಯಂ ಹ್ಲಾದಯಂತಮಿವ ಪ್ರಜಾಃ ।
ನ ತತರ್ಪ ಸಮಾಯಾಂತಂ ಪಶ್ಯಮಾನೋ ನರಾಧಿಪಃ ॥

(ಅಯೋಧ್ಯಾ. ೩—೨೮, ೨೯, ೩೦)

"ಶ್ರೀರಾಮನು ಗಂಧರ್ವರಾಜನಂತೆ ಸುಂದರನೂ ವೀರಾಗ್ರಣಿಯೆಂದು ಲೋಕವಿಖ್ಯಾತನೂ ಆಗಿದ್ದನು. ಅವನು ಆಜಾನುಬಾಹು. ಸತ್ತ್ವಗುಣಸಂಪನ್ನ. ಮದ್ದಾನೆಯಂತೆ ಗಂಭೀರವಾಗಿ ನಡೆಯತಕ್ಕವನು. ಚಂದ್ರನಂತೆ ರಮಣೀಯವಾದ ಮುಖ. ಅವನನ್ನು ನೋಡಿದಷ್ಟೂ ಆನಂದವು ಹೆಚ್ಚುವುದು. ಶ್ರೀರಾಮನು ತನ್ನ ಸೌಂದರ್ಯ ಔದಾರ್ಯಾದಿಗುಣಗಳಿಂದ ನೋಡುವವರ ಕಣ್ಮನಗಳನ್ನು ಸೂರೆಗೊಳ್ಳುತ್ತಿದ್ದನು. ಬೇಸಿಗೆಯಲ್ಲಿ ಬಳಲಿದವರಿಗೆ ಮೇಘವಿದ್ದಂತೆ, ಪ್ರೇಕ್ಷಕರೆಲ್ಲರಿಗೂ ಅವನು ಆಹ್ಲಾದವನ್ನುಂಟುಮಾಡುತ್ತಿದ್ದನು. ಆ ಪುತ್ರನನ್ನು ಎಷ್ಟು ನೋಡಿದರೂ ದಶರಥನಿಗೆ ತೃಪ್ತಿಯಾಗಲಿಲ್ಲ."

ಶೂರ್ಪಣಖಿಯು "ಕಂದರ್ಪಸದೃಶ"ನಾದ ಶ್ರೀರಾಮನ ಸುಂದರಾಕೃತಿಯನ್ನು ಕಂಡು ಕಾಮಮೋಹಿತಳಾದಳು. ಅವಳು ಅವಮಾನಗೊಂಡು ಕುಪಿತಳಾಗಿ ಶ್ರೀರಾಮನಮೇಲೆ ಚಾಡಿ ಹೇಳಲು ರಾವಣನ ಬಳಿಗೆ ಹೋದಳಷ್ಟೆ. ಶ್ರೀರಾಮನನ್ನು ದೂರುವಾಗಲೂ ಅವನ ಸೌಂದರ್ಯ ಅವಳ ಕಣ್ಣಿಗೆ ಕಟ್ಟಿದಂತಾಗಿತ್ತು. ಅವಳು ಹೀಗೆಂದಳು:

ದೀರ್ಘಬಾಹುರ್ವಿಶಾಲಾಕ್ಷಶ್ಚೀರಕೃಷ್ಣಾಜಿನಾಂಬರಃ ।
ಕಂದರ್ಪಸಮರೂಪಶ್ಚ ರಾಮೋ ದಶರಥಾತ್ಮಜಃ ॥

(ಅರಣ್ಯ. ೩೪—೫)

"ರಾವಣ, ರಾಮನು ದಶರಥರಾಜನ ಪುತ್ರ ; ಆಜಾನುಬಾಹು ; ವಿಶಾಲನೇತ್ರ ; ನಾರುಬಟ್ಟೆ ಕೃಷ್ಣಾಜಿನಗಳನ್ನು ಧರಿಸಿದ್ದರೂ ಮನ್ಮಥನಂಥ ಸುಂದರಾಕೃತಿ !"

ಅಶೋಕವನದಲ್ಲಿ ಸೀತೆಯು ಹನುಮಂತನನ್ನು ಕಂಡಾಗ ಆವನು ರಾಮದೂತನೆಂದು ಮೊದಲು ನಂಬಿಕೆಯಾಗಲಿಲ್ಲ. ಸೀತೆಯು "ವಾನರ, ನೀನು ಶ್ರೀರಾಮನನ್ನು ನೋಡಿರುವುದಾದರೆ, ಅವನ ಆಕೃತಿ ಹೇಗಿದೆ ? ಹೇಳು" ಎಂದು ಕೇಳಿದಳು. ಆಗ ಹನುಮಂತನು ಶ್ರೀರಾಮನ ಸೌಂದರ್ಯವನ್ನೂ ಮೈಕಟ್ಟನ್ನೂ ದೀರ್ಘವಾಗಿ ವರ್ಣಿಸುತ್ತ ಹೀಗೆಂದನು :

ರಾಮಃ ಕಮಲಪತ್ರಾಕ್ಷಃ ಸರ್ವಸತ್ತ್ವಮನೋಹರಃ ।
ರೂಪದಾಕ್ಷಿಣ್ಯಸಂಪನ್ನಃ ಪ್ರಸೂತೋ ಜನಕಾತ್ಮಜೇ ॥

(ಸುಂದರ. ೩೫—೮)

"ಜನಕತನಯೆ, ಶ್ರೀರಾಮನ ಕಣ್ಣುಗಳು ತಾವರೆಯ ದಳದಂತೆ ಚೆಲುವಾಗಿವೆ. ಸಕಲ ಪ್ರಾಣಿಗಳಿಗೂ ಅವನನ್ನು ನೋಡಿದರೆ ಆನಂದವಾಗುತ್ತದೆ. ಅವನು ಜನಿಸುವಾಗಲೇ ಸೌಂದರ್ಯ ದಾಕ್ಷಿಣ್ಯಗಳು ಕೂಡಿ ಬಂದಿವೆ."

ಸೌಲಭ್ಯ :—ಭಗವಂತನು ಅಪಾರಮಹಿಮನೂ ಸರ್ವಶಕ್ತನೂ ಸರ್ವಜ್ಞನೂ ಆದರೂ ಭಕ್ತಿಗೆ ಒಲಿಯುವನೆಂದೂ ಭಕ್ತರಿಗೆ ಸುಲಭನೆಂದೂ ಭಕ್ತಿಮಾರ್ಗದವರು ಹೇಳುತ್ತಾರೆ. "ಯೋ ಮದ್ಭಕ್ತಃ ಸ ಮೇ ಪ್ರಿಯಃ, ಭಕ್ತಿಮಾನ್ ಮೇ ಪ್ರಿಯೋ ನರಃ, ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋಽರ್ಜುನ" ಎಂದು ಶ್ರೀಕೃಷ್ಣನು ಹೇಳಿದ್ದಾನಲ್ಲವೆ ?

ಸೌಲಭ್ಯವೆಂದರೆ ಸರಳತೆ, ಗರ್ವರಹಿತವಾದ ವರ್ತನೆ, ಬಿಗುಮಾನವಿಲ್ಲದಿರುವಿಕೆ, ಅಧಿಕಾರಾದಿ ಪ್ರಯುಕ್ತವಾದ ದರ್ಪದ ರಾಹಿತ್ಯ. ಇದು ಶ್ರೀರಾಮನಲ್ಲಿ ಕಂಡುಬರುವ ಒಂದು ದೊಡ್ಡ ಗುಣ. ವಾಲ್ಮೀಕಿಮುನಿಗಳಿಗೆ ಅವನ ಸದ್ಗುಣಗಳನ್ನೆಷ್ಟು ವರ್ಣಿಸಿದರೂ ತೃಪ್ತಿಯಾಗುವುದಿಲ್ಲ. ಅಯೋಧ್ಯಾ ಕಾಂಡದ ಪ್ರಥಮಸರ್ಗದಲ್ಲಿ ಇದೇ ಗುಣಗಾನ :—

ಸ ತು ನಿತ್ಯಂ ಪ್ರಶಾಂತಾತ್ಮಾ ಮೃದುಪೂರ್ವಂ ಚ ಭಾಷತೇ ।
ಉಚ್ಯಮಾನೋಽಪಿ ಪರುಷಂ ನೋತ್ತರಂ ಪ್ರತಿಪದ್ಯತೇ ॥

ಶ್ರೀರಾಮನು ಯಾವಾಗಲೂ ಶಾಂತಸ್ವಭಾವದವನು. ಜನರೊಡನೆ ಮೃದುವಾಗಿ ಮಾತನಾಡತಕ್ಕವನು. ತನಗೆ ಕಠಿಣವಾಗಿ ನುಡಿದರೂ ಪ್ರತಿಯಾಗಿ ಹೇಳತಕ್ಕವನಲ್ಲ.

ಬುದ್ಧಿಮಾನ್ ಮಧುರಾಭಾಷೀ ಪೂರ್ವಭಾಷೀ ಪ್ರಿಯಂವದಃ ।
ವೀರ್ಯವಾನ್ ನ ಚ ವೀರ್ಯೇಣ ಮಹತಾ ಸ್ವೇನ ವಿಸ್ಮಿತಃ ॥

ಅವನು ಮೇಧಾವಿ. ಸರ್ವದಾ ಮಧುರವಾಗಿ ಪ್ರಿಯವಾದ ಮಾತನಾಡತಕ್ಕವನು. ಜನರನ್ನು ಕಂಡಾಗ ತಾನೇ ಮೊದಲು ಮಾತನಾಡಿಸುವನು. ಮಹಾಶೂರನಾದರೂ ತಾನು ಶೂರನೆಂಬ ಜಂಭವಿಲ್ಲ.

ಅನುರಕ್ತಃ ಪ್ರಜಾಭಿಶ್ಚ ಪ್ರಜಾಶ್ಚಾಪ್ಯನುರಂಜತೇ ॥

ಪ್ರಜೆಗಳೆಲ್ಲರಿಗೂ ಅವನಲ್ಲಿ ಅನುರಾಗ. ಅವನಿಗೆ ಪ್ರಜೆಗಳಲ್ಲಿ ಅನುರಾಗ.

ದೀನಾನುಕಂಪೀ ಧರ್ಮಜ್ಞೋ ನಿತ್ಯಂ ಪ್ರಗ್ರಹವಾನ್ ಶುಚಿಃ ॥

ಶ್ರೀರಾಮನಿಗೆ ದೀನರಲ್ಲಿ ಕಾರುಣ್ಯ. ಅವನು ಧರ್ಮಜ್ಞನೂ ನಿಯಮವಂತನೂ ಪರ ಧನವನ್ನು ಎಂದಿಗೂ ಬಯಸದ ಶುದ್ಧಮನಸ್ಕನೂ ಆಗಿದ್ದನು.

ದಶರಥನು ತುಂಬಿದ ರಾಜಸಭೆಯಲ್ಲಿ "ನನ್ನ ಜ್ಯೇಷ್ಠಪುತ್ರನಾದ ರಾಮನಿಗೆ ಯುವರಾಜ ಪದವಿಯನ್ನು ಕೊಡಲು ಉದ್ದೇಶಿಸಿದ್ದೇನೆ"—ಎಂದು ಪ್ರಕಟಿಸಿದನು. ಸಭೆಯು ಹರ್ಷೋದ್ಗಾರ ದಿಂದ ಮೊಳಗಿತು. ದಶರಥನು ಆನಂದಚಕಿತನಾಗಿ "ಪ್ರಜೆಗಳೆ, ನಾನು ಧರ್ಮದಿಂದ ಪ್ರಜಾಪಾಲನೆ ಯನ್ನು ಮಾಡಿಕೊಂಡು ಬರುತ್ತಿರುವಾಗ, ನನ್ನ ಮಗನು ಯುವರಾಜನಾಗಲೆಂದು ಏಕೆ ಬಯ ಸುವಿರಿ? ನನಗೆ ಸಂಶಯವಾಗುತ್ತಿದೆ!"—ಎಂದು ಕೇಳಿದನು. ಆಗ ಸಭೆಯಲ್ಲಿ ನೆರೆದವರು ಹೀಗೆ ನುಡಿದರಂತೆ:

"ಮಹಾರಾಜ, ಶ್ರೀರಾಮನು ಪ್ರಜೆಗಳನ್ನು ಕಂಡಾಗ ತನ ಬಂಧುಗಳಂತೆ ಭಾವಿಸಿ ಕ್ಷೇಮ ವನ್ನು ವಿಚಾರಿಸುತ್ತಾನೆ. ನಮ್ಮ ಮಡದಿಯರು, ಮಕ್ಕಳು, ಶಿಷ್ಯರು, ಸೇವಕರು, ನಮ್ಮ ಅಗ್ನಿ ಹೋತ್ರ—ಇವೆಲ್ಲವನ್ನೂ ಕುರಿತು ಒಂದೊಂದಾಗಿ, ತಂದೆಯು ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ವಿಚಾರಿಸಿಕೊಳ್ಳುವಂತೆ ವಿಚಾರಿಸಿಕೊಳ್ಳುತ್ತಾನೆ. 'ನಿಮ್ಮ ಶಿಷ್ಯರೂ ಸೇವಕರೂ ಕರ್ತವ್ಯ ನಿರತರಾಗಿ ನಿಮ್ಮನ್ನು ಸೇವಿಸುತ್ತಿರುವರೆ?' ಎಂದು ಕೇಳುತ್ತಾನೆ. ನಮಗೆ ಆಕಸ್ಮಿಕವಾಗಿ ಬಂದ ಕಷ್ಟಗಳನ್ನು ಕೇಳಿ ಆ ಪುರುಷಶ್ರೇಷ್ಠನು ಬಹಳ ಮರುಕಪಡುತ್ತಾನೆ. ಜನರು ತಮಗೆ ಸಂತೋಷ ಕರವಾದ ವಿಷಯವನ್ನು ತಿಳಿಸಿದರೆ ತಂದೆಯಂತೆ ತಾನೂ ಸಂತೋಷಪಡುತ್ತಾನೆ. ಆತನು ನಗು ನಗುತ್ತ ನಮ್ಮೊಡನೆ ಮಾತನಾಡುತ್ತಾನೆ. ರಾಜ್ಯದಲ್ಲಿರುವ ಹುಡುಗಿಯರು, ಮುದುಕಿಯರು ಮೊದಲಾಗಿ ಸಕಲರೂ ಶ್ರೀರಾಮನಿಗೆ ಒಳ್ಳೆಯದಾಗಲೆಂದು ಪ್ರತಿದಿನ ಪ್ರಾತಃಕಾಲ ಸಾಯಂಕಾಲ ಗಳಲ್ಲಿ ದೇವತೆಗಳನ್ನು ಭಕ್ತಿಯಿಂದ ಪ್ರಾರ್ಥಿಸುತ್ತಿದ್ದಾರೆ. ಇವರೆಲ್ಲರ ಪ್ರಾರ್ಥನೆಯು, ಮಹಾರಾಜ, ನಿನ್ನ ಅನುಗ್ರಹದಿಂದ ನೆರವೇರಲಿ!"

ಸಾರಥಿಯಾದ ಸುಮಂತ್ರನಲ್ಲಿ, ಸಾಮಂತನಾದ ಗುಹನಲ್ಲಿ, ಜಟಾಯುವಿನಲ್ಲಿ, ಮುಗ್ಧ ಭಕ್ತಳಾದ ಶಬರಿಯಲ್ಲಿ, ಕಪಿಸೇನೆಯಲ್ಲಿ, ರಾಕ್ಷಸರಲ್ಲಿ, ಉತ್ತರಕಾಂಡದ ವಿವಿಧ ಪ್ರಸಂಗಗಳಲ್ಲಿ, ಕಾಗೆಯಲ್ಲಿ, ನಾಯಿಯಲ್ಲಿ, ಶ್ರೀರಾಮನ ಕಾರುಣ್ಯಪೂರ್ಣವಾದ ವರ್ತನೆ ಸೌಲಭ್ಯದ ಪರಮ ನಿದರ್ಶನಗಳು.

ಕಾರುಣ್ಯಪೂರಂ

ಭಗವಂತನನ್ನು ಕರುಣಾನಿಧಿಯೆನ್ನುತ್ತಾರೆ. ಕರುಣೆ ಪ್ರೇಮದ ಒಂದು ರೂಪಾಂತರ. ತಿಳಿಯಾದ ನೀರು ಬಣ್ಣಬಣ್ಣದ ಶೀಸೆಗಳಲ್ಲಿ ಬೇರೆಬೇರೆ ಬಣ್ಣವನ್ನು ತಳೆವಂತೆ ಕಾಣುತ್ತದೆ. ಬಣ್ಣದ ಶೀಸೆ ಉಪಾಧಿ. ಹಾಗೆ ಒಂದೇ ಪ್ರೇಮವು ವಿವಿಧ ಉಪಾಧಿಗಳಲ್ಲಿ ರೂಪಾಂತರವನ್ನು ತಳೆದಂತೆ ಕಂಡು ನಾಮಾಂತರವನ್ನು ಪಡೆಯುತ್ತದೆ ಭಗವಂತನಲ್ಲಿ - ಗುರುಹಿರಿಯರಲ್ಲಿ ಇರಿಸಿದ ಪ್ರೇಮವು ಭಕ್ತಿಯೆನಿಸುತ್ತದೆ. ಪುತ್ರರಲ್ಲಿ - ಶಿಷ್ಯರಲ್ಲಿ ಇರುವ ಪ್ರೇಮವೇ ವಾತ್ಸಲ್ಯ. ಸಮಾನಸ್ಕಂಧರಲ್ಲಿ ಸ್ನೇಹ, ದಂಪತಿಗಳಲ್ಲಿ ಪ್ರಣಯ, ದೀನದಳಿತರಲ್ಲಿ ಕಾರುಣ್ಯ—ಎಲ್ಲವೂ ಅದೇ. ಭಗವಂತನಮರಿಗೆ ಸಕಲ ಜೀವಿಗಳೂ ದೀನದಳಿತರೇ; ಪುತ್ರರಲ್ಲಿ, ಶಿಷ್ಯಕೋಟಿಯಲ್ಲಿ ಸೇರಿದವರೇ.

ಶ್ರೀರಾಮನು ಕಾರುಣ್ಯಪೂರ. ಕರುಣೆಯು ಪ್ರವಾಹವಾಗಿ ಉಕ್ಕಿ ಹರಿಯುತ್ತದೆ ಅವನಿಂದ. ಅದು ಸರ್ವತೋಮುಖವಾಗಿ ಹರಿಯುತ್ತದೆ. ಸರ್ವರೂ ಅದಕ್ಕೆ ಭಾಗಿಗಳು. ಬಂಧುಮಿತ್ರರಿಗೆ ಮಾತ್ರವಲ್ಲ, ಶತ್ರುಗಳಿಗೂ ಅದು ಲಭ್ಯ. ಬೆಲ್ಲದ ಮುದ್ದೆಯನ್ನು ಯಾರು ಯಾವ ದಿಕ್ಕಿನಿಂದ ತಿಂದರೂ ಸಿಹಿಯಾಗಿಯೇ ಇರುತ್ತದೆ.

ಶ್ರೀರಾಮನಿಗೆ ತಂದೆಯಲ್ಲಿ ಬಾಲ್ಯದಿಂದಲೂ ಅತಿಶಯವಾದ ಭಕ್ತಿ. ವಿಶ್ವಾಮಿತ್ರರು ತಾಟಕಿಯನ್ನು ಸಂಹರಿಸೆಂದು ಹೇಳಿದಾಗ ಸ್ತ್ರೀವಧೆಯನ್ನು ಹೇಗೆ ಮಾಡಲೆಂದು ಶ್ರೀರಾಮನಿಗೆ ಸಂಕೋಚವಾಯಿತು. ಮತ್ತೆ ಅದೇ ಮಾತನ್ನು ಆ ಋಷಿಗಳು ಹೇಳಿದಾಗ "ಋಷಿಗಳೆ, ವಿಶ್ವಾಮಿತ್ರರು ಹೇಳಿದಂತೆ ನಡೆದುಕೋ ಎಂದು ನನ್ನ ತಂದೆಯು ಗುರುಗಳೆದುರಿಗೆ ಆಜ್ಞಾಪಿಸಿದ್ದಾನೆ. ಆದ್ದರಿಂದ ನಿಮ್ಮ ಆಜ್ಞೆಯಂತೆ ನಡೆಯುತ್ತೇನೆ "—ಎಂದು ನುಡಿದು ತಾಟಕಾವಧೆಗೆ ಸಿದ್ಧನಾಗುತ್ತಾನೆ. ತನ್ನ ಪರಾಕ್ರಮದಿಂದಲೇ ಸೀತೆಯನ್ನು ಗೆದ್ದಿದ್ದರೂ ಅವಳನ್ನು ಮದುವೆಯಾಗಲು ತಂದೆಯ ಅನುಮತಿ ಆವಶ್ಯಕವೆಂದು ತಿಳಿಸಿಬಿಡುತ್ತಾನೆ. ಮದುವೆಯಾದಮೇಲೆ ಸಾಧ್ವೀಶಿರೋಮಣಿಯೂ ದಿವ್ಯಸುಂದರಿಯೂ ಆದ ಜಾನಕಿಯಲ್ಲಿ ಅವನ ಪ್ರೇಮವು ಬೆಳೆಯುತ್ತಹೋಗುವುದು ಸಹಜವೇ. ಆದರೆ ಆ ಪ್ರೇಮಕ್ಕೆ ಬೇರೊಂದು ಕಾರಣವನ್ನು ವಾಲ್ಮೀಕಿಗಳು ಹೇಳುತ್ತಾರೆ. 'ಈ ಸೀತೆ ನನ್ನ ತಂದೆಯು ಗೊತ್ತುಮಾಡಿ ಮದುವೆ ಮಾಡಿಸಿದ ಹೆಂಡತಿ' ಎಂದು ಶ್ರೀರಾಮನಿಗೆ ಪ್ರೀತಿಪಾತ್ರಳಾದಳಂತೆ!

ಪ್ರಿಯಾ ತು ಸೀತಾ ರಾಮಸ್ಯ ದಾರಾಃ ಪಿತೃಕೃತಾ ಇತಿ ॥

(ಬಾಲ. ೭೭—೨೮)

ತಂದೆಯ ಮಾತನ್ನು ಯಾವ ಸಂದರ್ಭದಲ್ಲಿಯೂ ಮೀರಿ ನಡೆಯುವುದಿಲ್ಲವೆಂಬುದು ಅವನ ದೃಢವಾದ ನಿಲುವು. ತಂದೆಯನ್ನು ತನ್ನ ಗುರುವೆಂದೂ ದೇವತೆಯೆಂದೂ ಅವನು ತಿಳಿದಿದ್ದನು. ತನ್ನನ್ನು ವನಕ್ಕೆ ಕಳಿಸಿದನೆಂದು ಅವನಿಗೆ ದುಃಖವಾಗಲೇ ಇಲ್ಲ. ತಾನಿಲ್ಲದಾಗ ಕೈಕೇಯಿಯಿಂದ ದಶರಥನಿಗೆ ಹಿಂಸೆಗಳು ಸಂಭವಿಸಬಹುದೆಂದು ಅವನಿಗೆ ಚಿಂತೆ. ದಶರಥನ ಮರಣವಾರ್ತೆಯು ಮುಟ್ಟಿದಾಗ ಅವನಿಗಾದ ದುಃಖ ಅಸಾಧಾರಣ. "ಆಹಾ! ಆ ಮಹಾತ್ಮನಿಗೆ ನನ್ನಂಥವನು ಮಗನಾಗಿ ಹುಟ್ಟಬಾರದು. ಅವನ ಮರಣಕ್ಕೆ ನಾನೇ ನಿಮಿತ್ತವಾದೆನಲ್ಲ! ಅವನಿಗೆ ಉತ್ತರ ಸಂಸ್ಕಾರವನ್ನು ಮಾಡುವ ಪುಣ್ಯವೂ ನನಗಿಲ್ಲವಾಯಿತೆ! "—ಎಂಬ ಅನುತಾಪ ಹೃದಯಾಂತರಾಳದಿಂದ ಬಂದದ್ದು.

ಕೌಸಲ್ಯೆಯಲ್ಲಿ ಅವನಿಗಿದ್ದ ಮಾತೃಭಕ್ತಿಯೆಷ್ಟು! ವನವಾಸಕ್ಕೆ ಹೊರಡುವಾಗ ಕೌಸಲ್ಯೆಗೆ ಹೇಳುವ ಸಮಾಧಾನದ ಬಗೆ ಅವನ ಮಾತೃಭಕ್ತಿಗೆ ಪರಮನಿದರ್ಶನ. ತಾನು ವನಕ್ಕೆ ಹೋದಮೇಲೆ ಕೌಸಲ್ಯೆಯ ಸ್ಥಿತಿ ಅತ್ಯಂತ ಶೋಚನೀಯವಾಗುವುದೆಂದು ಶ್ರೀರಾಮನಿಗೆ ಸ್ಪಷ್ಟವಾಗಿತ್ತು. ಇವನು ವನಕ್ಕೆ ಹೊರಡುವಾಗ ದಶರಥನನ್ನು ಕುರಿತು "ಮಹಾರಾಜ, ನನ್ನ ತಾಯಿ ವೃದ್ಧೆಯಾಗಿದ್ದಾಳೆ, ಶೀಲವಂತೆಯಾಗಿ ನಿನ್ನ ಶುಶ್ರೂಷೆ ಮಾಡುತ್ತ ಬಂದಿದ್ದಾಳೆ. ನಿನ್ನನ್ನು ಒಂದುಸಲವೂ ಇವಳು ನಿಂದಿಸಿದವಳಲ್ಲ. ನಾನಿರುವುದಿಲ್ಲವೆಂದು ದುಃಖಮಗ್ನಳಾಗಿದ್ದಾಳೆ. ಇವಳ ಯೋಗಕ್ಷೇಮದ ಕಡೆಗೆ ನಿನ್ನ ಚಿಂತೆ ಇರಲಿ. ನನ್ನ ದುಃಖದಿಂದ ಇವಳು ದೇಹವನ್ನು ಬಿಡದಂತೆ ನೋಡಿಕೊಳ್ಳಬೇಕು "—ಎಂದು ಹೇಳಿದನು.

ವನಕ್ಕೆ ಹೋದಮೇಲೂ ಅವನಿಗೆ ತಾಯಿಯ ಚಿಂತೆಯೇ. ಒಂದುಸಲ ಲಕ್ಷ್ಮಣನೊಡನೆ—

ಮಾ ಸ್ಮ ಸೀಮಂತಿನೀ ಕಾಚಿಜ್ಜನಯೇತ್ ಪುತ್ರಮೀದೃಶಮ್ ।
ಸೌಮಿತ್ರೇ ಯೋಽಹಮಂಬಾಯಾ ದದ್ಮಿ ಶೋಕಮನಂತಕಮ್ ॥
(ಅಯೋಧ್ಯಾ. ೫೩—೨೧)

"ಲಕ್ಷ್ಮಣ, ಯಾವ ಗೃಹಿಣಿಯೂ ನನ್ನಂಥ ಮಗನನ್ನು ಹಡೆಯಬಾರದು ! ನಾನು ಅಮ್ಮನಿಗೆ ನಿರಂತರವಾದ ಶೋಕವನ್ನು ತಂದೊಡ್ಡಿದೆನು "—ಎಂದು ವಿಲಪಿಸಿದನು.

ತಂದೆತಾಯಿಗಳ ಉಪಕಾರದ ಋಣವನ್ನು ತೀರಿಸುವುದು ಅಶಕ್ಯವೆಂದು ಶ್ರೀರಾಮನು ಹೇಳುತ್ತಾನೆ ·

ಯನ್ಮಾತಾಪಿತರೌ ವೃತ್ತಂ ತನಯೇ ಕುರುತಃ ಸದಾ ।
ನ ಸುಪ್ರತಿಕರಂ ತತ್ತು ಮಾತ್ರಾ ಪಿತ್ರಾ ಚ ಯತ್ಕೃತಮ್ ॥
ಯಥಾಶಕ್ತಿ ಪ್ರದಾನೇನ ಸ್ನಾಪನಾಚ್ಛಾದನೇನ ಚ ।
ನಿತ್ಯಂ ಚ ಪ್ರಿಯವಾದೇನ ತಥಾ ಸಂವರ್ಧನೇನ ಚ ॥
ಸ ಹಿ ರಾಜಾ ಜನಯಿತಾ ಪಿತಾ ದಶರಥೋ ಮಮ ।
ಆಜ್ಞಾತಂ ಯನ್ಮಯಾ ತಸ್ಯ ನ ತನ್ಮಿಥ್ಯಾ ಭವಿಷ್ಯತಿ ॥
(ಅಯೋಧ್ಯಾ. ೧೧೧—೯, ೧೦, ೧೧)

"ತಂದೆತಾಯಿಗಳು ಮಕ್ಕಳ ಪೋಷಣೆಗಾಗಿ ಏನು ಮಾಡಿರುವರೋ ಅದನ್ನು ತೀರಿಸಲು ಸಾಧ್ಯವಿಲ್ಲ. ತಮಗೆ ಶಕ್ತಿಯಿರುವಷ್ಟನ್ನೂ ವಿನಿಯೋಗಿಸಿ ಮಕ್ಕಳಿಗೆ ಬೇಕಾದ್ದನ್ನು ತಂದು ಕೊಡುತ್ತಾರೆ. ಅವರನ್ನು ಮೈತೊಳಿಸಿ ಬಟ್ಟೆಯುಡಿಸಿ ಮುಂದ್ದುಮಾತಾಡಿ ಆಹಾರವನ್ನು ಕೊಟ್ಟು ಬೆಳೆಸಿರುತ್ತಾರೆ. ದಶರಥಮಹಾರಾಜನು ನನಗೆ ದೇಹವನ್ನು ಕೊಟ್ಟು ಪೋಷಿಸಿದ ತಂದೆ. ಅವನ ಎದುರಿಗೆ ನಾನು ಯಾವ ಮಾತು ಕೊಟ್ಟೆನೋ ಅದು ಎಂದಿಗೂ ಸುಳ್ಳಾಗಲಿಕ್ಕಿಲ್ಲ."

ಗುರುಗಳಲ್ಲಿ – ತಪಸ್ವಿಗಳಲ್ಲಿ ಶ್ರೀರಾಮನಿಗೆ ನಿರತಿಶಯವಾದ ಭಕ್ತಿ ಇತ್ತು. ವಸಿಷ್ಠ ವಿಶ್ವಾಮಿತ್ರರೊಡನೆಯೂ ದಂಡಕಾರಣ್ಯದಲ್ಲಿರುವಾಗ ಅಗಸ್ತ್ಯಾದಿಮುನಿಗಳೊಡನೆಯೂ ಅವನು ನಡೆದುಕೊಂಡ ರೀತಿ, ಗುರುಹಿರಿಯರಲ್ಲಿ ಹೇಗೆ ವರ್ತಿಸಬೇಕೆಂಬುದಕ್ಕೆ ಒಂದು ಪಾಠವಾಗಿದೆ.

ಅವನು ಚಿತ್ರಕೂಟದಲ್ಲಿ ಸೀತಾಲಕ್ಷ್ಮಣರೊಡನೆ ವಾಸವಾಗಿದ್ದನಷ್ಟೆ. ಸುತ್ತಲೂ ಇದ್ದ ಋಷಿಗಳು ಒಂದು ದಿನ ಗಂಟುಮೂಟೆಗಳನ್ನು ಕಟ್ಟಿ ಮುಂದೆ ಹೊರಡುವ ಸಂನಾಹದಲ್ಲಿದ್ದುದು ಶ್ರೀರಾಮನಿಗೆ ಗೋಚರಿಸಿತು. ತಮ್ಮಿಂದ ಆ ಋಷಿಗಳಿಗೆ ಏನಾದರೂ ಅಪಚಾರವಾಗಿರಬಹುದೆ ? ಎಂದು ಅವನಿಗೆ ಸಂದೇಹವಾಯಿತು. ಶ್ರೀರಾಮನು ಕುಲಪತಿಯನ್ನು ಸಮೀಪಿಸಿ "ಭಗವನ್, ನನ್ನಲ್ಲಿ ಯಾವುದಾದರೂ ತಪ್ಪುನಡತೆಯು ತಮಗೆ ಗೋಚರಿಸಿತೆ ? ಋಷಿಗಳೆಲ್ಲರೂ ಇಲ್ಲಿಂದ ಹೊರಡುವ ಸಂನಾಹದಲ್ಲಿರುವುದೇಕೆ ? ಲಕ್ಷ್ಮಣನಿಂದ ಏನಾದರೂ ಪ್ರಮಾದವಾಯಿತೆ ? ಅಥವಾ ಸೀತೆಯು ನನ್ನ ಶುಶ್ರೂಷೆಯಲ್ಲಿಯೇ ನಿರತಳಾಗಿ ತಮ್ಮ ಸೇವೆಯಲ್ಲಿ ಉಪೇಕ್ಷೆಯನ್ನು ತೋರಿದಳೆ ?" ಎಂದು ಕೇಳಿದನು. ಋಷಿಗಳ ಪ್ರಯಾಣಕ್ಕೆ ಕಾರಣವೇ ಬೇರೆಯಾಗಿತ್ತು.

ಶ್ರೀರಾಮನೆಂದೊಡನೆ ಸೀತಾವಿಶಿಷ್ಟನಾದ ಶ್ರೀರಾಮನೇ ನಮ್ಮ ಹೃದಯಕ್ಕೆ ಗೋಚರನಾಗುತ್ತಾನೆ. ಸೀತಾರಹಿತನಾದ ಶ್ರೀರಾಮನು ಕಥೆಯಲ್ಲಿದ್ದರೂ ಜನರ ಹೃದಯದಲ್ಲಿಲ್ಲ. ಸೀತೆಯಿಲ್ಲದ ಶ್ರೀರಾಮನನ್ನು ಊಹಿಸಿಕೊಳ್ಳುವುದು ಕಷ್ಟ, ಊಹಿಸಿಕೊಂಡರೂ ಮನಸ್ಸಿಗೆ ದುಃಖವಾಗುವುದೇ ವಿನಾ ಸುಖವಾಗದು. ಶ್ರೀರಾಮನು ಜಾನಕಿಯನ್ನು "ಪ್ರಾಣೇಭ್ಯೋಽಪಿ ಗರೀಯಸೀ"—

"ನನ್ನ ಪ್ರಾಣಕ್ಕಿಂತ ಹೆಚ್ಚು ನನಗೆ ಪ್ರೀತಿಪಾತ್ರಳು"—ಎಂದು ಅನೇಕಸಲ ಹೇಳಿದ್ದಾನೆ.

ಅವಳು ತನ್ನೊಡನೆ ವನಕ್ಕೆ ಬರಬಾರದೆಂದು ಬಹುವಿಧದಲ್ಲಿ ಶ್ರೀರಾಮನು ಹೇಳಿದ್ದು ಅವಳಲ್ಲಿದ್ದ ಪ್ರೀತಿಯಿಂದಲೇ. ಆ ಕೋಮಲೆಗೆ ಅರಣ್ಯದಲ್ಲಿ ಕಷ್ಟವಾದೀತೆಂದು ಹೇಳಿ ನೋಡಿದನು. ಅದು ಶಕ್ಯವಾಗಲಿಲ್ಲ. ಕಡೆಗೆ ಸೀತೆಯನ್ನಾಲಿಂಗಿಸಿಕೊಂಡು—

ಸಾ ಹಿ ಸೃಷ್ಟ್ವಾನವದ್ಯಾಂಗೀ ವನಾಯ ಮದಿರೇಕ್ಷಣೇ ।
ಅನುಗಚ್ಛಸ್ವ ಮಾಂ ಭೀರು ಸಹಧರ್ಮಚರೀ ಭವ ॥
(ಅಯೋಧ್ಯಾ. ೩೦—೪೦)

"ಕಾಂತೆ, ಸುಕುಮಾರಿಯಾದ ನೀನು ವನವಾಸದ ಕಷ್ಟವನ್ನನುಭವಿಸುವುದಕ್ಕಾಗಿಯೇ ಜನಿಸಿದಂತಾಯಿತೆ? ನನ್ನೊಡನೆ ಬರಬಹುದು. ಬಂದು ನನ್ನ ಸಹಧರ್ಮಚಾರಿಣಿಯಾಗಿರು"—ಎಂದನು.

ಅರಣ್ಯದಲ್ಲಿ ಸೀತೆಗೆ ಬೇಸರವಾಗಬಾರದು, ಕಷ್ಟವು ತೋರಬಾರದು ಎಂದು ಶ್ರೀರಾಮನು ಜಾಗ್ರತನಾಗಿದ್ದನು. ಅವಳಿಗೆ ವನಸೌಂದರ್ಯವನ್ನು ವರ್ಣಿಸುತ್ತ, ಮೃಗಪಕ್ಷಿಗಳ ಚೆಲ್ಲಾಟವನ್ನು ತೋರಿಸುತ್ತ, ಸರೋವರದಲ್ಲಿ ವಿಹರಿಸುತ್ತ, ಒಳ್ಳೆಯ ಆಹಾರವನ್ನು ತಂದುಕೊಡುತ್ತ, ಸರಸಸಲ್ಲಾಪಗಳಲ್ಲಿ ವನವಾಸವನ್ನು ಕಳೆಸಿದನು. ವನದಲ್ಲಿ ಹೋಗುವಾಗ "ಲಕ್ಷ್ಮಣ, ಸೀತೆಯು ಆಸೆಯಿಂದ ನೋಡಿದ ಹೂವನ್ನೂ ಹಣ್ಣನ್ನೂ ತಂದುಕೊಡು" ಎಂದು ಹೇಳುವುದನ್ನು ಯಾವಾಗಲೂ ಮರೆಯಲಿಲ್ಲ.

ರಾವಣನು ಸೀತೆಯನ್ನು ಅಪಹರಿಸಿದ ಮೇಲೆ ಶ್ರೀರಾಮನ ಶೋಕವು ಹೊನಲಾಗಿ ಹರಿಯಿತು. ಅರಣ್ಯವು ಕಣ್ಣೀರಿಂದ ನೆನೆಯಿತು.

ಋಷ್ಯಮೂಕಗಿರಿಯ ಮೇಲೆ ಸೀತಾದೇವಿಯು ಬೀಳಿಸಿದ್ದ ಆಭರಣಗಳನ್ನೂ ಉತ್ತರೀಯವನ್ನೂ ಸುಗ್ರೀವನು ತೋರಿಸಿದಾಗ ಶ್ರೀರಾಮನು ಕಣ್ಣೀರು ತುಂಬಿದನು:

ಅಭವದ್ಬಾಷ್ಪಸಂರುದ್ಧೋ ನೀಹಾರೇಣೇವ ಚಂದ್ರಮಾಃ ।
ಸೀತಾಸ್ನೇಹಪ್ರವೃತ್ತೇನ ಸ ತು ಬಾಷ್ಪೇಣ ದೂಷಿತಃ ॥
ಹಾ ಪ್ರಿಯೇತಿ ರುದನ್ ಧೈರ್ಯಮುತ್ಸೃಜ್ಯ ನ್ಯಪತತ್ ಕ್ಷಿತೌ ।
ಹೃದಿ ಕೃತ್ವಾ ತು ಬಹುಶಸ್ತಮಲಂಕಾರಮುತ್ತಮಮ್ ॥
(ಕಿಷ್ಕಿಂಧಾ. ೬—೧೬, ೧೭)

"ಸೀತಾಸ್ನೇಹದಿಂದ ಕಣ್ಣೀರು ತುಳುಕಿತು. ಮುಖವು ಒದ್ದೆಯಾಗಿ ಮಂಜು ಮುಸುಕಿದ ಚಂದ್ರನಂತಾಯಿತು. ಶ್ರೀರಾಮನು ಆ ಒಡವೆಗಳನ್ನು ಎದೆಗೆ ಒತ್ತಿಕೊಂಡು 'ಹಾ ಪ್ರಿಯೇ' ಎನ್ನುತ್ತ ನೆಲದ ಮೇಲೆ ಬಿದ್ದನು.

ಅನಂತರ ಸುಗ್ರೀವನ ಕಡೆಗೆ ತಿರುಗಿ, "ಮಿತ್ರ–ಸುಗ್ರೀವ, ಹಸು ತನ್ನ ಕರುವನ್ನು ಕಂಡಾಗ ಕೆಚ್ಚಲು ಸ್ರವಿಸುವಂತೆ, ಈ ಮಣಿರತ್ನವನ್ನು ಕಂಡು ನನ್ನ ಹೃದಯವು ಕರಗಿಹೋಗುತ್ತಿದೆ. ನನ್ನ ಮಾವನು ಈ ರತ್ನವನ್ನು ಸೀತೆಗೆ ಮದುವೆಯ ಕಾಲದಲ್ಲಿ ಕೊಟ್ಟಿದ್ದನು. ಅವಳ ತಲೆಯಲ್ಲಿ ಇದು ಬಹಳ ಚೆನ್ನಾಗಿ ಒಪ್ಪುತ್ತಿತ್ತು. ಈ ರತ್ನವನ್ನು ನೋಡಿದರೆ ನನ್ನ ಕಾಂತೆಯೇ ಎದುರಿಗೆ ಬಂದು ನಿಂತಂತೆ ತೋರುತ್ತದೆ......ಲಕ್ಷ್ಮಣ, ಇದಕ್ಕಿಂತಲೂ ದುಃಖ ಇನ್ನಾವುದು? ಚೂಡಾಮಣಿ ಇದೆ, ಸೀತೆ ಇಲ್ಲ......ಹನುಮಂತ, ನನ್ನ ಸೀತೆ ಏನೇನು ಹೇಳಿದ್ದಾಳೆ— ಎಲ್ಲವನ್ನೂ ಹೇಳಿಬಿಡು. ಅವಳ ಮಾತನ್ನು ಕೇಳಿದರೆ, ಹೇಗಾದರೂ ನನ್ನ ಜೀವ ಉಳಿದೀತು"—ಎಂದನು.

ಶ್ರೀರಾಮನ ಭ್ರಾತೃವಾತ್ಸಲ್ಯವೂ ಮಿಗಿಲಾದದ್ದು. ಭರತ ಲಕ್ಷ್ಮಣ ಶತ್ರುಘ್ನರು ಅವನಲ್ಲಿರಿಸಿದ್ದ ಸ್ನೇಹವು ಏಕಮುಖವಾದ್ದಲ್ಲ. ಅದು ದ್ವಿಗುಣವಾಗಿ ಪುನಃ ಅವರೆಲ್ಲರಿಗೂ ಸಲ್ಲುತ್ತಿತ್ತು. ದಶರಥನು ಅವನಿಗೆ ಪಟ್ಟಾಭಿಷೇಕಮಾಡಬೇಕೆಂದು ಸಂಕಲ್ಪಿಸಿದಾಗ ಶ್ರೀರಾಮನು ಲಕ್ಷ್ಮಣನಿಗೆ ಹೇಳಿದ್ದೇನು ? "ಲಕ್ಷ್ಮಣ, ಈ ರಾಜ್ಯವನ್ನು ನನ್ನೊಡನೆ ನೀನೂ ಆಳಬಹುದು. ನೀನು ನನ್ನ ಎರಡನೆಯ ಹೃದಯವಾಗಿದ್ದೀಯೆ. ಈ ರಾಜ್ಯಲಕ್ಷ್ಮಿಯು ನಿನ್ನದೇ. ನಿನಗೆ ಬೇಕಾದ ರಾಜಭೋಗಗಳನ್ನನುಭವಿಸು.

ಜೀವಿತಂ ಚ ಹಿ ರಾಜ್ಯಂ ಚ ತ್ವದರ್ಥಮಭಿಕಾಮಯೇ ॥

"ನನ್ನ ಬದುಕು, ಈ ರಾಜ್ಯ—ಇದೆಲ್ಲವನ್ನೂ ನಿನಗಾಗಿ ನಾನು ಬಯಸುತ್ತೇನೆ"—ಎಂದನು.

ಚಿತ್ರಕೂಟದಲ್ಲಿದ್ದಾಗ ಶ್ರೀರಾಮನ ದರ್ಶನಕ್ಕಾಗಿ ಭರತನು ಸೇನಾಸಮೇತನಾಗಿ ಬಂದನಷ್ಟೆ. ದೂರದಲ್ಲಿ ಬರುತ್ತಿದ್ದ ಸೇನೆಯನ್ನು ಕಂಡು ಲಕ್ಷ್ಮಣನು ಸಿಟ್ಟಿನಿಂದ ಉರಿದೆದ್ದನು. ತಮ್ಮನ್ನು ಸಂಹರಿಸುವುದಕ್ಕಾಗಿ ಭರತನು ಬರುತ್ತಿದ್ದಾನೆಂದು ಅವನ ಕಲ್ಪನೆ. ಅವನು ಭರತನನ್ನು ದೂರಿದಾಗ. ಭರತನ ಉದ್ದೇಶವೇನಿದೆಯೆಂದು ಇನ್ನೂ ತಿಳಿಯದಿದ್ದಾಗ ಶ್ರೀರಾಮನು ಹೇಳುವ ಮಾತು ಮನಸ್ಸನ್ನು ಸೂರೆಗೊಳ್ಳುವಂತಹದು :

ಧರ್ಮಮರ್ಥಂ ಚ ಕಾಮಂ ಚ ಪೃಥಿವೀಂ ಚಾಪಿ ಲಕ್ಷ್ಮಣ ।
ಇಚ್ಛಾಮಿ ಭವತಾಮರ್ಥೆ ಏತತ್ ಪ್ರತಿಶೃಣೋಮಿ ತೇ ॥
ಯದ್ವಿನಾ ಭರತಂ ತ್ವಾಂ ಚ ಶತ್ರುಘ್ನಂ ಚಾಪಿ ಮಾನದ ।
ಭವೇನ್ಮಮ ಸುಖಂ ಕಿಂಚಿದ್ ಭಸ್ಮ ತತ್ ಕುರುತಾಂ ಶಿಖೀ ॥

(ಅಯೋಧ್ಯಾ. ೯೭—೫, ೮)

"ಲಕ್ಷ್ಮಣ, ಆಣೆಮಾಡಿ ಹೇಳುತ್ತೇನೆ, ಕೇಳು. ಧರ್ಮಾರ್ಥಕಾಮಗಳನ್ನಾಗಲಿ ಈ ಪೃಥ್ವಿಯನ್ನೇ ಆಗಲಿ, ನಾನು ಬಯಸುವುದು ನಿಮ್ಮೆಲ್ಲರಿಗೋಸ್ಕರವಾಗಿ. ನಿನಗೆ, ಭರತನಿಗೆ, ಶತ್ರುಘ್ನನಿಗೆ ಇಲ್ಲದ ಸುಖವೇನಾದರೂ ನನಗೆ ದೊರಕುವುದಾದರೆ—ಅದು ಬೆಂಕಿಯಲ್ಲಿ ಬಿದ್ದು ಬೂದಿಯಾಗಲಿ!"

"ಲಕ್ಷ್ಮಣ, ನಾನು ಭರತನನ್ನು ಎದುರಿಸಿ ಯುದ್ಧಮಾಡಲೆ? ಎಂತಹ ವಿಪತ್ತು ಬಂದರೂ ಮಕ್ಕಳು ತಂದೆಯನ್ನು ಕೊಲ್ಲಬಹುದೆ ? ಸೋದರನು ಸೋದರನನ್ನು ಕೊಲ್ಲಬಹುದೆ ? ಅವರೆಲ್ಲರೂ ನಮ್ಮ ಪ್ರಾಣವೇ ಅಲ್ಲವೆ? ನನಗೆ ರಾಜ್ಯದಲ್ಲಿ ಅಪೇಕ್ಷೆಯೇನೋ ಉಂಟು. ಏತಕ್ಕಾಗಿ? ನನ್ನ ತಮ್ಮಂದಿರ ಜೊತೆಯಲ್ಲಿರೋಣ, ಅವರು ಸುಖವಾಗಿರಲಿ—ಎಂದು."

ರಣರಂಗದಲ್ಲಿ ಲಕ್ಷ್ಮಣನು ಮೂರ್ಛಿತನಾಗಿ ಬಿದ್ದಾಗ ಶ್ರೀರಾಮನ ಶೋಕವು ಪರಮಾವಧಿಯನ್ನು ಮುಟ್ಟಿತು. ಅವನ ವಿಲಾಪದಲ್ಲಿ ಸೌಭ್ರಾತ್ರದ ಆಳವನ್ನು ಊಹಿಸಬಹುದು.

ಶಕ್ಯಾ ಸೀತಾಸಮಾ ನಾರೀ ಮರ್ತ್ಯಲೋಕೇ ವಿಚಿನ್ವತಾ ।
ನ ಲಕ್ಷ್ಮಣಸಮೋ ಭ್ರಾತಾ ಸಚಿವಃ ಸಾಂಪರಾಯಿಕಃ ॥

(ಯುದ್ಧ. ೪೯—೬)

ದೇಶೇ ದೇಶೇ ಕಲತ್ರಾಣಿ ದೇಶೇ ದೇಶೇ ಚ ಬಾಂಧವಾಃ ।
ತಂ ತು ದೇಶಂ ನ ಪಶ್ಯಾಮಿ ಯತ್ರ ಭ್ರಾತಾ ಸಹೋದರಃ ॥

(ಯುದ್ಧ. ೧೦೨—೧೨, ೧೩)

"ಭೂಲೋಕದಲ್ಲಿ ಹುಡುಕಿದರೆ ಸೀತೆಯಂಥ ಇನ್ನೊಬ್ಬ ನಾರಿಯು ದೊರೆಯಬಹುದು. ಕಾರ್ಯನಿಷ್ಠನಾಗಿ ಸಹಾಯಮಾಡುವ ಇನ್ನೊಬ್ಬ ತಮ್ಮನು ಮಾತ್ರ ನನಗೆ ದೊರೆಯುವುದಿಲ್ಲ.

ಯಾವ ದೇಶಕ್ಕೆ ಹೋದರೂ ಮಡದಿಯರು ಸಿಗುತ್ತಾರೆ; ಬಂಧುಗಳು ಲಭಿಸುತ್ತಾರೆ. ಆದರೆ ಒಡಹುಟ್ಟಿದ ತಮ್ಮನು ಎಲ್ಲಿ ದೊರೆಯುವನೋ ನನಗೆ ಕಾಣದು.

ಯುದ್ಧ ಮುಗಿಯಿತು. ಲಂಕೆಯಲ್ಲಿ ವಿಭೀಷಣನಿಗೆ ಪಟ್ಟಾಭಿಷೇಕವಾಯಿತು. ಶ್ರೀರಾಮನು ಬಹಳ ದಣಿದಿದ್ದಾನೆ. ಅವನು ಅಭ್ಯಂಜನ ಸ್ನಾನಮಾಡಲಿ. ಕೆಲವುಕಾಲ ಸುಖವಾಗಿ ವಿಶ್ರಮಿಸುತ್ತಲಿರಲಿ—ಎಂದು ವಿಭೀಷಣನಿಗೆ ಇಚ್ಛೆಯಾಯಿತು. ಅದನ್ನು ಶ್ರೀರಾಮನಿಗೆ ನಿವೇದಿಸಿದನು. ಅದಕ್ಕೆ ಲಭಿಸಿದ ಉತ್ತರವೇನು ?

"ವಿಭೀಷಣ, ಸುಗ್ರೀವನೇ ಮೊದಲಾದ ಯೋಧರು ಬಹಳ ದಣಿದಿದ್ದಾರೆ. ಅವರನ್ನು ಉಪಚರಿಸು. ನಾನು ಮೊದಲು ಭರತನನ್ನು ನೋಡಬೇಕಾಗಿದೆ. ಆ ಸುಕುಮಾರನು ನನಗೋಸ್ಕರ ಬಹಳ ಕಷ್ಟದಲ್ಲಿ ತೊಳಲುತ್ತಿದ್ದಾನೆ. ಧರ್ಮಾತ್ಮನಾದ ಭರತನನ್ನು ಕಂಡಲ್ಲದೆ, ನನಗೆ ಸ್ನಾನ ವಸ್ತ್ರ ಆಭರಣ ಯಾವುದೂ ಬೇಡವಾಗಿದೆ"—ಎಂದು ಶ್ರೀರಾಮನ ಉತ್ತರವಾಗಿತ್ತು.

ಮಿತ್ರರಾದ ಗುಹ, ಸುಗ್ರೀವ ಮುಂತಾದವರಲ್ಲಿ ಶ್ರೀರಾಮನಿಗಿದ್ದ ಸ್ನೇಹವು ಅಪಾರವಾದದ್ದು. ಯುದ್ಧಾರಂಭಕ್ಕೆ ಮೊದಲು ಸುವೇಲಪರ್ವತದಲ್ಲಿ ಸುಗ್ರೀವನ ಸೇನೆ ನಿಂತಿತ್ತು. ಶ್ರೀರಾಮ, ಸುಗ್ರೀವ ಮೊದಲಾದವರು ಅಲ್ಲಿ ನಿಂತು ಲಂಕೆಯ ಕಡೆಗೆ ನೋಡುತ್ತಿದ್ದರು. ಆ ಸಮಯದಲ್ಲಿ ರಾವಣನು ಒಂದು ಎತ್ತರವಾದ ಸ್ಥಳದಲ್ಲಿ ನಿಂತು ವಾನರಸೇನೆಯನ್ನು ಅವಲೋಕಿಸುತ್ತಿದ್ದನು. ಸುಗ್ರೀವನಿಗೆ ಅವನು ರಾವಣನೆಂದು ಗೊತ್ತಾಯಿತು. ಕೂಡಲೇ ಅವನು ಛಂಗನೆ ನೆಗೆದು ರಾವಣನೆದುರಿಗೆ ಹೋಗಿ ನಿಂತನು! ರಾವಣ ಸುಗ್ರೀವರಿಗೆ ದೊಡ್ಡ ಹೊಡೆದಾಟವೇ ನಡೆಯಿತು. ಸುಗ್ರೀವನು ಹೇಗೋ ತಪ್ಪಿಸಿಕೊಂಡು ಹಾರಿಬಂದು ಶ್ರೀರಾಮನ ಬಳಿಯಲ್ಲಿ ನಿಂತನು. ಶ್ರೀರಾಮನು ಸುಗ್ರೀವನನ್ನು ಗಾಢವಾಗಿ ಅಪ್ಪಿಕೊಂಡು, "ಮಿತ್ರ, ನೀನು ಇಂತಹ ಸಾಹಸವನ್ನು ಮಾಡಬಹುದೆ ? ಏಕಾಕಿಯಾಗಿ ಶತ್ರುಮಧ್ಯದಲ್ಲಿ ಧುಮುಕಬಹುದೆ ? ನನಗೆ ತಿಳಿಸದೆ ಹೀಗೆ ಮಾಡಿದೆಯಲ್ಲ. ಇನ್ನೊಮ್ಮೆ ಈ ಸಾಹಸವನ್ನು ಮಾಡಬೇಡ. ನಿನಗೆ ಏನಾದರೂ ಆಗಿಬಿಟ್ಟಿದ್ದರೆ, ಆಗ ನನಗೆ ಸೀತೆಯಿಂದ ಯಾವ ಸೌಖ್ಯ ದೊರೆಯುತ್ತಿತ್ತು ? ನನ್ನ ತಮ್ಮಂದಿರೊಡನೆ ನಾನು ಹೇಗೆ ನೆಮ್ಮದಿಯಲ್ಲಿ ಇರಲು ಸಾಧ್ಯವಾಗುತ್ತಿತ್ತು ? ಸತ್ಯವಾಗಿ ಹೇಳುತ್ತೇನೆ, ಕೇಳು. ಆ ಸಂದರ್ಭದಲ್ಲಿ ನಾನು ರಾವಣನನ್ನು ಸಂಹರಿಸಿ, ಸೀತೆಯನ್ನು ಸೆರೆಯಿಂದ ಬಿಡಿಸಿ, ವಿಭೀಷಣನಿಗೆ ಲಂಕೆಯಲ್ಲಿ ಪಟ್ಟಗಟ್ಟಿ, ಕೋಸಲರಾಜ್ಯವನ್ನು ಭರತನಿಗೆ ಒಪ್ಪಿಸಿ ಈ ದೇಹವನ್ನು ಬಿಡುತ್ತಿದ್ದೆ !"—ಎಂದು ಮರುಕದಿಂದ ಹೇಳಿದನು.

ಭಕ್ತಾಗ್ರಗಣ್ಯನೆನಿಸಿದ ಹನುಮಂತನು ಲಂಕೆಯಿಂದ ಬಂದು ಸೀತಾದೇವಿಯು ಕಳಿಸಿದ ಚೂಡಾಮಣಿಯನ್ನು ಶ್ರೀರಾಮನ ಕೈಗೆ ಅರ್ಪಿಸಿದ್ದಾನೆ. "ಹನುಮಂತನು ಸಾಧಿಸಿದ ಅದ್ಭುತವಾದ ಮಹಾಕಾರ್ಯಕ್ಕೆ ಸರಿದೂಗಬಲ್ಲ ಪಾರಿತೋಷಿಕವು ಯಾವುದಿದ್ದೀತು ? ಯಾವುದನ್ನಿತ್ತು ತನ್ನ ಕೃತಜ್ಞತೆಯನ್ನು ತೋರಿಸಲಿ"—ಎಂದು ಶ್ರೀರಾಮನಿಗೆ ಚಿಂತೆಯಾಯಿತು. ಪಾರಿತೋಷಿಕವನ್ನೀಯಲು ಶ್ರೀರಾಮನ ಬಳಿಯಲ್ಲೇನಿದೆ ?

ಏಷ ಸರ್ವಸ್ವಭೂತಸ್ತು ಪರಿಷ್ವಂಗೋ ಹನೂಮತಃ ।
ಮಯಾ ಕಾಲಮಿಮಂ ಪ್ರಾಪ್ಯ ದತ್ತಶ್ಚಾಸ್ತು ಮಹಾತ್ಮನಃ ॥
ಇತ್ಯುಕ್ತ್ವಾ ಪ್ರೀತಿಹೃಷ್ಟಾಂಗೋ ರಾಮಸ್ತಂ ಪರಿಷಸ್ವಜೇ ॥

(ಯುದ್ಧ. ೧—೧೪, ೧೫)

"ಈ ಸಮಯದಲ್ಲಿ ಆಲಿಂಗನ ಒಂದೇ ನಾನು ಕೊಡಬಹುದಾದ ನನ್ನ ಸರ್ವಸ್ವ. ಮಹಾತ್ಮನಾದ ಹನುಮಂತನಿಗೆ ಇದನ್ನು ಸಲ್ಲಿಸುತ್ತೇನೆ--ಎಂದು ಹೇಳುತ್ತ ಶ್ರೀರಾಮನು ಪ್ರೀತಿಯಿಂದ ಮೈಯುಬ್ಬಿ ಹನುಮಂತನನ್ನು ಅಪ್ಪಿಕೊಂಡನು."

ಶ್ರೀರಾಮನ ಆಲಿಂಗನಕ್ಕಿಂತ ಹೆಚ್ಚಿನ ಪಾರಿತೋಷಿಕ ಯಾವುದಿದ್ದೀತು! ಹನುಮಂತನು ಇನ್ನು ಯಾವುದನ್ನು ಬಯಸಿಯಾನು!

ಇಂದ್ರಜಿತು ಪ್ರಯೋಗಿಸಿದ ನಾಗಪಾಶಗಳಿಂದ ರಾಮಲಕ್ಷ್ಮಣರು ಮೂರ್ಛಿತರಾಗಿದ್ದಾಗ ಗರುಡನು ಬಂದು ಅವರನ್ನು ನಾಗಪಾಶಗಳಿಂದ ಬಿಡಿಸಿದನು. ಅವನು ಶ್ರೀರಾಮನೊಡನೆ ಸಂಭಾಷಿಸುತ್ತ,

ಸಖೇ ರಾಘವ ಧರ್ಮಜ್ಞ ರಿಪೂಣಾಮಪಿ ವತ್ಸಲ ॥

(ಯುದ್ಧ. ೫೦—೫೭)

ಎನ್ನುತ್ತಾನೆ. ರಾಘವನು ರಿಪುಗಳನ್ನೂ ವಾತ್ಸಲ್ಯದಿಂದ ಕಾಣತಕ್ಕವನು!

ಕೈಕೇಯಿ ಶ್ರೀರಾಮನ ವಿಷಯದಲ್ಲಿ ಅಷ್ಟು ಕಠೋರವಾಗಿ ನಡೆದುಕೊಂಡಳು. ಭರತನು ಶ್ರೀರಾಮನ ಬಳಿಗೆ ಬಂದಾಗ ಮತ್ತೆ ಮತ್ತೆ ತನ್ನ ತಾಯಿಯನ್ನು ದೂಷಿಸುತ್ತಲೇ ಇದ್ದನು. ಅದು ಶ್ರೀರಾಮನಿಗೆ ಸಹ್ಯವಾಗಲಿಲ್ಲ. ಅವನು ಕೈಕೇಯಿಯನ್ನು ಮೊದಲಿನಿಂದಲೂ ತಾಯಿಯೆಂದೇ ಗೌರವಿಸಿದ್ದನಲ್ಲದೆ ಮಲತಾಯಿಯೆಂದು ಎಳ್ಳಷ್ಟೂ ಅಲಕ್ಷಿಸಿದವನಲ್ಲ. ಅವನು ಭರತನಿಗೆ "ಭರತ, ತಾಯಿಯನ್ನು ಹೀಗೆ ಅವಿವೇಕದಿಂದ ದೂರಬೇಡ. ತಾಯಿ ತಂದೆಗಳಿಗೆ ಮಕ್ಕಳ ವಿಷಯದಲ್ಲಿ ಸರ್ವಾಧಿಕಾರ ಉಂಟು. ಅವರು ನನ್ನನ್ನು ರಾಜಪದವಿಯಲ್ಲಾದರೂ ಸ್ಥಾಪಿಸಬಹುದು, ಕಾಡಿಗಾದರೂ ಕಳಿಸಬಹುದು. ಅದು ಪ್ರಶ್ನಿಸತಕ್ಕ ವಿಷಯವಲ್ಲ"—ಎಂದುಬಿಟ್ಟನು. ಭರತನನ್ನು ಅಯೋಧ್ಯೆಗೆ ಕಳಿಸುತ್ತ,

ಮಾತರಂ ರಕ್ಷ ಕೈಕೇಯೀಂ ಮಾ ರೋಷಂ ಕುರು ತಾಂ ಪ್ರತಿ ।
ಮಯಾ ಚ ಸೀತಯಾ ಚೈವ ಶಪ್ತೋऽಸಿ ರಘುಸತ್ತಮ ॥

(ಅಯೋಧ್ಯಾ. ೧೧೨—೨೭, ೨೮)

"ಭರತ, ತಾಯಿಯಾದ ಕೈಕೇಯೀದೇವಿಯ ಯೋಗಕ್ಷೇಮಗಳನ್ನು ನೋಡಿಕೊ, ಅವಳಲ್ಲಿ ಸಿಟ್ಟು ತೋರಿಸಬೇಡ. ನನ್ನ ಆಣೆ, ಸೀತೆಯ ಆಣೆ"—ಎಂದು ಬುದ್ಧಿವಾದ ಹೇಳಿದನು.

ಶ್ರೀರಾಮನಿಗೆ ರಾವಣನಿಗಿಂತ ಮಹಾಶತ್ರುವಿನ್ನಾರು? ರಾವಣನು ಹತನಾದಾಗ ಅವನ ಸಂಸ್ಕಾರವನ್ನು ಮಾಡಲು ವಿಭೀಷಣನು ಹಿಂಜರಿದನು. ಆಗ ಶ್ರೀರಾಮ ಹೇಳುವ ಮಾತು ಮನನೀಯವಾದದ್ದು: "ಅಪ್ಪಾ—ವಿಭೀಷಣ, ಈ ರಾವಣನು ಅಧರ್ಮ ಅನೃತಗಳಲ್ಲಿ ಮುಳುಗಿದವನೇನೋ ಹೌದು. ಆದರೆ ಇವನು ಎಷ್ಟು ತೇಜಸ್ವಿಯಾಗಿ ಮೆರೆದವನು, ಎಂತಹ ಪರಾಕ್ರಮಿ! ಇವನು ಮಹಾತ್ಮನೇ ಸರಿ.

ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಮ್ ।
ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ ॥
(ಯುದ್ಧ. ೧೧೪—೧೦೧, ೧೦೨)

ಶತ್ರುವಿನ ಮರಣವಾದೊಡನೆ ವೈರವು ಕೊನೆಗಾಣುತ್ತದೆ. ನಮ್ಮ ಕಾರ್ಯವು ಸಿದ್ಧಿಸಿತು. ಈತನ ಸಂಸ್ಕಾರವನ್ನು ಮಾಡು. ಈತನು ನಿನಗೆ ಹೇಗೆ ಅಣ್ಣನೋ ನನಗೂ ಹಾಗೆಯೇ." ಎಂತಹ ಧೀರೋದಾತ್ತವಾದ ಗಂಭೀರವರ್ತನೆ! "ನೀನು ರಾವಣನ ಸಂಸ್ಕಾರಮಾಡದಿದ್ದರೆ ನಾನು ಮಾಡುತ್ತೇನೆ"—ಎಂಬುದು ಈ ಮಾತಿನ ಧ್ವನಿ.

ಇವೆಲ್ಲವೂ ಶ್ರೀರಾಮನ ಪ್ರೀತಿಯ ವಿವಿಧ ಪ್ರಕಾರಗಳು; ಕಾರುಣ್ಯದ ವಿವರ್ತಗಳು. ಆ ಮಹಾಪುರುಷನ ಪ್ರಸಿದ್ಧವಾದ ಉದ್ಘೋಷವಿದು:

ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।
ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ವ್ರತಂ ಮಮ ॥
(ಯುದ್ಧ. ೧೮—೩೩)

"ಯಾರಾದರೂ ಚಿಂತೆಯಿಲ್ಲ—ಒಂದು ಸಲ ನನಗೆ ಶರಣಾಗಿ 'ನಾನು ನಿನ್ನವನು' ಎಂದು ಹೇಳಿ ಬೇಡಿಕೊಂಡರೆ ಸಾಕು. ಅವನಿಗೆ ಯಾವ ಜೀವರಾಶಿಯಿಂದಲೂ ಕಷ್ಟವಾಗದಂತೆ ಅಭಯವನ್ನು ನೀಡಿಯೇ ತೀರುತ್ತೇನೆ. ಇದು ನನ್ನ ವ್ರತ."

ಅ ಮಿ ತ ಬ ಲ ಂ

ಈ ಅಂಶವನ್ನು ವಿಸ್ತರಿಸಬೇಕಾಗಿಲ್ಲ. ಶ್ರೀರಾಮನ ಬಲಪರಾಕ್ರಮಗಳು ಲೋಕವಿದಿತ. ಖರದೂಷಣ ತ್ರಿಶಿರರನ್ನೂ ಅವರ ಹದಿನಾಲ್ಕುಸಾವಿರ ಸೇನಾಬಲವನ್ನೂ ಅರ್ಧಾಧಿಕ ಮುಹೂರ್ತದಲ್ಲಿ ಏಕಾಕಿಯಾಗಿ ವಿಧ್ವಂಸಗೊಳಿಸಿದ ಕೀರ್ತಿ ಅವನದು. 'ರಾಮ ಎಂಬುದಿರಲಿ, ರತ್ನ ರಥ ಮುಂತಾದ ರೇಫಾದಿ ಶಬ್ದವನ್ನು ಕೇಳಿದರೆ ಕೂಡ ತನಗೆ ಭಯವಾಗುವುದು' ಎಂದು ಮಾರೀಚನು ಹೇಳುತ್ತಾನೆ. ಯಾರಿಗೂ ಅಳುಕದ ಶಿವಧನುಸ್ಸನ್ನು ಹಿಡಿದೆತ್ತಿ ಮುರಿದು ಜಾಮದಗ್ನ್ಯನ ಆಟೋಪವನ್ನು ಮೊಟಕುಗೊಳಿಸಿದ ವಿಖ್ಯಾತಿ ಬಾಲ್ಯದಲ್ಲಿಯೇ ಶ್ರೀರಾಮನಿಗೆ ಸಂದಿತ್ತು. ವಿಶ್ವಾಮಿತ್ರಮುನಿಗಳಿಂದ ನಿಖಿಲ ದಿವ್ಯಾಸ್ತ್ರಗಳೂ ಅವನ ವಶವಾಗಿದ್ದವು. ತಾನೊಬ್ಬನೇ ಸಕಲ ಪೃಥ್ವಿಯನ್ನು ಜಯಿಸಬಲ್ಲೆನೆಂಬ ಆತ್ಮವಿಶ್ವಾಸ ದೃಢವಾಗಿತ್ತು. ವನವಾಸದ ಆರಂಭದಲ್ಲಿ ಒಮ್ಮೆ ಅವನು ಸಂಕ್ಷುಬ್ಧನಾಗಿ ಲಕ್ಷ್ಮಣನಿಗೆ,

ಏಕೋ ಹ್ಯಹಮಯೋಧ್ಯಾಂ ಚ ಪೃಥಿವೀಂ ಚಾಪಿ ಲಕ್ಷ್ಮಣ ।
ತರೇಯಮಿಷುಭಿಃ ಕ್ರುದ್ಧೋ ನನು ವೀರ್ಯಮಕಾರಣಮ್ ॥
(ಅಯೋಧ್ಯಾ. ೫೩—೨೫)

"ನಾನು ಕ್ರುದ್ಧನಾದರೆ ಒಬ್ಬನೇ ಅಯೋಧ್ಯೆಯನ್ನೂ ಸಮಸ್ತ ಭೂಮಂಡಲವನ್ನೂ ಗೆಲ್ಲಬಲ್ಲೆ. ಈ ಬಾಣಗಳಿಂದ ಜಯಿಸಬಲ್ಲೆ. ಆದರೆ, ಪರಾಕ್ರಮವನ್ನು ಮೆರೆಸುವ ಸಂದರ್ಭವಿದಲ್ಲ, ಅದಕ್ಕೆ ಕಾರಣವಿಲ್ಲ"—ಎನ್ನುತ್ತಾನೆ.

ಒಮ್ಮೆ ಸುಗ್ರೀವನನ್ನು ಕುರಿತು,

ಅಂಗುಲ್ಯಗ್ರೇಣ ತಾನ್ ಹನ್ಯಾಮಿಚ್ಛನ್ ಹರಿಗಣೇಶ್ವರ ॥
(ಯುದ್ಧ. ೧೮—೨೪)

" ವಾನರೇಂದ್ರ, ನಾನು ಮನಸ್ಸು ಮಾಡಿದರೆ ಈ ಪೃಥ್ವಿಯಲ್ಲಿರುವ ಯಕ್ಷರಾಕ್ಷಸರೆಲ್ಲರನ್ನೂ ಒಂದು ಬೆರಳಿನಿಂದ ಕೊಂದೆಸೆದೇನು "—ಎಂದು ಹೇಳುತ್ತಾನೆ.

ಸಮುದ್ರರಾಜನು ಸಾವಕ್ಕೆ ಮಣಿಯದಾಗ—

ಚಾಪಮಾನಯ ಸೌಮಿತ್ರೇ ಶರಾಂಶ್ಚಾಶೀವಿಷೋಪಮಾನ್ ।
ಸಮುದ್ರಂ ಶೋಷಯಿಷ್ಯಾಮಿ ಪದ್ಭ್ಯಾಂ ಯಾಂತು ಪ್ಲವಂಗಮಾಃ ॥

(ಯುದ್ಧ. ೨೧—೨೨)

" ಲಕ್ಷ್ಮಣ, ನನ್ನ ಕೋದಂಡವನ್ನೂ ಘೋರಾಸ್ತ್ರಗಳನ್ನೂ ಇತ್ತ ತಾ. ಈ ಸಮುದ್ರವನ್ನು ಒಣಗಿಸಿಬಿಡುವೆನು. ವಾನರಸೇನೆಯು ಕಾಲ್ನಡಿಗೆಯಿಂದಲೇ ಸಮುದ್ರವನ್ನು ದಾಟಲಿ! "—ಎಂದು ಹೇಳಿ ಬ್ರಹ್ಮಾಸ್ತ್ರವನ್ನು ಹೂಡಿ ನಿಂತಾಗ ಸಮುದ್ರರಾಜನು ನಡುಗುತ್ತ ಕೈಜೋಡಿಸಿಕೊಂಡು ಬಂದನೆಂದು ವರ್ಣನೆ ಇದೆ.

ಶ್ರೀರಾಮನ ರಣಪಾಂಡಿತ್ಯವನ್ನು ಕಂಡು ವಾನರರು ಬೆಕ್ಕಸ ಬೆರಗಾದಾಗ–ಅವನು ಹಿಡಿದ ಧನುಸ್ಸು ಚಕ್ರಾಕಾರವಾಗಿ ಬಾಗಿ ಶರವೃಷ್ಟಿಯನ್ನು ಸುರಿಸುತ್ತಿರುವಾಗ—" ಇದೇನು ರಾಮಚಕ್ರವೋ ಕಾಲಚಕ್ರವೋ! " ಎಂದು ಸಮಸ್ತರೂ ದಿಗ್ಭ್ರಾಂತರಾದಾಗ,

ಏತದಸ್ತ್ರಬಲಂ ದಿವ್ಯಂ ಮಮ ವಾ ತ್ರ್ಯಂಬಕಸ್ಯ ವಾ ॥

" ಈ ದಿವ್ಯಾಸ್ತ್ರಬಲವು ನನಗೊಬ್ಬನಿಗುಂಟು. ಮುಕ್ಕಣ್ಣನಾದ ಈಶ್ವರನೊಬ್ಬನಿಗುಂಟು "—ಎನ್ನುತ್ತಾನೆ.

ಶಾಂತಮೂರ್ತಿಯಾಗಿ ದಿವ್ಯಸುಂದರವಿಗ್ರಹನಾದ ಶ್ರೀರಾಮನು ರಣರಂಗದಲ್ಲಿ ಪ್ರಳಯಭೈರವನಾಗುತ್ತಾನೆ. " ವಾನರರೆ, ಇನ್ನು ನೀವು ವಿಶ್ರಮಿಸಿಕೊಳ್ಳಿ. ರಾಮನಲ್ಲಿರುವ ರಾಮತ್ವವೆಂದರೇ ನೆಂಬುದನ್ನು ಈ ದಿನ ಜಗತ್ತು ನೋಡಲಿ! ಈ ದಿವಸ ಜಗತ್ತಿನಲ್ಲಿ ರಾಮನೊಬ್ಬನಿರಬೇಕು. ಇಲ್ಲವೆ, ರಾವಣನೊಬ್ಬನಿರಬೇಕು. ರಾಮರಾವಣರಿಬ್ಬರೂ ಒಟ್ಟಿಗೆ ಬದುಕಿರುವುದಿಲ್ಲ " ಎಂದು ಸಾರಿಹೇಳುತ್ತಾನೆ. ಮೂರು ಲೋಕಗಳನ್ನು ಜಯಿಸಿ ದರ್ಪೋದ್ಧತನಾದ ರಾವಣನು—" ಅಂಗುಲ್ಯಾ ನ ಹತೋ ರಾಮಃ " ಎಂದು ಹೇಳಿಕೊಂಡ ರಾವಣನು—" ಅಹೋ ನು ಬಲವಾನ್ ರಾಮಃ " ಎಂದು ಹೇಳಬೇಕಾದ ಕಾಲ ಬರುತ್ತದೆ.

ಧ ರ್ಮ ದೊ ಳ್ ಮಿ ಗಿ ಲ್ ರಾ ಮ ಚಂ ದ್ರಂ

ಇದುವರೆಗಿನ ಪ್ರಸ್ತಾವದಿಂದ ಶ್ರೀರಾಮನ ಧರ್ಮನಿಷ್ಠತೆಯನ್ನು ಕೆಲಮಟ್ಟಿಗೆ ಅವಲೋಕಿಸಿದಾಗಿದೆ. ವಾಲ್ಮೀಕಿಮುನಿಗಳು ಶ್ರೀರಾಮನ ಹೆಸರೆತ್ತಿದಾಗ ಸತ್ಯಪರಾಕ್ರಮಃ, ಧರ್ಮಜ್ಞಃ, ಧರ್ಮಭೃತಾಂ ವರಃ ಇತ್ಯಾದಿ ವಿಶೇಷಣಗಳನ್ನು ಬಳಸುತ್ತಲೇ ಇರುತ್ತಾರೆ. ಮನುಷ್ಯಕುಲಕ್ಕಾಗಿ ಒಬ್ಬ ಆದರ್ಶಪುರುಷನನ್ನು ಚಿತ್ರಿಸಬೇಕೆಂದು ಅವರು ಸಂಕಲ್ಪಿಸಿದಂತೆ ಇದೆ. ಅವರು—

ಲೋಕೇ ಪುರುಷಸಾರಜ್ಞಃ ಸಾಧುರೇಕೋ ವಿನಿರ್ಮಿತಃ ॥

" ಈ ಲೋಕದಲ್ಲಿ ಮನುಷ್ಯನ ಸಾರವತ್ತಾದ ಗುಣವಾವುದೆಂಬುದನ್ನು ಬಲ್ಲ ಸತ್ಪುರುಷನೊಬ್ಬನಿರಲೆಂದು ಬ್ರಹ್ಮನು ಶ್ರೀರಾಮನನ್ನು ಸೃಷ್ಟಿಸಿದ್ದನು " ಎಂದು ಹೇಳುತ್ತಾರೆ.

ಮನುಷ್ಯನ ಧರ್ಮಪರತೆಯನ್ನು ಮೂರು ಬಗೆಯಿಂದ ಅಳೆಯಬಹುದು. ಅವನ ಮನೋವ್ಯಾಪಾರದಿಂದ, ನುಡಿಯಿಂದ ಮತ್ತು ನಡೆಯಿಂದ. ಲೋಕದಲ್ಲಿ ಇನ್ನೊಬ್ಬರ ಮನೋವ್ಯಾಪಾರವನ್ನು ತಿಳಿಯುವುದು ಕಠಿಣವಾದರೂ ಕಾವ್ಯದಲ್ಲಿ ಕವಿಯ ಮಾತಿನಿಂದ ತಿಳಿಯಲಾಗುತ್ತದೆ.

ಶ್ರೀರಾಮನು ವನಕ್ಕೆ ಹೊರಡಬೇಕೆಂದೂ ತಡಮಾಡಬಾರದೆಂದೂ ಕೈಕೇಯಿಯು ಹೇಳಿದಾಗ, ಶ್ರೀರಾಮನು ಹೇಳುವ ಮಾತಿದು :

ನಾಹಮರ್ಥಪರೋ ದೇವಿ ಲೋಕಮಾವಸ್ತುಮುತ್ಸಹೇ ।
ವಿದ್ಧಿ ಮಾಮೃಷಿಭಿಸ್ತುಲ್ಯಂ ಕೇವಲಂ ಧರ್ಮಮಾಸ್ಥಿತಮ್ ॥

(ಅಯೋಧ್ಯಾ. ೧೯—೨೦)

"ದೇವಿ, ನಾನು ಐಶ್ವರ್ಯಕಾಮನೆಯಿಂದ ಈ ಲೋಕದಲ್ಲಿ ಜೀವನವನ್ನು ಸಾಗಿಸಲು ಬಯಸುತ್ತಿಲ್ಲ. ಋಷಿಗಳಂತೆ ನಾನು ಕೇವಲ ಧರ್ಮವನ್ನು ನಂಬಿದ್ದೇನೆಂದು ತಿಳಿದುಕೊ."

ಇದು ಆತ್ಮಪ್ರಶಂಸೆಯಲ್ಲ. ಮುಂದಿನ ರಾಮಚರಿತೆಯಲ್ಲಿ ಧರ್ಮನಿಷ್ಠತೆ ಅನುಸ್ಯೂತವಾಗಿದೆ. ತಂದೆತಾಯಿಗಳ ಇಚ್ಛೆಗೆ ತಲೆಬಾಗಿ ವನವಾಸಕ್ಕೆ ಹೊರಟನು. ದಶರಥನು ಕಾಮಾರ್ತನಾಗಿ ಹೆಂಡತಿಯ ಮಾತನ್ನು ಮೀರಲಾರದೆ ಈ ಸಂಕಟವನ್ನು ತಂದಿಟ್ಟನೆಂಬುದು ಸರಿಯಲ್ಲ. ಕೈಕೇಯಿಯಲ್ಲಿದ್ದ ಅವನ ಪ್ರೀತಿ ಮರುಕ್ಷಣದಿಂದ ದ್ವೇಷವಾಗಿ ಪರಿಣಮಿಸಿತು. ಕೊಟ್ಟಮಾತಿಗೆ ಪ್ರತಿಯಾಗಿ ಹೇಳಲಾರದ ದೊಡ್ಡ ಇಕ್ಕಟ್ಟಿನಲ್ಲಿ ಅವನು ಪೇಚಾಡುತ್ತಿದ್ದನು. ಈ ಪೇಚಿನಿಂದ ಅವನನ್ನು ಪಾರುಮಾಡುವುದೇ ಶ್ರೀರಾಮನ ಪರಮಧ್ಯೇಯವಾಗಿತ್ತು.

ಭರತನು ಚಿತ್ರಕೂಟಕ್ಕೆ ಬಂದು, ಶ್ರೀರಾಮನು ಅಯೋಧ್ಯೆಗೆ ಹಿಂತಿರುಗಬೇಕೆಂದು ಬೇಡಿಕೊಂಡು • ಸತ್ಯಾಗ್ರಹವನ್ನೇ ಹೂಡಿದನು. "ಸಾಂತ್ವಿತಾ ಮಾಮಿಕಾ ಮಾತಾ"—ನ ತಾಯಿಯನ್ನು ಸಮಾಧಾನಗೊಳಿಸಿದ್ದೇನೆ. ನೀನು ರಾಜನಾಗಲು ಅವಳು ಒಪ್ಪಿದ್ದಾಳೆ ಎಂ ಹೇಳಿದನು. ಅದಕ್ಕೆ ಸಾಕ್ಷಿಯಾಗಿ ಕೈಕೇಯಿಯೇ ಅಲ್ಲಿಗೆ ಬಂದಿದ್ದಳು ಆದರೆ ಶ್ರೀರಾಮನ ನಿಲು ಅಚಲ, "ಆಜ್ಞಾತಂ ಯನ್ಮಯಾ ತಸ್ಯ ನ ತನ್ಮಿಥ್ಯಾ ಭವಿಷ್ಯತಿ"—ತಂದೆಗೆ ನಾನು ಯಾವ ಮಾ ಕೊಟ್ಟೆನೋ ಅದು ಎಂದಿಗೂ ಸುಳ್ಳಾಗದು. "ರಾಮೋ ದ್ವಿರ್ನಾಭಿಭಾಷತೇ" !

ಹದಿನಾಲ್ಕು ವರ್ಷ ಕಳೆದ ಮೇಲೂ ಶ್ರೀರಾಮನ ಅಂತರಂಗ ಹೇಗಿತ್ತು ? ಒಂದು ವೇಳೆ ಭರತನಿಗೆ ರಾಜ್ಯಾಭಿಲಾಷೆ ಉಂಟಾಗಿದ್ದರೆ ?

ಸಂಗತ್ಯಾ ಭರತಃ ಶ್ರೀಮಾನ್ ರಾಜ್ಯಾರ್ಥೀ ಚೇತ್ ಸ್ವಯಂ ಭವೇತ್ ।
ಪ್ರಶಾಸ್ತು ವಸುಧಾಂ ಕೃತ್ಸ್ನಾಮಖಿಲಾಂ ರಘುನಂದನಃ ॥

(ಯುದ್ಧ. ೧೨೮–೧೫)

"ದೀರ್ಘಕಾಲದ ರಾಜ್ಯನಿರ್ವಹಣೆಯಿಂದ ಭರತನಿಗೆ ರಾಜ್ಯ ಬೇಕೆಂಬ ಇಚ್ಛೆಯಾಗಿ ಸಮಸ್ತ ಪೃಥ್ವಿಯನ್ನೂ ಆಳಲಿ !" ಎಂದು ಹೇಳಿದನು. "ರಘುನಂದನಃ" ಎಂಬು ಈ ಅರ್ಥಸ್ವಾರಸ್ಯ ಉಂಟು. ಭರತನೂ ನನ್ನಂತೆ ರಘುಕುಲೋತ್ಪನ್ನನಲ್ಲವೆ ? ಅವನು ಆದ್ರ್ಶನಾದ ರಾಜನಾಗಬಲ್ಲನು ಎಂಬ ಮನಃಶುದ್ಧಿ ಅಭಿವ್ಯಕ್ತವಾಗುತ್ತದೆ.

ವಾಲಿಯ ಕಿಷ್ಕಿಂಧೆಯಾಗಲಿ ರಾವಣನ ಲಂಕೆಯಾಗಲಿ ಶ್ರೀರಾಮನ ಭುಜಬಲಕ್ಕೆ ವಶವಾಗಿತ್ತು. ಆ ರಾಜ್ಯಗಳನ್ನು ಸುಗ್ರೀವ ವಿಭೀಷಣರಿಗೆ ವಹಿಸಿಕೊಟ್ಟನೇ ಹೊರತು ಕೋಸಲರಾಜ್ಯಕ್ಕೆ

ಸೇರಿಸಿಕೊಳ್ಳಲಿಲ್ಲ. ಅವಂಥಾಲ್ಕ ಆಸ್ತಿಯಾದ ಪುಷ್ಪಕವಿಮಾನವನ್ನು ಕುಬೇರನಿಗೆ ಹಿಂದಿರುಗಿಸಿದನೇ ಹೊರತು ತನ್ನ ವಶದಲ್ಲಿ ಇಟ್ಟುಕೊಳ್ಳಲಿಲ್ಲ. ಅದನ್ನು ವಿಭೀಷಣನಿಗೂ ಕೊಡಲಿಲ್ಲ.

ಶ್ರೀರಾಮನ ಶುದ್ಧಚಾರಿತ್ರದಲ್ಲಿಯೂ ಕಳಂಕದಂತೆ ಕಾಣುವ ಸಂದರ್ಭಗಳು ಎರಡು: ವಾಲಿವಧಪ್ರಸಂಗ ಒಂದು. ಸೀತಾದೇವಿಯ ಅಗ್ನಿಪ್ರವೇಶ ಮತ್ತು ಅವಳ ಪರಿತ್ಯಾಗಗಳ ಪ್ರಸಂಗ ಇನ್ನೊಂದು. ಈ ಸಂದರ್ಭಗಳನ್ನು ವಿದ್ವಾಂಸರು ವಿವಾದಕ್ಕೆ ಒಳಪಡಿಸಿದ್ದಾರೆ. ಈಗ ಇದರ ಪ್ರಸ್ತಾವ ಅತಿದೀರ್ಘವಾದೀತು.

ವಾಲಿಯನ್ನು ಮರೆಯಲ್ಲಿ ನಿಂತು ಸಂಹರಿಸಿದ್ದು ಸರಿಯೆ? ವಾಲಿಯು ಅಪರಾಧಿಯೆಂಬುದು ಸ್ಪಷ್ಟ. ಅಪರಾಧಿಗೆ ದಂಡವಿಧಾನ ಯುಕ್ತವೇ. ಸಾಧ್ಯವು ಧರ್ಮಶುದ್ಧವಾದಾಗ ಸಾಧನದಲ್ಲಿ ಒದಗಿದ ನ್ಯೂನತೆ ಸಹ್ಯವೆ? ಸಹ್ಯವಲ್ಲವೆ?

ಮತ್ತು ಶ್ರೀರಾಮನು ವಾಲಿಗೆ ಉತ್ತರಕೊಡುವಾಗ "ದಂಡೋऽಯಂ ಪ್ರತಿಪಾದಿತಃ" ನಿನಗೆ ಈ ಮರಣದಂಡನೆಯನ್ನು ವಿಧಿಸಿದ್ದೇನೆ ಎಂದು ಹೇಳುತ್ತಾನೆ. ನ್ಯಾಯಾಧಿಪತಿಯು ತಾನು ವಿಧಿಸಿದ ಮರಣದಂಡನೆಯನ್ನು, ಅಪರಾಧಿಯನ್ನು ಶೂಲಕ್ಕೇರಿಸಿಯೋ ನೇಣುಹಾಕಿಯೋ ಮತ್ತಿತರ ವಿಧಾನದಿಂದಲೋ ಕೃತಿಗಿಳಿಸುತ್ತಾನೆ. ಅದು ಧರ್ಮವೆಂದು ಜಗತ್ತು ಒಪ್ಪಿಕೊಂಡಿದೆ. ಶ್ರೀರಾಮನ ಪ್ರತ್ಯುತ್ತರವನ್ನು ವಾಲಿಯು ಸಾವಧಾನವಾಗಿ ಕೇಳಿ—

ನ ದೋಷಂ ರಾಘವೇ ದಧ್ಯೌ ಧರ್ಮೇऽಧಿಗತನಿಶ್ಚಯಃ ॥

(ಕಿಷ್ಕಿಂಧಾ. ೧೮—೪೭)

"ಧರ್ಮದ ಸ್ವರೂಪವನ್ನು ಸ್ಪಷ್ಟವಾಗಿ ತಿಳಿದುಕೊಂಡು, ಶ್ರೀರಾಮನಲ್ಲಿ ಯಾವ ತಪ್ಪನ್ನೂ ಎಣಿಸಲಿಲ್ಲ."

ಸೀತಾದೇವಿಗೊದಗಿದ ಕಷ್ಟವನ್ನು ಕೇಳಿ ಮರುಕ ಪಡದವರಾರು? ಆ ತಾಯಿಯ ಕರುಣ ಕಥೆಯನ್ನಾಲಿಸಿ ಕಣ್ಣೀರು ಹರಿಸದವರಾರು? ಶ್ರೀರಾಮನು ಅವಳಿಗಾಗಿ ಎಷ್ಟು ಪರಿತಪಿಸಲಿಲ್ಲ? ಕ್ಲಿಷ್ಟವಾದ ಸಮಸ್ಯೆಯೇನೆಂದರೆ, ರಾಜನಿಗೆ ಪ್ರಜೆಗಳು ಅಧರ್ಮಕ್ಕಿಳಿಯದಂತೆ ನೋಡಿಕೊಳ್ಳುವ ಕರ್ತವ್ಯ ಹೆಚ್ಚಿನದೆ? ತನ್ನ ಗೃಹಕೃತ್ಯ ಆತ್ಮಸೌಖ್ಯ ಹೆಚ್ಚಿನದೆ?

ಇವು ಧರ್ಮಸಂಕಟದ ಪ್ರಶ್ನೆಗಳು; ಧರ್ಮಸೂಕ್ಷ್ಮದ ಸಂದರ್ಭಗಳು; ಶ್ರೀರಾಮನೇ ಹೇಳುವಂತೆ—"ಸೂಕ್ಷ್ಮಃ ಪರಮದುರ್ಜ್ಞೇಯಃ ಸತಾಂ ಧರ್ಮಃ." ಇಂತಹ ಸಂದರ್ಭದಲ್ಲಿ ವೃದ್ಧರೂ ಆಚಾರ್ಯಸಂಮತರೂ ಆದ ಹಿರಿಯರಿಗೆ ಶರಣಾಗುವುದು ಲೇಸು. ಆದರೆ ನಾವು ಭಾವೋದ್ರಿಕ್ತರಾಗಿ ವಾಲ್ಮೀಕಿಗಳು ಕಾಣದ ಧರ್ಮಗತಿಯು ನಮಗೆ ತಿಳಿದಿದೆ ಎಂದುಕೊಳ್ಳುತ್ತೇವೆ. ಶ್ರೀರಾಮನಿಗೆ ಸೀತಾದೇವಿಯಲ್ಲಿಲ್ಲದ ಕಾರುಣ್ಯ, ವಾತ್ಸಲ್ಯ, ಪರಿತಾಪಗಳನ್ನು ನಮ್ಮಲ್ಲಿ ಆರೋಪಿಸಿಕೊಳ್ಳುತ್ತೇವೆ!

ಶ್ರೀರಾಮನು ಪಟ್ಟಾಭಿಷಿಕ್ತನಾದಮೇಲೆ—

ರಾಮೋ ರಾಮೋ ರಾಮ ಇತಿ ಪ್ರಜಾನಾಮಭವನ್ ಕಥಾಃ ।
ರಾಮಭೂತಂ ಜಗದಭೂತ್ ರಾಮೇ ರಾಜ್ಯಂ ಪ್ರಶಾಸತಿ ॥

(ಯುದ್ಧ. ೧೩೧—೧೦೨)

"ಪ್ರಜೆಗಳು ಎಲ್ಲಿ ನೋಡಿದರೂ ರಾಮಕಥೆಯನ್ನು—ರಾಮನಸುದ್ದಿಯನ್ನು ಹೇಳಿಕೊಳ್ಳುತ್ತಿದ್ದರು. ಎಲ್ಲೆಲ್ಲಿಯೂ ರಾಮ ರಾಮ ರಾಮ! ಅವನು ರಾಜ್ಯಭಾರವನ್ನು ನಡೆಸುತ್ತಿರಲು, ಜಗತ್ತು ರಾಮಮಯವಾಯಿತು"!

ಶ್ರೀರಾಮನು ಅವತಾರಿಪುರುಷನಾದರೂ ಮನುಷ್ಯಭಾವದಿಂದಲೇ ನಡೆದುಕೊಂಡಿದ್ದಾನೆ. ಮನುಷ್ಯಸಹಜವಾದ ಪರಿಶಿತಗಳನ್ನು ಜೀವನದಲ್ಲಿ ಅನುಭವಿಸಿದ್ದಾನೆ. ಅವನು ಮನುಷ್ಯನೆಂದು ಕೊಂಡರೆ, ರಾಮಾಯಣಕಾವ್ಯದ ಸೊಗಸು ಹೃದಯಕ್ಕೆ ಅರ್ಪಿತವಾಗಿ ಆಪ್ಯಾಯನವೆನಿಸುತ್ತದೆ; ಶ್ರೀರಾಮನ ಗುಣಗಳು ಸಜ್ಜನರಿಗೆ ಮಾರ್ಗದರ್ಶಕವಾಗಿ ಅನುಕರಣೀಯವಾಗುತ್ತವೆ. ಜೀವನ ಪಥದಲ್ಲಿ ದೇವತೆಯನ್ನು ಅನುಕರಿಸುವುದು ಸಾಧ್ಯವಲ್ಲ. ಶ್ರೀರಾಮನಲ್ಲಿ ಸಕಲಭಾವಗಳೂ ಧರ್ಮಕ್ಕೆ ಅವಿರುದ್ಧವಾಗಿ ಸೇರಿಕೊಂಡಿದ್ದವು.

ಶೃಂಗಾರಂ ಕ್ಷಿತಿನಂದಿನೀವಿಹರಣೇ ವೀರಂ ಧನುರ್ಭಂಜನೇ
ಕಾರುಣ್ಯಂ ಬಲಿಭೋಜನೇಽದ್ಭುತರಸಂ ಸಿಂಧೌ ಗಿರಿಸ್ಥಾಪನೇ ।
ಹಾಸ್ಯಂ ಶೂರ್ಪಣಖಾಮುಖೇ ಭಯಮಘೇ ಬೀಭತ್ಸಮನ್ಯಾಮುಖೇ
ರೌದ್ರಂ ರಾವಣಭಂಜನೇ ಮುನಿಜನೇ ಶಾಂತಂ ವಪುಃ ಪಾತು ನಃ ।

ಈ ಶ್ಲೋಕದ ಭಾವಾರ್ಥವು ಮಧುರವಾಗಿದೆ:

"ಜಾನಕಿಯೊಡನೆ ವಿಹರಿಸುವಾಗ ಶೃಂಗಾರ, ಶಿವಧನುಸ್ಸನ್ನು ಮುರಿಯುವಾಗ ವೀರ, ಕಾಕಾಸುರನ ವಿಷಯದಲ್ಲಿ ಕಾರುಣ್ಯ, ಸಮುದ್ರದಲ್ಲಿ ಬೆಟ್ಟಗಳನ್ನು ತೇಲಿಸಿ ಸೇತುವೆಯನ್ನು ಕಟ್ಟುವಾಗ ಅದ್ಭುತ, ಶೂರ್ಪಣಖಿಯ ಪ್ರಸಂಗದಲ್ಲಿ ಹಾಸ್ಯ, ಪಾಪಕಾರ್ಯದಲ್ಲಿ ಭಯ, ಪರಸ್ತ್ರೀವಿಷಯದಲ್ಲಿ ಬೀಭತ್ಸ, ರಾವಣನನ್ನು ಸಂಹರಿಸುವಾಗ ರೌದ್ರ, ಮುನಿಗಳ ಸಂನಿಧಿಯಲ್ಲಿ ಶಾಂತ—ಹೀಗೆ ನವರಸಗಳಿಗೆ ಆನಾದ ಶ್ರೀರಾಮಚಂದ್ರಮೂರ್ತಿಯು ನಮ್ಮನ್ನು ಕಾಪಾಡಲಿ."

ಶ್ರೀರಾಘವೋ ಧರ್ಮಮಯೋ ಮಹಾದ್ರುಮಃ
ಸ್ಕಂಧಃ ಸೌಮಿತ್ರಿರ್ಭರತಸ್ತು ಸ್ಯ ಶಾಖಾ ।
ಸೀತಾ ಪುಷ್ಪಂ ಪತ್ರಫಲೇ ಹನೂಮಾನ್
ಮೂಲಂ ವಾಲ್ಮೀಕಿಃ ಸಂಶ್ರಿತಃ ಸಜ್ಜನೌಘಃ ॥

ತನ್ನಯ ಮುಖದಾಕೃತಿಯಂ
ಕನ್ನಡಿಯೊಳ್ ಸಾಜಮಾಗಿ ಕಾಣುವ ತೆರದಿಂ ।
ಉನ್ನತರಾಘವಚರಿತದಿ
ತನ್ನಯ ಗುಣದೋಷದಿರವನರಿಯಲ್ ಬರ್ಕುಂ ॥

ಎನ್. ರಂಗನಾಥಶರ್ಮಾ

ಶ್ರೀಮದ್ರಾಮಾಯಣ ಮಹಾಭಾರತಾದಿ ಪ್ರಕಟನ ಸಮಿತಿ

ಬೆಂಗಳೂರು – ೪

ಶ್ರೀಚಾಮರಾಜೋಕ್ತಿವಿಲಾಸ ಕನ್ನಡ ರಾಮಾಯಣ

★

ಪ್ರಥಮ ಸಂಪುಟ :	ಹನ್ನೆರಡು ರೂಪಾಯಿ
ದ್ವಿತೀಯ ಸಂಪುಟ :	ಹನ್ನೆರಡು ರೂಪಾಯಿ
ಒಂದೇ ಸಂಪುಟದಲ್ಲಿ : (ಎರಡೂ ಸೇರಿ)	ಇಪ್ಪತ್ತು ರೂಪಾಯಿ

★

ಪುಸ್ತಕ ದೊರೆಯುವ ಸ್ಥಳ :—

ಎನ್. ಸುಬ್ಬರಾವ್, ಶ್ರೀ ವಾಣೀ ಸ್ಟೋರ್ಸ್,

E – 14, ಕಾಟನ್‌ಪೇಟೆ, ಬೆಂಗಳೂರು – 2

★

ಶ್ರೀಕೃಷ್ಣ ಹೊಸೈರಿ ಡಿಪೋ

ನಂ. 7, ಸಿಟಿಮಾರ್ಕೆಟ್, ಬೆಂಗಳೂರು – 2